ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 01 ಭಾನುವಾರ 2023

ಸಂಪುಟ: 43 | ಸಂಚಿಕೆ: 255 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನಮ್ಮ ಓದುಗರಿಗೆ...

ಹೊಸ ವರುಷದ ಶುಭಾಶಯಗಳು. 2023ನೇ ವರ್ಷ ಬಂದೇ ಬಿಟ್ಟಿದೆ. ಮುದ್ರಣ ಹಾಗೂ ಟಿವಿ ಮಾಧ್ಯಮಗಳು ಹೊಸ ವರ್ಷದ ಬಗ್ಗೆ ಭವಿಷ್ಯಗಳನ್ನು ಆಗಲೇ ಬರೆದಿವೆ, ಭಿತ್ತರಿಸಿವೆ.

ಅದೇನೇ ಇರಲಿ, ನಮ್ಮ ಭವಿಷ್ಯದ ಬಗ್ಗೆ ಯಾರಿಗೂ ಗೊತ್ತಿಲ್ಲ. ಮತ್ತು ಬರೆದಿದ್ದನ್ನು ಯಾರಿಂದಲೂ ತಿದ್ದಲೂ, ಬದಲಾಯಿಸಲೂ ಸಾಧ್ಯವಿಲ್ಲ. ನಮ್ಮೆಲ್ಲರ ಭವಿಷ್ಯ ಈಗಾಗಲೇ ಭಗವಂತನಿಂದ ನಿರ್ಧರಿಸಲ್ಪಟ್ಟಿದೆ. ಆದುದರಿಂದ, ಧೈರ್ಯದಿಂದ 'ಬಂದದ್ದೆಲ್ಲಾ ಬರಲಿ; ಭಗವಂತನ ದಯೆಯಿರಲಿ' ಎಂದು ನಿರ್ಧಾರ ಮಾಡಿ, ಏನೇ ಬಂದರೂ ಅದನ್ನು ಎದುರಿಸುವ ಶಕ್ತಿ ಕೊಡು ಭಗವಂತ ಎಂದು ಪ್ರಾರ್ಥಿಸೋಣ. ವಿಧಿಯ ಮುಂದೆ ನಾವೆಲ್ಲಾ ನಿಸ್ಸಹಾಯಕರು. ಆ ಕಾರಣಕ್ಕಾಗಿ ಮಹಾನ್ ಕವಿ, ತತ್ವಜ್ಞಾನಿ **ಉಮರ್ ಖಯ್ಯಾಮ್** ಅವರು ಬರೆದಿದ್ದ; **ಏನು ನಿನ್ನ ಹಣೆಯಲ್ಲಿ ಬರೆದಿದೆಯೋ ಅದರ ಒಂದಕ್ಷರವನ್ನು ನಿನ್ನ ಕಂಬನಿಯಾಗಲೀ, ಹಾಸ್ಯ ಪ್ರಜ್ಞೆಯಾಗಲೀ ತಿದ್ದಲು, ಅಳಿಸಲು ಸಾಧ್ಯವಿಲ್ಲ. ಅದು ನಿನ್ನ ವಿಧಿ.**

ಅದೇನೆ ಇರಲಿ, ನಮ್ಮ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಯವರು ಏಪ್ರಿಲ್ 21, 2013ರಲ್ಲಿ ಬರೆದ 'ಭೂಮಂತ್ರ' ಈ ಸಂದರ್ಭದಲ್ಲಿ ನಾವುಗಳು ನಮ್ಮ ಜೀವನದ ಬಗ್ಗೆ ಚಿಂತಿಸುವಂತೆ ಮಾಡಬಹುದು ಎಂದು ಭಾವಿಸಿ ಇಂದಿನ ಸಂಚಿಕೆಯ ಪುಟ 4ರಲ್ಲಿ ಪ್ರಕಟಿಸಲಾಗಿದೆ.

– ಸಂಪಾದಕ

ಹೊಸ ವರುಷದ ಹೊಂಬೆಳಕು...



/ಚಿತ್ರ: ಲಕ್ಷ್ಮಿನಾರಾಯಣ ಯಾದವ್



'ಮೈಸೂರು ಮಿತ್ರ'ನ 2023ನೇ ಸಾಲಿನ ವರ್ಣರಂಜಿತ ಕ್ಯಾಲೆಂಡರ್‌ನ್ನು ಪುಟ-5ರಲ್ಲಿ ನೀಡಲಾಗಿದೆ.

ಮೈಸೂರಲ್ಲಿ ಹೊಸ ವರ್ಷಕ್ಕೆ ಸಂಭ್ರಮದ ಸ್ವಾಗತ



ಮೈಸೂರು, ಡಿ.31(ಎಂಕೆ)– ಮಂಪರು ತರಿಸುವ ಪಾನಿಯಗಳ ಸವಿರುಚಿ, ಜಗಮಗಿಸುವ ಬೆಳಕಿನ ಚಿತ್ತಾರ, ಪುಳಕ ನೀಡುವ ಪಾಪ್ ಗಾಯನದ ಮೋಜು ಮಸ್ತಿಯೊಂದಿಗೆ ಹೊಸ ವರ್ಷಕ್ಕೆ ವರ್ಣರಂಜಿತ ಸ್ವಾಗತ ಕೋರಲಾಯಿತು.

ಕೊರೊನಾ ರೂಪಾಂತರಿ ಬಿ.ಎಫ್.7 ಆತಂಕ ಮರೆತು, 2022ರ ಸಿಹಿ–ಕಹಿ ನೆನಪುಗಳನ್ನು ಮೆಲುಕು ಹಾಕುತ್ತಾ 2023ನೇ ವರ್ಷವನ್ನು ಸಡಗರದಿಂದ ಸ್ವಾಗತಿಸಿದರು. ಪರಸ್ಪರ 'ಹ್ಯಾಪಿ ನ್ಯೂ ಇಯರ್' ಶುಭಾಷಯದ ಮೂಲಕ ಮುಂದಿನ ಒಂದು ವರ್ಷ ಹೊಸತನ, ಸಾಧನೆ, ಸಂತಸದಿಂದ ಕೂಡಿರಲಿ ಎಂದು ಶುಭ ಹಾರೈಸಿದರು. ಹೊಸ ವರ್ಷ ಸಂಭ್ರಮದ ವೇದಿಕೆಗಳಾಗಿದ್ದ ಹೋಟೆಲ್, ಪಬ್‌ಗಳಲ್ಲಿ ವಯ್ಯಾರದ ಉಡುಗೆ–ತೊಡುಗೆಗಳೊಂದಿಗೆ ಕಂಗೊಳಿಸುತ್ತಿದ್ದ ಪಾರ್ಟಿ ಪ್ರಿಯರು ಕುಣಿದು ಕುಪ್ಪಳಿಸಿದರು. ಮನರಂಜನೆಯ ಹಾಡು, ಮೋಜಿನಾಟಗಳಲ್ಲಿ ಮಿಂದೆದ್ದು, ಇಷ್ಟದ ಖಾದ್ಯಗಳನ್ನು ಸವಿದು ಸಂಭ್ರಮಿಸಿದರು. ▶ 9ನೇ ಪುಟಕ್ಕೆ

ಆಪರೇಷನ್ ಕಮಲವಾದರೂ ಸರಿ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರ ಹಿಡಿಬೇಕು

● ರಾಜ್ಯ ನಾಯಕರಿಗೆ ಅಮಿತ್ ಷಾ ಕಟ್ಟಾದೇಶ ● ನಮ್ಮದಲ್ಲದ ಕ್ಷೇತ್ರ ಗೆಲ್ಲಲು ಎಲ್ಲಾ ರೀತಿಯ ಪ್ರಯತ್ನ ಮಾಡಿ
● ನಮ್ಮ ನಂಬಿ ಬಂದವರಿಗೆ ಟಿಕೆಟ್, ಚುನಾವಣಾ ಖರ್ಚಿಗೆ ಹಣ, ಜೊತೆಗೆ ಮಂತ್ರಿ ಸ್ಥಾನವನ್ನೂ ಕಲ್ಪಿಸೋಣ

ಬೆಂಗಳೂರು, ಡಿ.31(ಕೆಎಂಶಿ)– ನಮ್ಮದಲ್ಲದ ವಿಧಾನ ಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಆಪರೇಷನ್ ಕಮಲ ಮಾಡಿಯಾದರೂ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತನ್ನಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯ ನಾಯಕರಿಗೆ ಕಟ್ಟಾದೇಶ ಮಾಡಿದ್ದಾರೆ.

ಹಳೇ ಮೈಸೂರು ಭಾಗದಲ್ಲಿ ನಮ್ಮ ಗುರಿ ಮುಟ್ಟಲು ಪಕ್ಷಕ್ಕೆ ಶಕ್ತಿ ಇಲ್ಲ ಎಂದು ಕೈ ಚೆಲ್ಲಿ ಕೂರಬೇಡಿ. ಅನ್ಯ ಪಕ್ಷಗಳಲ್ಲಿರುವ ವರ್ಚಸ್ವಿ ನಾಯಕರು, ಹಾಲಿ ಶಾಸಕರನ್ನು ಪಕ್ಷಕ್ಕೆ ಕರೆ ತಂದು ಗುರಿ ತಲುಪಿ. ನಮ್ಮ ನಂಬಿ ಬರುವವರನ್ನು ನಾನು ಕೈ ಬಿಡುವುದಿಲ್ಲ ಎಂಬ ಅಭಯ ನೀಡಿ. ನೀವು ನೀಡುವ ಭರವಸೆಗಳಿಗೆ ನಾನು ಹೊಣೆಯಾಗಿರುತ್ತೇನೆ. ಬಿ.ಎಸ್.ಯಡಿಯೂರಪ್ಪ ಸರ್ಕಾರ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ನಡೆದ ಆಪರೇಷನ್ ಕಮಲಕ್ಕೆ ಒಳಗಾಗದ ಎಲ್ಲರಿಗೂ ಒಂದಲ್ಲ ಒಂದು ಅಧಿಕಾರ ನೀಡಿದ್ದು, ಕೊಟ್ಟ ಭರವಸೆ ಈಡೇರಿಸಿದ್ದೇವೆ. ಇದನ್ನು ಬರುವವರಿಗೆ ಮನದಟ್ಟು ಮಾಡಿಕೊಟ್ಟು ಆಪರೇಷನ್ ಕಮಲ ಮಾಡಿ ಎಂಬ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ಅನ್ಯ ಪಕ್ಷದವರನ್ನು ಸೆಳೆಯಲು ಈಗಾಗಲೇ ನೀವು ಮಾಡಿಕೊಂಡಿರುವ ಸಿದ್ಧತೆ ಏನು? ಎಲ್ಲಿಯವರೆಗೂ ಯಾವ ರೀತಿ ತಯಾರಿ ನಡೆದಿದೆ ಎಂಬ ಮಾಹಿತಿ ನೀಡಿ ಎಂದು ಸೂಚಿಸಿದ್ದಾರೆ. ತಕ್ಷಣಕ್ಕೆ ಇದು ನಿಮ್ಮಿಂದ ಸಾಧ್ಯವಾಗಿಲ್ಲ ಎಂದರೆ ಮುಂದಿನ ದಿನಗಳಲ್ಲಿ ಆಪರೇಷನ್ ಕಮಲದ ಮೂಲಕ ಮುಖಂಡರನ್ನು ಕರೆ ತನ್ನಿ. ಅವರಿಗೆ ಚುನಾವಣಾ ಕಣಕ್ಕಿಳಿಯಲು ಅಗತ್ಯವಿರುವ ಪಕ್ಷದ ಟಿಕೆಟ್, ವೆಚ್ಚ, ಅದರಲ್ಲೂ ಕೆಲವರಿಗೆ ಮಂತ್ರಿ ಸ್ಥಾನ ನೀಡುವ ಭರವಸೆ ನೀಡಿ.



ಈ ನಿಟ್ಟಿನಲ್ಲಿ ಕೈಗೊಳ್ಳುವ ಎಲ್ಲಾ ಕಾರ್ಯಗಳ ಹಿಂದೆ ನಾನು ಇರುತ್ತೇನೆ. ಅವರ ಬಯಕೆ ಈಡೇರಿಸೋಣ. ಕನಿಷ್ಠ ನೀವು 35 ಸ್ಥಾನಗಳನ್ನು ಈ ಭಾಗದಲ್ಲಿ ಗೆಲ್ಲಲೇಬೇಕು. ಹಳೇ ಮೈಸೂರು ಭಾಗದಲ್ಲಿ ಜೆಡಿಎಸ್‌ನಲ್ಲಿರುವ ಮುಖಂಡರ ಸಂಪರ್ಕ ಬೆಳೆಸಿ. ಎಲ್ಲಿ ಕಾಂಗ್ರೆಸ್‌ನವರು ಅಗತ್ಯವಿದೆಯೋ ಅಂತಹ ಕಡೆ ಆ ಮುಖಂಡರನ್ನು ▶ 9ನೇ ಪುಟಕ್ಕೆ

ನಮ್ಮ ಬ್ಯಾಂಕುಗಳಿಗಾದ ಗತಿ ನಂದಿನಿಗೂ ಆಗಲಿದೆ!

ಬೆಂಗಳೂರು, ಡಿ.31–ಚಿನ್ನದ ಮೊಟ್ಟೆ ಇಡುವ ಕೋಳಿಯ ಮೇಲೆ ಈಗ ಗುಜರಾತ್ ಕಾರ್ಪೊರೇಟ್ ಕುಳಗಳ ಕಣ್ಣು ಬಿದ್ದಿದೆ. ಕನ್ನಡಿಗರು ಈಗಲೇ ಎಚ್ಚೆತ್ತುಕೊಂಡು, ವಿರೋಧ ತೋರ್ಪಡಿಸದಿದ್ದರೆ ನಮ್ಮ ನಾಡಿನ ಬ್ಯಾಂಕುಗಳಿಗಾದ ಗತಿಯೇ ನಂದಿನಿಗೂ ಆಗಲಿದೆ ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿರುವ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ (ಮನ್‌ಮುಲ್) ಆವರಣದಲ್ಲಿ ನಿರ್ಮಿಸಿರುವ ಮೆಗಾ ಡೇರಿಗೆ ಶುಕ್ರವಾರ ಚಾಲನೆ ನೀಡಿದ್ದ ಅಮಿತ್‌ಶಾ ಅವರು, ಗುಜರಾತ್ ಮತ್ತು ಕರ್ನಾಟಕದ ಹಾಲು ಒಕ್ಕೂಟಗಳನ್ನು ವಿಲೀನಗೊಳಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದರು.



ಗುಜರಾತ್‌ನಲ್ಲಿ ಸಹಕಾರ ಒಕ್ಕೂಟವು ಪ್ರಗತಿಯ ಹಾದಿಯಲ್ಲಿದೆ. ಹಾಗೆಯೇ 1975ರಿಂದಲೂ ಕೆಎಂಎಫ್ ಕೂಡ ಅಭಿವೃದ್ಧಿ ಹೊಂದುತ್ತಿದೆ. ಅಮುಲ್ ಹಾಗೂ ನಂದಿನಿ ಒಂದಾದರೆ ಕರ್ನಾಟಕದ ಹಾಲು ಉತ್ಪಾದಕರಿಗೆ ಇನ್ನಷ್ಟು ಅನುಕೂಲವಾಗುತ್ತದೆ ಎಂದಿದ್ದರು. ಅಮಿತ್ ಶಾ ಅವರ ಹೇಳಿಕೆ ಕುರಿತ ಮಾಧ್ಯಮ ವರದಿಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದು, ಅಮುಲ್–ನಂದಿನಿ ವಿಲೀನಕ್ಕೆ ನೆಟ್ಟಿಗರು ಆಕ್ಷೇಪ ▶ 7ನೇ ಪುಟಕ್ಕೆ

ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ, ನಿಮ್ಮ ವಿದ್ಯುತ್ ಬಿಲ್ ಪಾವತಿಸಿ

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನದಲ್ಲಿ ವಿದ್ಯುತ್ ಬಿಲ್ ಪಾವತಿ ಇನ್ನು ಬಲು ಸುಲಭ

ಮೈಸೂರು,ಡಿ.31(ಎಂಟಿವೈ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ವು ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು, ಹಾಸನ ಜಿಲ್ಲೆಗಳಲ್ಲಿ ವಿದ್ಯುತ್ ಶುಲ್ಕ ಪಾವತಿಗೆ ಸುಲಭ ಮಾರ್ಗ ಮಾಡಿಕೊಟ್ಟಿದೆ. ಇನ್ನು ಮುಂದೆ ಗ್ರಾಹಕರು ವಿದ್ಯುತ್ ಬಿಲ್‌ನಲ್ಲಿರುವ ಕ್ಯೂಆರ್–ಕೋಡ್ ಸ್ಕ್ಯಾನ್ ಮಾಡಿ ಮನೆಯಲ್ಲೇ ಕುಳಿತು ಸುಲಭವಾಗಿ ಪಾವತಿಸಬಹುದಾಗಿದೆ.

ರಾಜ್ಯದಲ್ಲಿರುವ ಆರು ವಿದ್ಯುತ್ ಸರಬರಾಜು ನಿಗಮಗಳಲ್ಲಿ, ಸೆಸ್ಕ್ ಮೊದಲ ಬಾರಿಗೆ ಕ್ಯೂಆರ್ ಕೋಡ್ ಸಿಸ್ಟಮ್ ಜಾರಿಗೊಳಿಸಿದ್ದು, ವಿದ್ಯುತ್ ಶುಲ್ಕ ಪಾವತಿಸಲು ಗ್ರಾಹಕರು ಇನ್ನು ಮುಂದೆ ಚೆಸ್ಕಾಂ ಕಚೇರಿಗೆ ಅಲೆಯುವ ಪ್ರಮೇಯವಿಲ್ಲ. 2023ರ ಜ.1ರಿಂದಲೇ ಚೆಸ್ಕಾಂ ವ್ಯಾಪ್ತಿಗೆ ಒಳಪಡುವ ಐದು ಜಿಲ್ಲೆಯ ಗ್ರಾಹಕರು ಕ್ಯೂಆರ್ ಕೋಡ್ ಮೂಲಕ ವಿದ್ಯುತ್ ಬಿಲ್ ಪಾವತಿಸಬಹುದಾಗಿದೆ. ಈ ಹೊಸ ಯೋಜನೆಗೆ ಇಂಧನ ಸಚಿವ ವಿ.ಸುನೀಲ್ ಕುಮಾರ್ ವಿಧ್ಯುಕ್ತವಾಗಿ ಚಾಲನೆ ನೀಡಿದ್ದು, ಕ್ಯೂಆರ್ ಕೋಡ್ ಮೂಲಕ ವಿದ್ಯುತ್ ಶುಲ್ಕ ಪಾವತಿಸುವ ಪ್ರಾಯೋಗಿಕವಾಗಿ ಪದ್ಧತಿ ಯಶಸ್ವಿಯಾಗಿದೆ. ಗ್ರಾಹಕರು ಹಾಗೂ ಚೆಸ್ಕಾಂಗೆ ಅನುಕೂಲಕಾರಿಯಾಗಿರುವ ಈ ಹೊಸ ವ್ಯವಸ್ಥೆಯನ್ನು ಸೆಸ್ಕ್, ಇಂಡಿಯನ್ ಬ್ಯಾಂಕ್ ನೆರವಿನೊಂದಿಗೆ ಜಾರಿಗೆ ತಂದಿದೆ. ಕ್ಯೂಆರ್ ಕೋಡ್‌ವುಳ್ಳ ಬಿಲ್ ಜನರೇಟ್ ಮಾಡಿದ್ದು, ಇನ್ನು ಮುಂದೆ ಪ್ರತಿ ಮನೆಗೂ ಜನವರಿಯಿಂದ ಕ್ಯೂಆರ್ ಕೋಡ್ ಇರುವ ಬಿಲ್ ನೀಡಲಾಗುತ್ತದೆ. ಗ್ರಾಹಕರು ಯುಪಿಐ ಪಾವತಿ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡು ▶ 9ನೇ ಪುಟಕ್ಕೆ



ರೂಪೇಶ್ ಶೆಟ್ಟಿ 'ಬಿಗ್‌ಬಾಸ್'

ಬೆಂಗಳೂರು, ಡಿ.31– ಬಿಗ್‌ಬಾಸ್ 9ನೇ ಆವೃತ್ತಿ ವಿನ್ನರ್ ಆಗಿ ತುಳುಚಿತ್ರ ಗಿರ್‌ಗಿಟ್ ಖ್ಯಾತಿಯ ನಟ ರೂಪೇಶ್ ಶೆಟ್ಟಿ ಹೊರಹೊಮ್ಮಿದ್ದಾರೆ. ಆ ಮೂಲಕ ಬಿಗ್‌ಬಾಸ್ ಟ್ರೋಫಿಯೊಂದಿಗೆ 60 ಲಕ್ಷ ರೂ.ಗಳನ್ನು ತನ್ನದಾಗಿಸಿಕೊಂಡಿದ್ದಾರೆ. ಮತ್ತೊಂದೆಡೆ ರಾಕೇಶ್ ಅಡಿಗ ರನ್ನರ್ ಅಪ್ ಆಗಿ 2ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. 9ನೇ ಆವೃತ್ತಿಯಲ್ಲಿ ಓಟಿಟಿಯಲ್ಲಿ ಮೊದಲ 4 ಸ್ಥಾನ ಪಡೆದ ರೂಪೇಶ್ ಶೆಟ್ಟಿ, ರಾಕೇಶ್ ಅಡಿಗ, ಆರ್ಯವರ್ಧನ್ ಗೂರೂಜಿ, ಸಾನಿಯಾ ಅಯ್ಯರ್ ಸೇರಿದಂತೆ ವಿನೋದ್ ಗೊಬ್ಬರಗಾಲ, ನವಾಜ್, ದರ್ಶ ಚಂದ್ರಪ್ಪ, ಐಶ್ವರ್ಯ ಪಿಸ್ಸೆ ಮಯೂರಿ, ಕಾವ್ಯಶ್ರೀ ಗೌಡ, ಅರುಣ್ ಸಾಗರ್, ಅಮೂಲ್ಯ ಗೌಡ, ನೇಹ ಗೌಡ, ದೀಪಿಕಾ ದಾಸ್, ಅನುಪಮ ಗೌಡ, ರೂಪೇಶ್ ರಾಜಣ್ಣ, ಪ್ರಶಂತ್ ಸಂಬರಗಿ, ದಿವ್ಯಾ ಉರುಡುಗ ಬಿಗ್‌ಬಾಸ್ ಮನೆ ಪ್ರವೇಶಿಸಿದ್ದರು. ಅಂತಿಮವಾಗಿ ದೀಪಿಕಾ ದಾಸ್, ರಾಕೇಶ್ ಅಡಿಗ, ದಿವ್ಯಾ ಉರುಡುಗ, ರೂಪೇಶ್ ಶೆಟ್ಟಿ ಹಾಗೂ ರೂಪೇಶ್ ರಾಜಣ್ಣ ಫೈನಲ್ ಪ್ರವೇಶಿಸಿದ್ದರು. ಶನಿವಾರ ನಡೆದ ಫೈನಲ್‌ನಲ್ಲಿ ರೂಪೇಶ್ ಶೆಟ್ಟಿ ವಿಜೇತರಾಗಿದ್ದಾರೆ.



ಕಳೆದ ವರ್ಷ 320 ಪ್ರಕರಣಗಳಲ್ಲಿ 346 ಮಂದಿ ಬಂಧನ

3.55 ಕೋಟಿ ಮೌಲ್ಯದ ಪದಾರ್ಥಗಳು ವಶಕ್ಕೆ

539 ಡಿಎಲ್ ಅಮಾನತಿಗೆ ಆರ್‌ಟಿಓಗೆ ಪತ್ರ

ಅಪರಾಧ ನಿಯಂತ್ರಣ ಹಾಗೂ ಸಂಚಾರ ನಿಯಮ ಕಟ್ಟುನಿಟ್ಟಿನ ಜಾರಿಗಾಗಿ ಕಾನೂನು–ಸುವ್ಯವಸ್ಥೆ ಮತ್ತು ಸಂಚಾರ ಪೊಲೀಸರು ಜಂಟಿಯಾಗಿ ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸುತ್ತಿದ್ದು, ಅನುಮಾನಾಸ್ಪದವಾಗಿ ಕಂಡು ಬಂದ ವ್ಯಕ್ತಿಗಳನ್ನು ಸ್ಥಳದಲ್ಲೇ ಕೂಲಂಕಷವಾಗಿ ವಿಚಾರಣೆಗೊಳಪಡಿಸಿ, ವಾಹನಗಳ ದಾಖಲಾತಿ ಪರಿಶೀಲಿಸಲಾಗುತ್ತಿದೆ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ಮೋಟಾರು ಕಾಯಿದೆಯಡಿ ಪ್ರಕರಣ ದಾಖಲಿಸುವುದರ ಜೊತೆಗೆ ಡ್ರೈವಿಂಗ್ ಲೈಸೆನ್ಸ್ ಅಮಾನತುಪಡಿಸಲು ಆರ್‌ಟಿಓಗಳೊಂದಿಗೆ ಪತ್ರ ವ್ಯವಹಾರ ಮಾಡಲಾಗುತ್ತಿದೆ. ಕಳೆದ ವರ್ಷ ಒಟ್ಟು 539 ಡ್ರೈವಿಂಗ್ ಲೈಸೆನ್ಸ್ ಅಮಾನತಿಗೆ ಆರ್‌ಟಿಓಗೆ ಪತ್ರ ಬರೆಯಲಾಗಿದೆ ಎಂದರು.

● ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್‌ರಿಂದ ಅಪರಾಧಗಳ ಮಾಹಿತಿ
● ಡಯಲ್–112 ಗಸ್ತು ವಾಹನಗಳು ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಸದಾ ಗಸ್ತಿನಲ್ಲಿರುತ್ತವೆ



ಮೈಸೂರು, ಡಿ.31–ಕಳೆದ ವರ್ಷ (2022) 753 ವಿವಿಧ ಕಳವು ಪ್ರಕರಣಗಳು ದಾಖಲಾಗಿದ್ದು, ಅವುಗಳ ಪೈಕಿ 320 ಪ್ರಕರಣಗಳನ್ನು ಪತ್ತೆ ಮಾಡಿ, 346 ಆರೋಪಿಗಳನ್ನು ಬಂಧಿಸಲಾಗಿದೆ. ಅಲ್ಲದೇ ಕಳುವಾದ 6.34 ಕೋಟಿ ರೂ. ಮೌಲ್ಯದ ವಸ್ತುಗಳ ಪೈಕಿ 3.55 ಕೋಟಿ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದರು.

ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಚಿನ್ನ, ಬೆಳ್ಳಿ ಆಭರಣ, ವಾಹನಗಳು ಹಾಗೂ ಇತರ ಪದಾರ್ಥಗಳನ್ನು ಶನಿವಾರ ತಮ್ಮ ಕಚೇರಿಯಲ್ಲಿ ವಾರಸುದಾರರಿಗೆ ಹಿಂತಿರುಗಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಸಾಲಿನಲ್ಲಿ 4.600 ಗ್ರಾಂ ಚಿನ್ನಾಭರಣ, 16.900 ಗ್ರಾಂ ಬೆಳ್ಳಿ ಪದಾರ್ಥ, 184 ದ್ವಿಚಕ್ರ ವಾಹನ, 4 ಕಾರು, 15 ತ್ರಿಚಕ್ರ ವಾಹನ, 106 ಮೊಬೈಲ್, 18 ಲ್ಯಾಪ್‌ಟಾಪ್ ಮತ್ತು 20,97,700 ರೂ. ನಗದು ಮಾತ್ರವಲ್ಲದೆ, ಗೃಹೋಪಯೋಗಿ ಹಾಗೂ ಕೈಗಾರಿಕೋಪಯೋಗಿ ವಸ್ತುಗಳನ್ನು ಖದೀಮರಿಂದ ವಶಪಡಿಸಿಕೊಂಡಿದ್ದು, ಅದರ ವಾರಸುದಾರರಿಗೆ ಹಿಂತಿರುಗಿಸಲಾಗಿದೆ ಎಂದು ಹೇಳಿದರು.

ಮಾದಕ ವಸ್ತು ಮಾರಾಟದಲ್ಲಿ 61 ಮಂದಿ ಬಂಧನ: ಕಳೆದ ವರ್ಷ 33 ಮಾದಕ ದ್ರವ್ಯ ಮಾರಾಟ ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳಲ್ಲಿ 61 ಮಂದಿಯನ್ನು ಬಂಧಿಸಿ, 91.532 ಕೆ.ಜಿ. ಗಾಂಜಾ, 58.20 ಗ್ರಾಂ ಎಂಡಿಎಂಎ ಮಾದಕ ದ್ರವ್ಯ, 383 ಗ್ರಾಂ ಚೆರಸ್, 50 ಗ್ರಾಂ ಎಲ್‌ಎಸ್‌ಡಿ, 3.17 ಗ್ರಾಂ ಎಕ್ಸ್‌ಟೇಸಿ ಮಾದಕ ಮಾತ್ರೆ ವಶಪಡಿಸಿಕೊಂಡಿದ್ದು, ಇದರ ಮೌಲ್ಯ ಸುಮಾರು 22.30 ಲಕ್ಷವಾಗುತ್ತದೆ ಎಂದು ಹೇಳಿದರು.


ಅಪರಾಧ ತಡೆಗೆ ಕಟ್ಟುನಿಟ್ಟಿನ ಕ್ರಮ: ಮೈಸೂರು ನಗರದಲ್ಲಿ ಅಪರಾಧ ಕೃತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಹಗಲಿನಲ್ಲಿ ಪ್ರತಿ ಠಾಣಾ ವ್ಯಾಪ್ತಿಯ ಪ್ರಮುಖ ಸ್ಥಳಗಳು, ಜನಸಂದಣಿ ಹೆಚ್ಚಾಗಿರುವ ಸ್ಥಳದಲ್ಲಿ ಕಡ್ಡಾಯವಾಗಿ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ರಾತ್ರಿ ಗಸ್ತನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವ ಸಲುವಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ರಾತ್ರಿ ಗಸ್ತಿನ ಮೇಲುಸ್ತುವಾರಿ ವಹಿಸುತ್ತಿದ್ದಾರೆ. ರಾತ್ರಿ ಗಸ್ತು ಅಧಿಕಾರಿಗಳು, ಡಯಲ್–112 ಗಸ್ತು ವಾಹನಗಳು ನಿರಂತರವಾಗಿ ರಾತ್ರಿ ಗಸ್ತಿನಲ್ಲಿರುವಂತೆ ಸೂಚಿಸಲಾಗಿದೆ. ರಾತ್ರಿ ಸಮಯದಲ್ಲೂ ನಗರದಲ್ಲಿ ಪೊಲೀಸರ ವಿಸಿಬಿಲಿಟಿಗೆ ಹೆಚ್ಚು ▶ 7ನೇ ಪುಟಕ್ಕೆ



ಮೈಸೂರಿನ ಜ್ವಾಲಾಮುಖಿ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದಿಂದ ವರನಟ ಡಾ.ರಾಜಕುಮಾರ್ ಹಾಗೂ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಭಾವಚಿತ್ರವುಳ್ಳ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಘೋಸ್ಟ್ ಚಿತ್ರದ ಚಿತ್ರೀಕರಣಕ್ಕೆ ಮೈಸೂರಿಗೆ ಆಗಮಿಸಿದ್ದ ನಟ ಡಾ.ಶಿವರಾಜ್‌ಕುಮಾರ್ ಬಿಡುಗಡೆಗೊಳಿಸಿದರು. ಈ ವೇಳೆ ಉದ್ಯಮಿ, ಚಿತ್ರ ನಿರ್ಮಾಪಕ ಎನ್.ಸಂದೇಶ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಮೈಸೂರು, ಡಿ.31 (ಆರ್‌ಕೆಬಿ)–ಮೈಸೂರು ಜಿಲ್ಲಾ 3ನೇ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಜ.1ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಸಮಿತಿ ಅಧ್ಯಕ್ಷ ಕೆಂಪರಾಜು ವಿಶ್ವಕರ್ಮ ತಿಳಿಸಿದರು.



ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಾಸ್ತುಶಿಲ್ಪಕ್ಕೆ ಅಮೋಘ ಕೊಡುಗೆ ನೀಡಿದ ವಿಶ್ವಕರ್ಮ ಸಮುದಾಯ, ದೈವಶಿಲ್ಪಿ ಜಕಣಾಚಾರಿಯವರು ಬೇಲೂರು, ಹಳೇಬೀಡು, ಚೆನ್ನಕೇಶವ ದೇವಾಲಯದಂತಹ ಹತ್ತಾರು ಶಿಲ್ಪಕಲೆ ವೈಭವ ಸಾರುವ ದೇವಸ್ಥಾನಗಳನ್ನು ನಿರ್ಮಿಸಿಕೊಟ್ಟರು. ಹೀಗಾಗಿ ಸರ್ಕಾರ ಘೋಷಿಸಿರುವ ಜಕಣಾಚಾರಿ ಸಂಸ್ಮರಣೆ ದಿನ ಆಚರಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ ಸಮುದಾಯದ ಹೆಚ್ಚು ಜನ ಮಾಸ್ಕ್ ಧರಿಸಿ ಭಾಗವಹಿಸುವಂತೆ ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ತನ್ವೀರ್‌ಶೇಠ್, ಮೇಯರ್ ಶಿವಕುಮಾರ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಸಮಿತಿ ಸದಸ್ಯರಾದ ಪುಟ್ಟಸ್ವಾಮಾಚಾರ್, ಮಂಜು, ಸುರೇಶ್ ಗೋಲ್ಡ್, ಹಿನಕಲ್ ಮಹೇಶ್, ಶಿವು ಉಪಸ್ಥಿತರಿದ್ದರು.



ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡರು ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬೆಂಗಳೂರಲ್ಲಿ ಬಿಡುಗಡೆಗೊಳಿಸಿದರು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಡಿ.31– ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2022–23 ನೇ ಸಾಲಿಗೆ ಸಂಬಂಧಿಸಿದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ– ಊಟ ಮತ್ತು ವಸತಿ ಯೋಜನೆ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಡಿ.31 ಕೊನೆಯ ದಿನಾಂಕವಾಗಿ ಆದರೆ, ಜ.30ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://ssp.postmatric.karnataka.gov.in ಅಥವಾ https://bcwd.karnataka.gov.in ಹಾಗೂ ದೂ.ಸಂಖ್ಯೆ: 8050770005, ರಾಜ್ಯ ವಿದ್ಯಾರ್ಥಿವೇತನದ ತಂತ್ರಾಂಶ ಸಹಾಯವಾಣಿ 080–35254757 ಸಂಪರ್ಕಿಸಬಹುದು.

ನಾಳೆ, ನಾಡಿದ್ದು ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು,ಡಿ.31– ತುರ್ತು ಕಾಮಗಾರಿ ನಿಮಿತ್ತ ಜ.2 ಮತ್ತು 3ರಂದು ಸಿಎಸ್‌ಆರ್ ಮತ್ತು ಹೆಚ್‌ಎಲ್‌ಆರ್ ಪ್ರಾಂತ್ಯಗಳಿಗೆ, ವಾರ್ಡ್ ನಂ.1ರಿಂದ 7, ವಾರ್ಡ್ ನಂ.20, 23, 38 ವಾರ್ಡ್ ನಂ.42ರಿಂದ 45, ವಾರ್ಡ್ ನಂ.47 ಇದಕ್ಕೆ ಸಂಬಂಧಪಟ್ಟ ಡಿಎಂಎ ಪ್ರದೇಶಗಳಾದ ಹೆಬ್ಬಾಳ, ಕುಂಬಾರಕೊಪ್ಪಲು, ಮಂಚೇಗೌಡನಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎಬಿಸಿ ಲೇಔಟ್, ಈರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್ ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ವಾಣಿವಿಲಾಸ ವಾಟರ್ ವರ್ಕ್ಸ್ ಪ್ರಕಟಣೆ ತಿಳಿಸಿದೆ.



ಮೈಸೂರು ಪತ್ರಕರ್ತರ ಸಂಘದ 2023ನೇ ಸಾಲಿನ ಡೈರಿ, ಕ್ಯಾಲೆಂಡರ್ ಬಿಡುಗಡೆ

ಆನ್‌ಲೈನ್‌ನಲ್ಲಿ ತ್ವರಿತ ನಾಗರಿಕ ಸೇವೆ ಕಲ್ಪಿಸಲು ಇನ್ಫೋಸಿಸ್ ಸಹಯೋಗದಲ್ಲಿ ನಗರಪಾಲಿಕೆ ಆಡಳಿತದಲ್ಲಿ ಸುಧಾರಣೆ

• ಸಿದ್ಧಾರ್ಥ ಗ್ರೂಪ್ ಅಧ್ಯಕ್ಷ ಪಿ.ವಿ.ಗಿರಿ ಸಲಹೆಗೆ ಮೇಯರ್ ಶಿವಕುಮಾರ್ ಸ್ಪಂದನೆ

ಮೈಸೂರು,ಡಿ.31(ಪಿಎಂ)–ಇನ್ಫೋಸಿಸ್ ಸಹಯೋಗದೊಂದಿಗೆ ನಾಗರಿಕ ಸೇವೆಗಳನ್ನು ತ್ವರಿತ ಮತ್ತು ಸಮರ್ಪಕ ರೀತಿಯಲ್ಲಿ ಆನ್‌ಲೈನ್ ಮೂಲಕ ಒದಗಿಸಲು ಮಹಾನಗರಪಾಲಿಕೆ ಆಡಳಿತದಲ್ಲಿ ಮಹತ್ವದ ಸುಧಾರಣೆ ತರುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆಸಲಾಗುತ್ತಿದೆ ಎಂದು ಮೇಯರ್ ಶಿವಕುಮಾರ್ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2023ನೇ ಸಾಲಿನ ಡೈರಿ ಹಾಗೂ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು, ಸಿದ್ಧಾರ್ಥ ಗ್ರೂಪ್ ಅಧ್ಯಕ್ಷ ಪಿ.ವಿ.ಗಿರಿಯವರ ಸಲಹೆಗೆ ಸ್ಪಂದಿಸಿ ಅವರು ಮಾತನಾಡಿದರು.

ಪಿ.ವಿ.ಗಿರಿಯವರು ಹೇಳಿದಂತೆ ಇನ್ಫೋಸಿಸ್ ಸಹಾಯ ಪಡೆದು ನಾಗರಿಕರ ಸೇವೆಗಳ ಸಂಬಂಧ ಆಡಳಿತದಲ್ಲಿ ಸುಧಾರಣೆ ತರುವ ಡಿಜಿಟಲ್ ತಂತ್ರಜ್ಞಾನ ಅಳವಡಿಕೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈಗಾಗಲೇ ಟ್ರೇಡ್ ಲೈಸನ್ಸ್, ಪ್ರಾಪರ್ಟಿ ಟ್ಯಾಕ್ಸ್ ಪಾವತಿಗೆ ಆನ್‌ಲೈನ್ ಸೌಲಭ್ಯ ಕಲ್ಪಿಸಲಾಗಿದೆ. ಇನ್ನಷ್ಟು ಪರಿಣಾಮಕಾರಿ ಸುಧಾರಣೆ ತರುವ ನಿಟ್ಟಿನಲ್ಲಿ ಪಿ.ವಿ.ಗಿರಿಯವರ ಸಲಹೆಯಂತೆ ಇನ್ಫೋಸಿಸ್ ಡಾ.ಸುಧಾಮೂರ್ತಿ ಅವರ ಜೊತೆಗೆ ಸಮಾಲೋಚಿಸಲಾಗುವುದು ಎಂದು ತಿಳಿಸಿದರು.

ಸಮಾಜದ ಅಂಕು–ಡೊಂಕು ತಿದ್ದುವ ಪತ್ರಕರ್ತರು ಸಾಕಷ್ಟು ಒತ್ತಡದಲ್ಲಿ ಕೆಲಸ ಮಾಡುತ್ತಾರೆ. ಮೈಸೂರಿನ ಪತ್ರಕರ್ತರನ್ನು ಹಲವು ವರ್ಷಗಳಿಂದ ನೋಡುತ್ತಿದ್ದು, ಆಡಳಿತ ಅಥವಾ ವಿರೋಧ ಪಕ್ಷವಿರಲಿ, ಪಕ್ಷಾತೀತವಾಗಿ ವಸ್ತುನಿಷ್ಠ ವರದಿ ಮಾಡುವುದನ್ನು ಕಂಡಿದ್ದೇನೆ. ಮೈಸೂರಿನ ಪತ್ರಕರ್ತರ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಹಲವು ನಿದರ್ಶನಗಳಿವೆ ಎಂದು ಪ್ರಶಂಸಿಸಿದರು.

ಪತ್ರಕರ್ತರ ಆರೋಗ್ಯ ನಿಧಿಗೆ 50 ಲಕ್ಷ ಮೀಸಲು: ಪತ್ರಕರ್ತರ ಸಂಘದ ಕೋರಿಕೆಯಂತೆ ಪಾಲಿಕೆಯ ಕಳೆದ ಬಜೆಟ್‌ನಲ್ಲಿ ಪತ್ರಕರ್ತರಿಗಾಗಿ ಆರೋಗ್ಯ ನಿಧಿಗೆಂದು 25 ಲಕ್ಷ ರೂ. ಮೀಸಲಿಡಲಾಗಿತ್ತು. ಪ್ರಸಕ್ತ ಸಾಲಿನ ಪಾಲಿಕೆ ಬಜೆಟ್‌ನಲ್ಲಿ ಇದನ್ನು 50 ಲಕ್ಷ ರೂ.ಗೆ ಹೆಚ್ಚಿಸಬೇಕೆಂಬ ತಮ್ಮ ಬೇಡಿಕೆಯಂತೆ ಕ್ರಮ ವಹಿಸಲಾಗುವುದು ಎಂದು ಮೇಯರ್ ಭರವಸೆ ನೀಡಿದರು.

ಆನ್‌ಲೈನ್ ವ್ಯವಸ್ಥೆಗೆ ಆದ್ಯತೆ ನೀಡಿ: ಇದಕ್ಕೂ ಮುನ್ನ ಮಾತನಾಡಿದ ಪಿ.ವಿ.ಗಿರಿಯವರು, ನಾನು ಮೈಸೂರಿಗೆ 1980ರಲ್ಲಿ ಬಂದೆ. ಅಂದಿನಿಂದ 2005ರವರೆಗೆ ಶೇ.80ರಷ್ಟು ಸಮಯವನ್ನು ನನ್ನ ಉದ್ಯಮದ ವಹಿವಾಟಿಗೆ ವಿನಿಯೋಗಿಸಿದರೆ, ಶೇ.20ರಷ್ಟು ಸಮಯವನ್ನು ಉದ್ಯಮ ಸಂಬಂಧ ಪಾಲಿಕೆ ಸೇರಿದಂತೆ ಸರ್ಕಾರದ ವಿವಿಧ ಏಜೆನ್ಸಿಗಳೊಂದಿಗೆ ಕಳೆಯಬೇಕಿತ್ತು. ಇದು ಪ್ರಸ್ತುತ ಶೇ.60ರಷ್ಟು ಸಮಯಕ್ಕೆ ಹೆಚ್ಚಳಗೊಂಡಿದ್ದರೆ, ಉದ್ಯಮದ ವ್ಯವಹಾರಕ್ಕೆ ಶೇ.40ರಷ್ಟು ಸಮಯ ಮೀಸಲಿರಿಸಬೇಕಿದೆ. ಹಾಗಾಗಿ ಮಹಾನಗರ ಪಾಲಿಕೆಯಲ್ಲಿ ತ್ವರಿತಗತಿಯಲ್ಲಿ ನಾಗರಿಕ ಸೇವೆ ಒದಗಿಸಲು ಇನ್ಫೋಸಿಸ್‌ನೊಂದಿಗೆ ಸಮಾಲೋಚಿಸುವಂತೆ ಮೇಯರ್ ಅವರಿಗೆ ಸಲಹೆ ನೀಡಿದರು.

ಇನ್ಫೋಸಿಸ್‌ನವರನ್ನು ಆಹ್ವಾನಿಸಿ, ಪಾಲಿಕೆಯಲ್ಲಿ ಏನೇನು ಚಟುವಟಿಕೆಗಳನ್ನು ಸಂಪರ್ಕ ಇಲ್ಲದೇ ಮಾಡಲು ಸಾಧ್ಯವಾಗುತ್ತದೆ ಎಂದು ಪರೀಕ್ಷಿಸಿ. ಪೇಟಿಎಂ, ಗೂಗಲ್ ಪೇ ಮಾದರಿ ಸೇವೆಗಳನ್ನು ಒದಗಿಸಲು ಪಾಲಿಕೆ ಮುಂದಾಗಬೇಕು. ಒಟ್ಟಾರೆ ನಗರಪಾಲಿಕೆಗೆ ಭೌತಿಕವಾಗಿ ನಾಗರಿಕರು ಬರುವುದು ಕಡಿಮೆಯಾಗಬೇಕು ಎಂದು ಹೇಳಿದರು.

ಕ್ಯಾಲೆಂಡರ್ ಬಿಡುಗಡೆಗೊಳಿಸಿದ ಕೆಬಿಜಿ: ಕ್ಯಾಲೆಂಡರ್ ಮತ್ತು ಡೈರಿ ಬಿಡುಗಡೆಗೊಳಿಸಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು (ಕೆಬಿಜಿ) ಮಾತನಾಡಿ, ಪಿ.ವಿ.ಗಿರಿಯವರು ಅನೇಕ ವರ್ಷಗಳಿಂದ ಪತ್ರಕರ್ತರ ಸಂಘಕ್ಕೆ ಡೈರಿ ಮತ್ತು ಕ್ಯಾಲೆಂಡರ್ ಅನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ. ಆ ಮೂಲಕ ಅವರು ತಮ್ಮ ಹೃದಯವಂತಿಕೆ ಮೆರೆಯುತ್ತಿದ್ದಾರೆ. ನಮ್ಮ ನಗರದಲ್ಲಿ ಬಹಳಷ್ಟು ಉದ್ಯಮಿಗಳು ಇದ್ದಾರೆ. ಈ ಪೈಕಿ ಹಲವರು ಸಂದರ್ಭೋಚಿತವಾಗಿ ಸಮಾಜಕ್ಕೆ ಸಹಾಯ ಹಸ್ತ ನೀಡುತ್ತಿದ್ದಾರೆ. ಪಿ.ವಿ.ಗಿರಿಯವರು ಹೀಗೆಯೇ ಕೊಡುಗೆ ನೀಡುತ್ತಿರಲಿ. ಅವರ ಉದ್ಯಮ ಮತ್ತು ಕುಟುಂಬಕ್ಕೆ ದೇವರು ಒಳ್ಳೆಯದು ಮಾಡಲಿ ಎಂದು ಆಶಿಸಿದರು.

ಹೊಸ ವರ್ಷಕ್ಕೆ ಅಣಿಯಾಗೋಣ: 2022 ಅಷ್ಟೇನೂ ಒಳ್ಳೆಯ ವರ್ಷವಾಗಲಿಲ್ಲ. ನಾವು ಮಹಾಮಾರಿ ಕೋವಿಡ್‌ನಿಂದ ಹೊರ ಬಂದರೂ ಹಲವು ಕಹಿ ನೆನಪುಗಳು ಇದ್ದವು. ಅವುಗಳನ್ನು ಕೈಬಿಟ್ಟು, ಸಿಹಿ ನೆನಪುಗಳನ್ನು ಇಟ್ಟುಕೊಂಡು 2023ರಲ್ಲಿ ಆನಂದಮಯ, ಸುಖಕರ ಹಾಗೂ ಸಮನ್ವಯದಿಂದ ಬದುಕಲು ಅಣಿಯಾಗಬೇಕಿದೆ ಎಂದು ಕೆಬಿಜಿ ಹೇಳಿದರು.

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಮಾತನಾಡಿ, ಪತ್ರಕರ್ತರ ಸಂಘಕ್ಕೆ ಮಂಜೂರು ಆಗಿರುವ ಸಿಎ ನಿವೇಶನವನ್ನು ಸಂಘಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ಸಂಘದ ಅಧ್ಯಕ್ಷರು ಮನವಿ ಮಾಡಿದ್ದಾರೆ. ಜ.8ರ ಮುಡಾ ಸಭೆಯಲ್ಲಿ ಸಂಘಕ್ಕೆ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸಲು ತೀರ್ಮಾನ ಮಾಡಿದ್ದೇವೆ. ಪತ್ರಕರ್ತರಿಗೆ ಗುಂಪು ಮನೆ ನೀಡಲು ಸಂಘದಿಂದ ಈಗಾಗಲೇ ಮನವಿ ಸಲ್ಲಿಕೆಯಾಗಿದ್ದು, ಈ ಸಂಬಂಧ ಈಗಾಗಲೇ 4–5 ಯೋಜನೆಗಳು ಪ್ರಸ್ತಾಪಿತ ಹಂತದಲ್ಲಿದ್ದು, ಅದರಲ್ಲಿ ಒಂದು ಯೋಜನೆಗೆ ಸರ್ಕಾರದಿಂದ ಶೀಘ್ರ ಅನುಮೋದನೆ ದೊರೆಯಲಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸಂಘಕ್ಕೆ ಸದರಿ ಭವನ ಕಿರಿದಾಗಿರುವ ಹಿನ್ನೆಲೆಯಲ್ಲಿ ಸುಸಜ್ಜಿತ ಸಿಎ ನಿವೇಶನಕ್ಕೆ ಅರ್ಜಿ ಸಲ್ಲಿಸಲಾಗಿತ್ತು ಇದೀಗ ಚಾಮುಂಡಿಬೆಟ್ಟದ ಮಡಿಲಲ್ಲಿ ಸುತ್ತೂರು ಮಠದ ಸಮೀಪ ಸಂಘಕ್ಕೆ ಸುಸಜ್ಜಿತವಾದ 9 ಗುಂಟೆ ನಿವೇಶನ ಮೀಸಲಿಡಲಾಗಿದೆ. ಈ ನಿವೇಶನದಲ್ಲಿ ಪತ್ರಕರ್ತರ ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿಗಳಿಂದ ಭೂಮಿ ಪೂಜೆ ಮಾಡಿಸುವ ಉದ್ದೇಶ ಹೊಂದಲಾಗಿದೆ ಮುಂದಿನ ಜ.8ರಂದು ನಡೆಯುವ ಮುಡಾ ಸಭೆಯಲ್ಲಿ ಸದರಿ ನಿವೇಶನ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಮುಡಾ ಅಧ್ಯಕ್ಷರಿಗೆ ಮನವಿ ಮಾಡಿದರು.

ಗುಂಪು ಮನೆಗಳ ನಿರ್ಮಾಣ ಯೋಜನೆವೊಂದಕ್ಕೆ ಶೀಘ್ರದಲ್ಲಿ ಸರ್ಕಾರದಿಂದ ಅನುಮೋದನೆ ದೊರೆಯಲಿದೆ. ಇದರಲ್ಲಿ ನಮ್ಮ ಸಂಘದ ಸದಸ್ಯರಿಗಾಗಿ ಸುಮಾರು 300 ಮನೆಗಳನ್ನು ಮೀಸಲಿರಿಸುವಂತೆ ಮುಡಾ ಅಧ್ಯಕ್ಷರಲ್ಲಿ ಕೋರಿದರಲ್ಲದೆ, ಈ ಸಂಬಂಧ ಉಸ್ತುವಾರಿ ಸಚಿವರು ಮತ್ತು ನಗರಾಭಿವೃದ್ಧಿ ಸಚಿವರಿಗೆ ಪತ್ರ ಮುಖೇನ ಮನವಿ ಮಾಡಲಾಗಿತ್ತು. ಪಾಲಿಕೆಯಲ್ಲಿ ಪತ್ರಕರ್ತರ ಆರೋಗ್ಯ ನಿಧಿಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 50 ಲಕ್ಷ ರೂ. ಮೀಸಲಿಡಬೇಕೆಂದು ಮೇಯರ್ ಅವರಲ್ಲಿ ಕೋರಿದರು.

ಇದೇ ಸಂದರ್ಭದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ಮುಡಾ ನೂತನ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅವರನ್ನು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ಇದೇ ವೇಳೆ ಇತ್ತೀಚೆಗೆ ನಿಧನ ಹೊಂದಿದ ಪತ್ರಕರ್ತರ ಮೂರು ಕುಟುಂಬಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವತಿಯಿಂದ ನೀಡಿರುವ ತಲಾ 50 ಸಾವಿರ ರೂ. ಸಹಾಯಧನದ ಚೆಕ್‌ಗಳನ್ನು ವಿತರಣೆ ಮಾಡಲಾಯಿತು. ಅಲ್ಲದೆ, ಮತ್ತೊಂದು ಕುಟುಂಬಕ್ಕೆ ಸಂಘದ ಮರಣ ನಿಧಿಯಿಂದ 25 ಸಾವಿರ ರೂ. ಸಹಾಯಧನದ ಚೆಕ್ ವಿತರಣೆ ಮಾಡಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ನಗರ ಉಪಾಧ್ಯಕ್ಷ ಅನುರಾಗ್ ಬಸವರಾಜ್, ಗ್ರಾಮಾಂತರ ಉಪಾಧ್ಯಕ್ಷ ಧರ್ಮಪುರ ನಾರಾಯಣ್, ನಗರ ಕಾರ್ಯದರ್ಶಿ ಪಿ.ರಂಗಸ್ವಾಮಿ, ಖಜಾಂಚಿ ನಾಗೇಶ್ ಪಾಣತ್ತಲೆ ಮತ್ತಿತರರು ಹಾಜರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ 2023ನೇ ಸಾಲಿನ ಡೈರಿ ಹಾಗೂ ಕ್ಯಾಲೆಂಡರ್ ಅನ್ನು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು (ಎಡದಿಂದ 2ನೇಯವರು) ಬಿಡುಗಡೆ ಮಾಡಿದರು. ಎಡದಿಂದ ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸಿದ್ಧಾರ್ಥ ಗ್ರೂಪ್ ಅಧ್ಯಕ್ಷ ಪಿ.ವಿ.ಗಿರಿ, ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಚಿತ್ರದಲ್ಲಿದ್ದಾರೆ.

ಸುಸ್ಥಿರ ಪ್ರವಾಸೋದ್ಯಮದಲ್ಲಿ ಅಭಿವೃದ್ಧಿ ಕಾಣದ ಮೈಸೂರು

“ಮೈಸೂರಿನಲ್ಲಿ ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಯಾಗಿಲ್ಲ. ಕಾರಣ ಪ್ರವಾಸೋದ್ಯಮ ಖಾತೆಯನ್ನು ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ಕೊನೆ ಸಾಲಿನಲ್ಲಿ ಇರುವವರಿಗೆ ನೀಡಲಾಗುತ್ತಿದೆ. ಹಾಗಾಗಿ ಅವರಿಗೆ ಮೈಸೂರಿನ ಬಗ್ಗೆ ಆಸಕ್ತಿ ಇಲ್ಲವಾಗಿದೆ. ಬೆಂಗಳೂರು ಬಿಟ್ಟರೆ 'ಮೈಸೂರು' ಪ್ರಮುಖ ನಗರ. ಇಲ್ಲಿ ಕೈಗಾರಿಕೋದ್ಯಮಗಳು ಸಾಕಷ್ಟು ಇವೆ. ಇಂತಹ ಮಹತ್ವ ಹೊಂದಿದೆ ಮೈಸೂರು. ಹಾಗಾಗಿ ಇಲ್ಲಿಯವರಿಗೆ ಸಚಿವ ಸ್ಥಾನ ಕೊಡದಿದ್ದರೆ ಹೇಗೆ? ನಮ್ಮಲ್ಲಿ ಅರ್ಹರಿಲ್ಲವೇ?

–ಪಿ.ವಿ.ಗಿರಿ, ಅಧ್ಯಕ್ಷ, ಸಿದ್ಧಾರ್ಥ ಗ್ರೂಪ್



ಬೆಳವಾಡಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್, ಗ್ರಾಮದ ಮುಖಂಡರಿದ್ದರು.

ಸರ್ಕಾರಿ ಉಪಕರಣಾಗಾರ, ತರಬೇತಿ ಕೇಂದ್ರದಲ್ಲಿ ವಿವಿಧ ತರಬೇತಿ

ಮೈಸೂರು, ಡಿ.31(ಆರ್‌ಕೆಬಿ)– ಮೈಸೂರಿನ ಕೆಆರ್‌ಎಸ್ ರಸ್ತೆ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ದಲ್ಲಿ ವೈವಿಧ್ಯಮಯ ತರಬೇತಿ ನೀಡುತ್ತಿದ್ದು, ಇದರಲ್ಲಿ ಪಾಲ್ಗೊಂಡವರಿಗೆ ಹೆಚ್ಚಿನ ಉದ್ಯೋಗಾವಕಾಶಗಳಿವೆ. ಹೀಗಾಗಿ ವಿದ್ಯಾರ್ಥಿಗಳು ಪ್ರಯೋಜನ ಪಡೆಯಬೇಕೆಂದು ವ್ಯವಸ್ಥಾಪಕ ರವಿಶಂಕರ್ ತಿಳಿಸಿದರು.



ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಲ್ಲಿ ವಿವಿಧ ಹಂತಗಳ ಪರಿಕರ, ಡೈ, ಮೋಲ್ಡ್‌ಗಳ ವಿನ್ಯಾಸ, ತಯಾರಿಕೆ ಮತ್ತು ಉತ್ಪಾದನಾ ಅಂಶಗಳಿಗೆ ಸಂಬಂಧಿಸಿದ ಹೆಚ್ಚಿನ ಅಭ್ಯಾಸ ಆಧಾರಿತ ಗುಣಮಟ್ಟದ ತರಬೇತಿ ನೀಡಲಾಗುತ್ತಿದೆ. ಕೈಗಾರಿಕೆಗಳಿಗೆ ಇಂದಿನ ಅಗತ್ಯ ಪೂರೈಸಲು ನುರಿತ ಮಾನವ ಶಕ್ತಿ ತಯಾರು, ಮಾಡಲಿಂಗ್ ಮತ್ತು ವಿಶ್ಲೇಷಣೆ, ನಿರ್ದಿಷ್ಟ ಉಲ್ಲೇಖದೊಂದಿಗೆ ವರ್ಧಿತ ಸಾಫ್ಟ್‌ವೇರ್ ಮೊದಲಾದ ಸೌಲಭ್ಯ ಇಲ್ಲಿವೆ. ಇದರೊಡನೆ ಡಿಟಿಡಿಎಂ, ಡಿಪಿಎಂ, ಎಂ.ಟೆಕ್ ಇನ್ ಟೂಲ್ ಎಂಜಿನಿಯರಿಂಗ್ ಕೋರ್ಸ್ ಸಹ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಸಂಯೋಜನೆಯೊಂದಿಗೆ ಲಭ್ಯವಿದೆ. ಡಿಪ್ಲೊಮಾ ಇನ್ ಟೂಲ್ಸ್ ಮೇಕಿಂಗ್, ಸರ್ಟಿಫಿಕೇಟ್ ಕೋರ್ಸ್‌ಗಳು ಇಲ್ಲಿ ನಡೆಯುತ್ತಿದ್ದು, ಮಾಹಿತಿಗೆ ದೂ. 9243989954 ಸಂಪರ್ಕಿಸಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಮುಖ್ಯಸ್ಥರಾದ ಎಲ್.ಜಿ.ಸಣ್ಣಮನಿ, ಪ್ರಾಚಾರ್ಯ ಡಾ.ಕೃಷ್ಣಮೂರ್ತಿ, ವಿನಯ್ ಉಪಸ್ಥಿತರಿದ್ದರು.

ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಡಿ.31–2022–23ನೇ ಸಾಲಿಗೆ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಾದ IIM, IIT, IISc, IIITs, NITs, IISERs, AIIMS, NLU, ISM, IIP, ISI, JIPMER ಅಥವಾ SPA ಗಳಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದಿರುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ)ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜ.30ರ ಸಂಜೆ 5 ಗಂಟೆವರೆಗೆ ಅವಕಾಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್ ಸೈಟ್ https://bcwd.karnataka.gov.in ಅಥವಾ ಮೊಬೈಲ್ ಸಂಖ್ಯೆ: 8050770004 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನೆ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಬೆಳಗ್ಗೆ 7 ರಿಂದ.

■ **ಪ್ಯಾಲೇಸ್ ಸ್ಪೋರ್ಟ್ಸ್ ಕ್ಲಬ್:** ನಗರ ಮಟ್ಟದ ಪ್ರೌಢಶಾಲಾ ಬಾಲಕರ ಟೆನ್ನಿಸ್ ಬಾಲ್ ಮಿನಿ ಕ್ರಿಕೆಟ್ ಪಂದ್ಯಾವಳಿ, ಉದ್ಘಾಟನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಕ್ಲಬ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮಾಜಿ ಮೇಯರ್ ಸುನಂದ ಪಾಲನೇತ್ರ, ದಾರಿದೀಪ ಜನಸೇವಾ ಟ್ರಸ್ಟ್ ಅಧ್ಯಕ್ಷ ಪ್ರದೀಪ್, ಚಲನಚಿತ್ರ ವಾಣಿಜ್ಯ ಮಂಡಳಿ ನಿರ್ದೇಶಕ ವರುಣಾ ಮಹೇಶ್, ಸ್ಥಳ: ವಿವೇಕಾನಂದ ಕ್ರೀಡಾಂಗಣ, ಕುವೆಂಪುನಗರ, ಬೆಳಗ್ಗೆ 9ಕ್ಕೆ

■ **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ, ಬೆಳಗ್ಗೆ 10ರಿಂದ.

■ **ಕನ್ನಡ ಚಳವಳಿ ಕೇಂದ್ರ ಸಮಿತಿ:** ಕನ್ನಡ ಚಳವಳಿಯ ಕನ್ನಡ ಅಂಕಿಗಳ ದಿನಸೂಚಿ ಬಿಡುಗಡೆ, ಸಾನ್ನಿಧ್ಯ: ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಶ್ರೀ ಭಾಷ್ಯಂ ಸ್ವಾಮೀಜಿ, ದಿನಸೂಚಿ ಬಿಡುಗಡೆ: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಡಾ ಅಧ್ಯಕ್ಷ ಯಶಸ್ವಿ ಸೋಮ ಶೇಖರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಉದ್ಯಮಿ ಯು.ಎಸ್.ಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಗರ ಕಸಾಪ ಅಧ್ಯಕ್ಷ ಕೆ.ಎಸ್.ಶಿವರಾಮು, ಡಾ.ವೈ.ಡಿ.ರಾಜಣ್ಣ, ರಾಜಶೇಖರ ಕದಂಬ, ಕೆ.ರಘುರಾಂ ವಾಜಪೇಯಿ, ಸ್ಥಳ: ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ, ಬೆಳಗ್ಗೆ 10ಕ್ಕೆ.

■ **ಗಾಣಿಗ ಮಹಾಸಭಾ, ಕರ್ನಾಟಕ ರಾಜ್ಯ ಗಾಣಿಗ ಗೆಳೆಯರ ಕ್ಷೇಮಾಭಿವೃದ್ಧಿ ಸಂಘ:** ಪ್ರತಿಭಾ ಪುರಸ್ಕಾರ ಮತ್ತು ಗಾಣಸಿರಿ ಧ್ವನಿಸುರುಳಿ ಬಿಡುಗಡೆ, ಅಭಿನಂದನಾ ಸಮಾರಂಭ, ಉದ್ಘಾಟನೆ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಅಧ್ಯಕ್ಷತೆ: ಗಾಣಿಗರ ಮಹಾಸಭಾ ಅಧ್ಯಕ್ಷ ಡಾ.ಕೆ. ವಿಜಯಕುಮಾರ್, ಪ್ರತಿಭಾ ಪುರಸ್ಕಾರ: ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಪ್ರಾಸ್ತಾವಿಕ ನುಡಿ: ಮಾಜಿ ಮೇಯರ್ ಅನಂತು, ಸ್ಥಳ: ಚಿಕ್ಕಮ್ಮಾನಿಕೇತನ ಕಮ್ಯುನಿಟಿ ಹಾಲ್, ಉದಯರವಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10ಕ್ಕೆ

■ **ಗುರುಕೃಪಾ ಧ್ಯಾನ ಕೇಂದ್ರ:** ಆನ್‌ಲೈನ್ ಜೂಮ್ ಮೂಲಕ ಸಮೃದ್ಧಿಯ ಆಶೀರ್ವಾದ–2023 ಮಂತ್ರ ಧ್ವನಿ ಸ್ನಾನ–ಧ್ಯಾನ ಶಿಬಿರ, ಸ್ಥಳ: ಕೇಂದ್ರದ ಆವರಣ, ವಿದ್ಯಾರಣ್ಯಪುರಂ, ರಾತ್ರಿ 9 ರಿಂದ.



ಇಂದಿನ ಪಂಚಾಂಗ

1.1.2023 ಭಾನುವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಬಸವ ಸಮಿತಿ :** ಶರಣ ಸಂಗಮ–277, ಸಾನ್ನಿಧ್ಯ : ಬರಡನಪುರ ಮಠಾಧ್ಯಕ್ಷ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಶ್ರೀ ಬಸವೇಶ್ವರ ಬಳಗದ ಅಧ್ಯಕ್ಷ ಡಾ.ಸಿ.ಶರತ್‌ಕುಮಾರ್ ಅವರಿಂದ ವಚನ ಸಾಹಿತ್ಯದಲ್ಲಿ ವೈದ್ಯಕೀಯ ವಿಚಾರಧಾರೆ ಕುರಿತು ಉಪನ್ಯಾಸ, ಅಧ್ಯಕ್ಷತೆ: ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಜಕಣಾಚಾರಿ ಸಂಸ್ಮರಣಾ ದಿನಾಚರಣೆ, ಉದ್ಘಾಟನೆ: ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ತನ್ವೀರ್ ಸೇಠ್, ಮೇಯರ್ ಶಿವಕುಮಾರ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ಸೇನಾ ಪಡೆ:** ಕ್ಯಾಲೆಂಡರ್ ಬಿಡುಗಡೆ, ಸಾನ್ನಿಧ್ಯ: ಪ್ರೊ. ಭಾಷ್ಯಂ ಸ್ವಾಮೀಜಿ, ಮುಖ್ಯ ಅತಿಥಿಗಳು: ಶಾಸಕ ಸಿ.ಎನ್.ಮಂಜೇಗೌಡ, ಎಚ್.ಕೆ. ರಾಮು, ಸಿ.ಜಿ.ಗಂಗಾಧರ್, ಡಾ.ರಘುರಾಂ ವಾಜಪೇಯಿ, ಎಂ.ಎನ್. ದೊರೆಸ್ವಾಮಿ, ಡಾ.ಲಕ್ಷ್ಮೀನಾರಾಯಣ ಶೆಣೈ, ಲಯನ್ ಸುರೇಶ್ ಟಿ. ಗೋಲ್ಡ್, ಡಾ.ಶಾಂತರಾಜೇ ಅರಸ್, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆವರಣ, ವಿಜಯನಗರ, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್, ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ವಚನ ಸಂಗೀತೋತ್ಸವ, ಉದ್ಘಾಟನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಧಾತ್ರಿ ಸಮಾರಾಧನಾ ಸಮಿತಿ ಅಧ್ಯಕ್ಷ ಎಂ.ಎಸ್.ನಾಗರಾಜ ಗುಪ್ತ, ಎಚ್.ಎಂ.ಸಂದೀಪ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಬಿ.ವಿ. ಶ್ರೀನಿವಾಸ ಗುಪ್ತ, ಸಿ.ಮೋಹನ್‌ರಾಜು, ಪ್ರಾಸ್ತಾವಿಕ ನುಡಿ: ಜಿಲ್ಲಾ ಶರಣ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಶ್ರೀ ವಾಸವಿ ಶಾಂತಿಧಾಮ, ನಾಡನಹಳ್ಳಿ ರಸ್ತೆ, ಸಂಜೆ 4.30ಕ್ಕೆ.

■ **ಭೂಮಿಕಾ ಅಸೋಸಿಂಯೇಟ್ಸ್, ದಿವಂಗತ ಮೈಕ್ ಚಂದ್ರು ಗೆಳೆಯರ ಬಳಗ:** ಸುಮಧುರ ಹಳೆಯ ಕನ್ನಡ, ಹಿಂದಿ ಮತ್ತು ತೆಲುಗು ಚಲನಚಿತ್ರ ಗೀತೆಗಳ ಗಾನಮಂಜರಿ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ರಿಂದ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ಆಂಡಾಳ್ ಮಂದಿರಂ ಆವರಣ. ವಿವಿ ಮೊಹಲ್ಲಾ, ಸಂಜೆ 6 ರಿಂದ 7.30ರವರೆಗೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ.ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ. ಸ್ಥಳ: ದೇವಸ್ಥಾನ ಆವರಣ, ಸಂಜೆ 6ಕ್ಕೆ

■ **ಜೈ ಭೀಮಾ ಕೋರೆಗಾಂವ್ ವಿಜಯೋತ್ಸವ ಸಮಿತಿ :** ದಲಿತರ ಸ್ವಾಭಿಮಾನ ಜಾಗೃತಿ ದಿನ, ಸಾನ್ನಿಧ್ಯ : ಶ್ರೀ ಭೋದಿದತ್ತ ಬಂತೇಜಿ, ಉಪಸ್ಥಿತರು : ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಪ್ರಕಾಶ್ ರಾಜ್, ಪ್ರೊ. ಕಾಳೇಗೌಡ ನಾಗವಾರ, ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ಹಿರಿಯ ರಂಗಕರ್ಮಿ ಹೆಚ್. ಜನಾರ್ಧನ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಎಸ್. ಉಮೇಶ್, ಪಿ.ಎಂ. ಸಿದ್ದರಾಜು, ಶ್ರೀಮತಿ ಪಲ್ಲವಿ ಬೇಗಂ, ಆರ್.ಸಿ. ಮಹೇಶ್, ಸ್ಥಳ: ಜಯನಗರ ರೈಲ್ವೆ ಗೇಟ್ ಹತ್ತಿರ, ಅಶೋಕಪುರಂ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಮಹಾಜನಸಭಾ:** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀ ಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ರಂಗಾಯಣ:** ಸುಬ್ಬಯ್ಯನಾಯ್ಡು ರಂಗ ಕಾರ್ಯಾಗಾರದ ಶಿಬಿರಾರ್ಥಿಗಳಿಂದ 'ಭಗವದಜ್ಜುಕೀಯಂ ಅರ್ಥಾತ್ ಸೂಳೆ ಸನ್ಯಾಸಿ' ನಾಟಕ ಪ್ರದರ್ಶನ, ನಿರ್ದೇಶನ: ಜೀವನ್‌ಕುಮಾರ್ ಬಿ.ಹೆಗ್ಗೋಡು, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ :** ನಟನ ಕಲಾವಿದರಿಂದ ಚೋರ ಚರಣದಾಸ ನಾಟಕ ಪ್ರದರ್ಶನ, ನಿರ್ದೇಶನ: ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

ಕಂಚಮಳ್ಳಿಯಲ್ಲಿಂದು, ಹೆಚ್.ಡಿ. ಕೋಟೆ ತಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಪದವಿಪೂರ್ವ ಕಾಲೇಜು:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಪ್ರಾಂಶುಪಾಲ ಎಂ.ಪಿ.ರೇವಣ್ಣ, ಸಮಾರೋಪ ಭಾಷಣ: ಸಹಾಯಕ ಸಂಯೋ ಜನಾಧಿಕಾರಿ ಡಾ.ಟಿ.ಕೆ.ರವಿ, ಮುಖ್ಯ ಅತಿಥಿಗಳು: ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಉದಯಕುಮಾರ್, ಹೆಚ್.ವಿ.ಕೃಷ್ಣಸ್ವಾಮಿ, ಜಯಪ್ರಕಾಶ್ ಚಿಕ್ಕಣ್ಣ, ನಟರಾಜು, ರಂಗಸ್ವಾಮಿ, ಶೇಖರ್, ಮಲ್ಲಿಗಮ್ಮ, ಸಿ.ಕೆ. ಗಿರೀಶ್, ಸಿದ್ದರಾಜು, ಬೆಳಗ್ಗೆ 11ಕ್ಕೆ

ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್:** ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀಮತಿ ಟಿ.ಆರತಿ, ಜಿ.ಸಿ.ವೀರರಾಜೇ ಅರಸ್, ಸಹಾಯಕ ಸಂಯೋಜನಾಧಿಕಾರಿ ವೀರಭದ್ರಯ್ಯ, ಅಧ್ಯಕ್ಷತೆ: ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಬಿ. ಇಳಂಗೋವನ್, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರ ಶೇಖರ್, 6.45 ಅರಿವಿನ ಶಿಖರ, ಗಾಯನ– ಎನ್.ಹೇಮಾ, ಮತ್ತೂರು ಕುಮಾರಸ್ವಾಮಿ, ಅಂಬಯ್ಯ ನುಲಿ, ವ್ಯಾಖ್ಯಾನ– ಕೆ.ಎಲ್.ಪದ್ಮಿನಿ ಹೆಗಡೆ, 9.40 ನಮ್ಮ ಆರೋಗ್ಯ–ಡೀಪ್ ವೇಯ್ನ ಥ್ರಾಂಬೋಸಿಸ್ ಕುರಿತು ಡಾ.ರೂಪಾ ಶೇಷಾದ್ರಿ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಹೆಚ್.ಡಿ.ಕೋಟೆ ಸೋಮನಹಳ್ಳಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ–ವೃಂದಗಾನ, ಮಾಧವಗುಡಿ, 12.45 ಜನಪದ ಸಂಗೀತ–ಪುಟ್ಟಸಿದ್ಧಯ್ಯ ಮತ್ತು ತಂಡ, 1.20 ಭಾವಗೀತೆ– ಅಂಬಿಕಾ ಕೆ. ರಾವ್, 3.00 ಸ್ವರಾಜ್–ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳಮದ್ದಲೆ– ಪ್ರಸಂಗ– ಕರ್ಣ ಪಟ್ಟಾಭಿಷೇಕ, ಪ್ರಸ್ತುತಿ– ಕಾಸರಗೋಡಿನ ಕೆ.ಎ. ಪದ್ಮನಾಭ ಪೂಜಾರಿ ಮತ್ತು ಬಳಗದವರು, 6.50 ಕೃಷಿರಂಗ–ಕೃಷಿಲೋಕ, ಕೃಷಿ ಮಾಹಿತಿ, ಜನಪದ ಗೀತೆಗಳು, 8.00 ಯುವವಾಣಿ–ನವ ವರ್ಷ ನವ ಹರ್ಷ–ವಿಶೇಷ ಕಾರ್ಯಕ್ರಮ, ಪ್ರಸ್ತುತಿ– ಮೈಸೂರಿನ ಪಾವನಾ ಮತ್ತು ತಂಡದ ಸದಸ್ಯರು, 9.15 ರಂಗಗೀತೆಗಳು–ಶ್ರೀನಿವಾಸ ಕಲ್ಯಾಣ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಪಂಡಿತ್ ಸಂತನು ಭಟ್ಟಾಚಾರ್ಯ – ಗಾಯನ

ಅರಮನೆ ಆವರಣದಲ್ಲಿ ಹೊಸ ವರ್ಷದ ಚಿತ್ತಾರ




ಮೈಸೂರು, ಡಿ.31(ಎಂಕೆ)– ಮೈಸೂರು ಅರಮನೆ ಅಂಗಳದಲ್ಲಿ ಸುಗಂಧ ಪರಿಮಳ ಬೀರುವ ಪುಷ್ಪರಾಶಿಗಳ ನಡುವೆ, ಇಂಪಾದ ಸುಮಧುರ ನಾದ–ನಿನಾದದ ಜೊತೆಗೆ ಆಗಸದಲ್ಲಿ ಬಣ್ಣ ಬಣ್ಣದ ಚಿತ್ತಾರ ಬಿಡಿಸಿದ ಪಟಾಕಿ ಸೌಂದರ್ಯದ ಬೆಳಕಿನಲ್ಲಿ ಹೊಸ ವರ್ಷಕ್ಕೆ ಆಹ್ವಾನ ನೀಡಲಾಯಿತು.

ರಾತ್ರಿ 11 ಗಂಟೆಯಿಂದ ಪ್ರಾರಂಭವಾದ ಕರ್ನಾಟಕ ಪೊಲೀಸ್ ಇಲಾಖೆಯ ಕನ್ನಡ ಮತ್ತು ಆಂಗ್ಲ ಬ್ಯಾಂಡ್ ಕಾರ್ಯಕ್ರಮ ಸಂಗೀತ ಪ್ರಿಯರ ಮನಸ್ಸಿಗೆ ಮುದ ನೀಡಿತು. 50 ಮಂದಿ ಕಲಾವಿದರಿಂದ ಪ್ರಸ್ತುತವಾದ ಬ್ಯಾಂಡ್ ಕಾರ್ಯಕ್ರಮದಲ್ಲಿ ಕನ್ನಡ ಹಾಗೂ ಇಂಗ್ಲಿಷ್ ಹಾಡುಗಳ ನಾದ ಕೇಳುಗರ ಕಿವಿಗೆ ಇಂಪು ನೀಡಿತು. ಬಳಿಕ ಮಧ್ಯರಾತ್ರಿ 12 ರಿಂದ 12.15ರವರೆಗೆ ಅಂದರೆ ನಿರಂತರ 15 ನಿಮಿಷಗಳ ಕಾಲ ಬಾನಂಗಳದಲ್ಲಿ ಬೆಳಕಿನ ಚಿತ್ತಾರ ಬಿಡಿಸಿದ ಶಬ್ದರಹಿತ ಪಟಾಕಿಗಳು ನೂತನ ವರ್ಷಾಚರಣೆಗೆ ಸಂಭ್ರಮದ ಮೆರಗು ತಂದವು. ಅರಮನೆ ಬೆಳಕಿನ ನಡುವೆ ನೀಲಿ ಬಾನಂಗಳದಲ್ಲಿ ಚದುರಿದ ವರ್ಣಮಯ ಬೆಳಕು ನೋಡುಗರ ಮನದಲ್ಲಿ ಮಂದಹಾಸ ತಂದಿತು.

ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ ಆರೂವರೆ ಕೋಟಿ ಕನ್ನಡಿಗರ ATM

●ಗೃಹ ಸಚಿವ ಅಮಿತ್ ಷಾಗೆ ಕುಮಾರಸ್ವಾಮಿ ಎದಿರೇಟು ●ನಮ್ಮ ಪಾಲಿಗೆ ಎನಿಟೈಮ್ ಮನುಷ್ಯತ್ವ; ನಿಮ್ಮ ಪಾಲಿಗೆ ಅದು ಎನಿಟೈಮ್ ಮೋಸ



ಬೆಂಗಳೂರು, ಡಿ.31(ಕೆಎಂಶಿ)–ಜೆಡಿಎಸ್ ಸರ್ಕಾರ ಬಂದರೆ, ಅದು ಆರೂವರೆ ಕೋಟಿ ಕನ್ನಡಿಗರ ಎಟಿಎಂ ಆಗುತ್ತದೆ. ರೈತರ, ಕಾರ್ಮಿಕರ, ದೀನ ದಲಿತರ, ಅಶಕ್ತರ, ವಿಕಲಚೇತನರ ಎಟಿಎಂ ಆಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಸರಣಿ ಟ್ವೀಟ್ ಮೂಲಕ ಕೇಂದ್ರ ಗೃಹಸಚಿವ ಅಮಿತ್ ಶಾ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಅವರು, ಜೆಡಿಎಸ್ ಗೆದ್ದರೆ ಕರ್ನಾಟಕ ಒಂದು ಕುಟುಂಬದ ಎಟಿಎಂ ಆಗುತ್ತದೆಂದು ಜಾಗಟೆ ಹೊಡೆಯುತ್ತೀರಿ. ನಾವು ಅಧಿಕಾರಕ್ಕೆ ಬಂದರೆ, ಕನ್ನಡಿಗರ ಎಟಿಎಂ ಆಗುತ್ತೇವೆ. ಜೆಡಿಎಸ್ ಜನರ ಎಟಿಎಂ. ನಮ್ಮ ಪಾಲಿಗೆ ಎನಿಟೈಮ್ ಮನುಷ್ಯತ್ವ ಎಂದು. ನಿಮ್ಮ ಪಾಲಿಗೆ ಅದು ಎನಿ ಟೈಮ್ ಮೋಸ. ಸುಳ್ಳಿನ ಜಾಗಟೆ ಹೊಡೆದೇ ದೇಶವನ್ನು ಅಧೋಗತಿಗೆ ತಳ್ಳಿದ್ದೀರಿ. ಶಾ ಅವರೇ, ದೇಶದ ಮಾತು ಹಾಗಿರಲಿ, ಕರ್ನಾಟಕದಲ್ಲಿ ನಿಮ್ಮ ಪಕ್ಷದ ಎಟಿಎಂಗಳ ಪಟ್ಟಿ ಮೂಡಿದೆ ನೋಡಿ ಎಂದಿದ್ದಾರೆ.

ಶೇ.40 ಕಮಿಷನ್, ಪಿಎಸ್ಐ ಹಗರಣ, ಪ್ರಶ್ನೆಪತ್ರಿಕೆ ಸೋರಿಕೆ, ಸಹ ಪ್ರಾಧ್ಯಾಪಕರ ನೇಮಕ ಹಗರಣ, ವೈದ್ಯ ಪ್ರಾಧ್ಯಾಪಕರ ನೇಮಕ ಹಗರಣ, ಕೋವಿಡ್‌ನಲ್ಲಿ ಕೊಳ್ಳೆ, ಕಾಸಿಗಾಗಿ ಪೋಸ್ಟಿಂಗ್, ಗಂಗಾ ಕಲ್ಯಾಣ ಕರ್ಮಕಾಂಡ, ಚಿಲುಮೆ ಹಗರಣ. ಇದು ಅಪೂರ್ಣ ಪಟ್ಟಿ, ಅದು ಕೂಡ ದೊಡ್ಡದಿದೆ. ಬೇಕಾ ಅಮಿತ್ ಶಾ ಅವರೇ ಎಂದು ಪ್ರಶ್ನಿಸಿದ್ದಾರೆ. ಬರೀ ಬೂಟಾಟಿಕೆ ಪಾರ್ಟಿ (ಬಿಜೆಪಿ) ಸುಳ್ಳುಕೋರರ ಸಂತೆ ಎನ್ನುವುದಕ್ಕೆ ಮಂಡ್ಯದಲ್ಲಿ ಸುಖಾಸುಮ್ಮನೆ ಅಲವತ್ತುಕೊಂಡ ನಿಮ್ಮ ಅಸತ್ಯದ ಹಾಹಾಕಾರದ ವರಸೆಯೇ ಸಾಕ್ಷಿ. ಸ್ಥಳಕ್ಕೊಂದು ವೇಷ, ಕ್ಷಣಕ್ಕೊಂದು ಸುಳ್ಳು; ಇದು ನಿಮ್ಮ ಪಕ್ಷದ ನಿಜ ಸ್ವರೂಪ ಎಂದು ವಾಗ್ದಾಳಿ ನಡೆಸಿದ್ದಾರೆ. ನೀವು ಸರ್ವಾಧಿಕಾರಿ ಹಿಟ್ಲರನ ಸಂಪುಟದ ಗೊಬೆಲ್ಲನ ಹೊಸ ಅವತಾರ. ಸುಳ್ಳು ಹೇಳಿ ಪ್ರಚಾರ ಗಿಟ್ಟಿಸಿಕೊಳ್ಳಬೇಕಾದ ಕರ್ಮ ನಿಮಗೇಕೆ ಬಂತು ಶಾ ಅವರೇ ಎಂದು ಪ್ರಶ್ನಿಸಿರುವ ಅವರು, ಕರ್ನಾಟಕದ ನಿಮ್ಮ ಬಿಜೆಪಿ ಸರ್ಕಾರ ಕೇವಲ ಶೇ.40 ಸರ್ಕಾರ ಅಲ್ಲವೇ ಅಲ್ಲ. ಅದು ಶೇ.55–60 ಸರ್ಕಾರ. ನಿಮಗೂ ಮಾಹಿತಿ ಇರುತ್ತದೆ, ಕರ್ನಾಟಕ ನಿಮ್ಮ ಪಕ್ಷಕ್ಕೂ ಎಟಿಎಂ ಹೌದಲ್ಲವೇ ಈ ಸತ್ಯ ಯಾಕೆ ಮರೆಮಾಚಿದ್ದೀರಿ. ಮಂಡ್ಯ ಜನರ ಮುಂದೆ ನಿಮ್ಮ ದಮ್ಮು ತಾಕತ್ತು ನಡೆಯಲ್ಲ, ಅರಿತುಕೊಳ್ಳಿ ಎಂದು ಆರೋಪಗಳ ಸುರಿಮಳೆಗೈದಿದ್ದಾರೆ.

ಇನ್ನು ಕುಟುಂಬದ ವಿಷಯ, ನಿಮ್ಮ ಪಕ್ಷದ ಕುಟುಂಬ ರಾಜಕಾರಣದ ಲೆಕ್ಕ ಗೊತ್ತಿಲ್ಲವೇ ನಿಮ್ಮ ಸುಪುತ್ರ ಜಯ ಶಾ ಯಾವ ಸೀಮೆ ಕ್ರಿಕೆಟ್ ಪಂಡಿತರು ಎಂದು ಬಿಸಿಸಿಐನಲ್ಲಿ ಕೂತಿದ್ದಾರೆ. ಬಿಸಿಸಿಐನಲ್ಲಿ ಯಾರು ಇರಬೇಕು, ಇರಬಾರದೆಂದು ಸುಪ್ರೀಂಕೋರ್ಟಿನ ಸ್ಪಷ್ಟ ಆದೇಶವಿದೆ. ಆ ಆದೇಶಕ್ಕೆ ನಿಮ್ಮ ಮಗ ಅತೀತರೇ ಈಗ ಹೇಳಿ, ಬಿಸಿಸಿಐ ಯಾರ ಪಾಲಿನ ಎಟಿಎಂ ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕ ಬಿಜೆಪಿ ಕುಟುಂಬ ರಾಜಕಾರಣದ ಪಟ್ಟಿ: ಯಡಿಯೂರಪ್ಪ ಮತ್ತು ಮಕ್ಕಳು, ರವಿಸುಬ್ರಮಣ್ಯ–ತೇಜಸ್ವಿ ಸೂರ್ಯ, ಅಶೋಕ್–ರವಿ, ವಿ.ಸೋಮಣ್ಣ ಮತ್ತು ಮಕ್ಕಳು, ಅರವಿಂದ ಲಿಂಬಾವಳಿ–ರಘು, ಎಸ್.ಆರ್.ವಿಶ್ವನಾಥ್–ವಾಣಿ ವಿಶ್ವನಾಥ್, ಜಗದೀಶ್ ಶೆಟ್ಟರ್–ಪ್ರದೀಪ್ ಶೆಟ್ಟರ್, ಮುರುಗೇಶ್ ನಿರಾಣಿ–ಹನುಮಂತ ನಿರಾಣಿ, ಜಿ.ಎಸ್.ಬಸವರಾಜು– ಜ್ಯೋತಿ ಗಣೇಶ್, ಜಾರಕಿಹೊಳಿ ಮತ್ತು ಸಹೋದರರು, ಜೊಲ್ಲೆ ಮತ್ತು ಜೊಲ್ಲೆ, ಅಂಗಡಿ ಕುಟುಂಬ, ಉದಾಸಿ ಕುಟುಂಬ, ಶ್ರೀರಾಮುಲು ಕುಟುಂಬ, ರೆಡ್ಡಿ ಮತ್ತು ರೆಡ್ಡಿ, ಇದು ಕೂಡ ಅಪೂರ್ಣ ಪಟ್ಟಿಯೇ. ರಾಷ್ಟ್ರೀಯ ಪಟ್ಟಿ ಬೇಕಿದ್ದರೆ ಹೇಳಿ, ಇದರ ಹತ್ತರಷ್ಟಿದೆ ಎಂದಿದ್ದಾರೆ. ಇವತ್ತು ಬೆಂಗಳೂರಿನಿಂದ ಹೊರಡುವ ಮುನ್ನ ಇದಕ್ಕೆಲ್ಲಾ ಉತ್ತರ ಕೊಡಿ ಅಮಿತ್ ಶಾ ಅವರೇ. ಎಷ್ಟಾದರೂ ನೀವು ಸ್ವಯಂ ಘೋಷಿತ ಸಾಚಾ ಅಲ್ಲವೇ, ಉತ್ತರ ಹೇಳಿ ಹೋದರೆ ನಾವೂ ಧನ್ಯರಾಗುತ್ತೇವೆ. ಸತ್ಯ ಅಜರಾಮರ, ಅಸತ್ಯ ನಿಮ್ಮ ಹಣೇಬರ. ಸತ್ಯದ ಮುಂದೆ ದಮ್ಮು ತಾಕತ್ತು ದುರ್ಬಲ ಎಂದು ವಾಗ್ದಾಳಿ ನಡೆಸಿದ್ದಾರೆ. ಪಂಚರತ್ನ ರಥಯಾತ್ರೆ ನಿಮ್ಮ ಕಣ್ಣು ಕುಕ್ಕಿದೆ. ಸಾಲಮನ್ನಾ ನಿಮ್ಮ ನಿದ್ದೆಗೆಡಿಸಿದೆ. ಎಷ್ಟೇ ಆದರೂ ಕೇಂದ್ರದ ಸಹಕಾರ ಸಚಿವರಾದ ನಿಮಗೆ ಸಾಲಮನ್ನಾ ದುಃಸ್ವಪ್ನದಂತೆ ಕಾಡುತ್ತಿದೆ ಎನ್ನುವುದು ಗೊತ್ತು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮತ್ತು ನನ್ನ ಸಾಧನೆಗಳು ನಿಮ್ಮ ಚಿಂತೆ ಹೆಚ್ಚಿಸಿವೆ. ಇನ್ನಾದರೂ ಸುಳ್ಳಿನ ಜಾಗಟೆ ಬಾರಿಸುವುದು ನಿಲ್ಲಿಸಿ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಸೆಸ್ಕ್‌ಗೆ ಐಎಸ್‌ಓ ಪ್ರಮಾಣೀಕರಣ

ಮೈಸೂರು, ಡಿ.31–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ವು ಐಎಸ್‌ಓ (International Organisation for Standardisation) ಪ್ರಮಾಣ ಪತ್ರ ಪಡೆದಿದೆ. ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಿಗೆ ವಿದ್ಯುತ್ ಪೂರೈಕೆ ಮಾಡುತ್ತಿರುವ ಸರ್ಕಾರಿ ಸ್ವಾಮ್ಯದ ಸೆಸ್ಕ್‌ಗೆ ಐಎಸ್‌ಓ 9001–2015 ಮತ್ತು ಐಎಸ್‌ಓ 27001–2013 ಪ್ರಮಾಣ ಪತ್ರ ಲಭಿಸಿದೆ. ಹೊಸ ತಂತ್ರಜ್ಞಾನ ಮತ್ತು ಆವಿಷ್ಕಾರಗಳನ್ನು ಅಳವಡಿಸಿಕೊಂಡು ತನ್ನ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿರುವುದಕ್ಕೆ ಈ ಮನ್ನಣೆ ಪಡೆದಿದೆ.

ಗುಣಮಟ್ಟ, ಸುರಕ್ಷತೆ ಸಾಮರ್ಥ್ಯ, ಸೇವೆ ಹಾಗೂ ವಿದ್ಯುತ್ ವಿತರಣಾ ಪದ್ಧತಿಯಲ್ಲಿ ಮುಂಚೂಣಿಯಲ್ಲಿದ್ದು, ತನ್ನ ಗ್ರಾಹಕರಿಗೆ ತಡೆರಹಿತ ವಿದ್ಯುತ್ ಸರಬರಾಜು ಮಾಡುತ್ತಿರುವುದಲ್ಲದೆ, ತಂತ್ರಜ್ಞಾನದ ಮೂಲಕ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ನಿರ್ವಹಣೆ ಮಾಡುತ್ತಿರುವುದನ್ನು ಪರಿಗಣಿಸಿರುವ ಯುನೈಟೆಡ್ ಕಿಂಗ್‌ಡಂ ಮೂಲದ ಮೆ. ಎನ್.ಕ್ಯೂಎ. ಐಎಸ್‌ಓ ಪ್ರಮಾಣೀಕರಣ ಸಂಸ್ಥೆಯು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತಕ್ಕೆ ಡೇಟಾ ಸೆಂಟರ್ ಮತ್ತು ಗುಣಮಟ್ಟದ ಗ್ರಾಹಕರ ದೂರು ನಿರ್ವಹಣೆಗಾಗಿ ISO 9001–2015 ಹಾಗೂ ಡೇಟಾ ಸೆಂಟರ್‌ನ ಮಾಹಿತಿ ಭದ್ರತಾ ನಿರ್ವಹಣೆಗಾಗಿ ISO 27001–2013 ಅನ್ನು 2022ರ ಡಿಸೆಂಬರ್ 22ರಿಂದ ಅನ್ವಯವಾಗುವಂತೆ ಪ್ರಮಾಣ ಪತ್ರ ನೀಡಿದೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮ, ಮನೆ ನಂ.318 ರಲ್ಲಿ ವಾಸವಾಗಿರುವ ಶ್ರೀ ಸೈಯದ್ ಯಾಸೀನ್ ರವರ ಮಗನಾದ ಶ್ರೀ ಸೈಯದ್ ಇನ್ನಮಾಮ್ ಇವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ನಮ್ಮ ಕಕ್ಷಿದಾರರು, ಮೈಸೂರು ಸಿಟಿ, ಹೆಬ್ಬಾಳು 2ನೇ ಹಂತ, 2ನೇ ಮೇನ್, 6ನೇ ಕ್ರಾಸ್, ಮನೆ ನಂ. 172 ಆರ್.ಎಸ್. ರಲ್ಲಿ ವಾಸವಾಗಿರುವ ಶ್ರೀ ಜಗದೀಶ್ ಚಂದ್ರಮೌಳಿ ಎಸ್.ವಿ. ರವರ ಧರ್ಮಪತ್ನಿಯಾದ ಶ್ರೀಮತಿ ಚೈತ್ರ.ಜೆ ರವರ ಮಾಲೀಕತ್ವಕ್ಕೆ ಒಳಪಟ್ಟ ಅನುಸೂಚಿಯಲ್ಲಿ ನಮೂದು ಮಾಡಿರುವ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಆಸಕ್ತಿ ಹಾಗೂ ಹಿತಾಸಕ್ತಿ ಇದ್ದಲ್ಲಿ ಅಥವಾ ಈ ಕುರಿತು ಯಾರಿಗಾದರೂ ಯಾವುದೇ ರೀತಿಯ ತಕರಾರು ಇದ್ದಲ್ಲಿ ಸದರಿ ವ್ಯಕ್ತಿಗಳು ಸೂಕ್ತ ದಾಖಲಾತಿಗಳೊಡನೆ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 7 ದಿನಗಳೊಳಗೆ ತಮ್ಮ ತಕರಾರನ್ನು ಖುದ್ದಾಗಿಯಾಗಲೀ ಅಥವಾ ಲಿಖಿತ ರೂಪದಲ್ಲಾಗಲೀ ನಮ್ಮ ಕಛೇರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ 7 ದಿನಗಳೊಳಗೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಕ್ರಯಪತ್ರವನ್ನು ಬರೆಸಿ ನೋಂದಣಿ ಮಾಡಿಸಿ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಆನಂತರ ಬಂದ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮದ ವಸತಿ ಉದ್ದೇಶಕ್ಕಾಗಿ ಅನ್ಯಾಕ್ರಾಂತವಾಗಿರುವ, (ಸರ್ವೆ ನಂ.91/15 ರಲ್ಲಿ ವಿಸ್ತೀರ್ಣ 0–14 ಗುಂಟೆ) ಸ್ವತ್ತಿನ ಸಂಖ್ಯೆ: 152200403127021353, ಸ್ವತ್ತಿನ ಸಂಖ್ಯೆ (ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ) 2141, ಒಟ್ಟು ವಿಸ್ತೀರ್ಣ 1416.40 ಚದರ ಮೀಟರ್ ಖಾಲಿ ನಿವೇಶನ ಸ್ವತ್ತಿಗೆ ಚೆಕ್ಕುಬಂದಿ:–

ಪೂರ್ವಕ್ಕೆ : ಶ್ರೀಧರ್ ಮತ್ತು ಜಯಪ್ರಕಾಶ್ ರವರ ಜಮೀನು, ಪಶ್ಚಿಮಕ್ಕೆ: ಗೋವಿಂದರಾಜು, ನಾಗರಾಜು ಮತ್ತು ನಾರಾಯಣ ರವರ ಜಮೀನು, ಉತ್ತರಕ್ಕೆ : ವೆಂಕಟೇಶ್‌ರವರ ಜಮೀನು, ದಕ್ಷಿಣಕ್ಕೆ: ಸರ್ಕಾರಿ ಓಣಿ

Sd/- N.Lokesh
B.A., LL.B., Advocate
#374/1, 1st Floor, Thyagaraja Main Road, K.R.Mohalla, Mysore-570024.

ದಿನಾಂಕ: 31–12–2022

ನಗರಸಭಾ ಕಾರ್ಯಾಲಯ, ಹೂಟಗಳ್ಳಿ, ಮೈಸೂರು

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ–570018
ದೂ: 0821-2001737, http://www.hootagallicity.mrc.gov.in, E-Mail: itstaff_ulb_hootagalli@yahoo.com

ಸಂ: ನಸಹೂ:ಕಂಶಾ:01:2022–23 ದಿನಾಂಕ: 31.12.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆಯ ವ್ಯಾಪ್ತಿಯಲ್ಲಿರುವ ವಸತಿ ಆಸ್ತಿಗಳ ಜಿಐಎಸ್ ಸರ್ವೆ ಕಾರ್ಯ ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ / ಗುತ್ತಿಗೆದಾರರು **https://eproc.karnataka.nic.in** ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 07.01.2023 ಸಂಜೆ 4.30 ಗಂಟೆ.** ಟೆಂಡರ್ ತೆರೆಯುವ **ದಿನಾಂಕ: 09.01.2023 ಸಂಜೆ 5.00 ಗಂಟೆ.**

CMC/HTGL/RS/GIS/01/2022-23 : ಅಂದಾಜು ಮೊತ್ತ: ರೂ. 10.00 ಲಕ್ಷ.

ಸಹಿ/–
ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿ ಸಾಯಿ/830/2022–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ : 25/2022 – 23/4282–86 ದಿನಾಂಕ: 31–12–2022

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್_ ಕೆ.ಡಬ್ಲ್ಯೂ–1, ರನ್ವಯ ಏಕಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿ ಮಡಿಕೇರಿ ತಾಲ್ಲೂಕಿನ ಲೆ.ಶೀ: 5054– (ಗ್ರಾಮಬಂಧ ಸೇತುವೆ) ಅಡಿ 2 ಕಾಮಗಾರಿ, ಮತ್ತು 8443 – ಠೇವಣಿ ವಂತಿಕೆ 1 ಕಾಮಗಾರಿ ಒಟ್ಟು 3 ಕಾಮಗಾರಿಗಳಿಗೆ ಇ – ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.5.07 ಲಕ್ಷ ಹಾಗೂ ಗರಿಷ್ಠ ರೂ.33.89 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ: 31–12–2022 ರಿಂದ ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16.01.2023 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ – ಸಂಗ್ರಹಣಾ ವೇದಿಕೆ **http://www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ / ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಗುರುಗಳು : ನೀನೇಕೆ ಶಾಲೆಗೆ ದಿನಾಲೂ ತಡವಾಗಿ ಬರುತ್ತೀ?
ವಿದ್ಯಾರ್ಥಿ : ನೀವೇಕೆ ದಿನಾಲೂ ನಾನು ಬರುವುದಕ್ಕೆ ಮುಂಚೆ ಬೆಲ್ಲು ಹೊಡೆಯುತ್ತೀರಿ?!

ಮೈಸೂರು ಮಿತ್ರ

ಭಾನುವಾರ, 1 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಾವು ಯೋಚಿಸುವ ರೀತಿಯಂತೆ ನಾವು ರೂಪುಗೊಳ್ಳುತ್ತೇವೆ. ನೀವು ಯಾವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರೋ ಅದರ ಕಡೆ ನಿಮ್ಮ ಎಲ್ಲಾ ಚೈತನ್ಯ ಎಳೆಯಲ್ಪಡುತ್ತದೆ.– ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರಿ ಕೈಗಿಂತ ಹಿತ್ತಾಳೆ ಕಡಗ ಮೇಲು

ನಿಮ್ಮ ಪತ್ರಗಳು

ಹೊಸ ವರ್ಷಕ್ಕೆ ಹೊಸ ಕಾವ್ಯ

ಹೆಂಡತಿಯು 'ಸರಿ' ಇರಲು, ಅದುವೆ ಸಂಸಾರ;
ತಕ್ಕಡಿಯು 'ಸರಿ' ಇರಲು, ಅಲ್ಲೇ ವ್ಯಾಪಾರ;
ಅಕ್ಷರಗಳೊಡಗೂಡಿ, ಕಾವ್ಯ ಕವಿತೆಯ ಹಾರ,
ಹೆಣದಂತೆ, ಹೂವುಗಳು ಜೊತೆ ಸೇರಿ ದಾರ!

ನೆನಪುನಲ್ಲುಳಿವ 'ಕವಿತೆ' ಹಲಕೆಲವು ಮಾತ್ರ,
ಕಾವ್ಯ ಸೊನಯಿಸಬೇಕು, ಹೊಸ ಬಗೆಯ ಸೂತ್ರ;
ಭಾವ–ಅರ್ಥಗಳೆರಡು, ಮನದಿ, ಮೂಡದ ಹೊರತು,
ಆ ರಚನೆ, ಆ ಕವಿತೆ, ವ್ಯರ್ಥ (ಶಮ–ಮಾತ್ರ!

ಬರಿ ಶಬ್ದ ಜೋಡಣೆಯು 'ಕವಿತೆ'ಯಾಗೊಲ್ಲ,
ಭಾವ, ಅನುಭವ, ಜೀವನದರ್ಥ, ಅದು ಸುಲಭವಲ್ಲ;
ಎಲ್ಲವನು ಕಂಡು ಕೇಳಿ, 'ಅರ್ಥೈಸಿ'ಕೊಳ್ಳುವ ಜಾಣ್ಮೆ,
ಬೇಕು, ಹೃದಯವಂತಿಕೆ, ಅದು ಕವಿಯ 'ಹಿರಿಮೆ'!

ಇಂಪಾದ ಸಂಗೀತ, ತರುವಂತೆ 'ಆನಂದ',
ಸೊಂಪಾಗಿ ಬರೆದಿಹ ಕವಿತೆ, ಓದಲೂ ಚೆಂದ;
ಹಾಡಾಗಬಲ್ಲೊಡೆ, ಆ 'ಕವಿ'ಯ ಕಾವ್ಯ'
ಸಾರ್ಥಕವು ಕವಿಯ ಶ್ರಮ–ಅದು 'ಜೀವ–ಕಾವ್ಯ!'

–ನಖಾಟೆ ಆನಂದರಾವ್, ಮೈಸೂರು.

ಮೈವಿವಿ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಪರದಾಟ

ಮಾನ್ಯರೆ,

ಮೈಸೂರು ವಿ.ವಿ.ಯಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆದ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಈಗಾಗಲೇ ತರಗತಿಗಳು ಆರಂಭಗೊಂಡಿವೆ.

ಮಾನಸಗಂಗೋತ್ರಿ ಆವರಣದಲ್ಲಿರುವ ವಿದ್ಯಾರ್ಥಿನಿಲಯಗಳು ತಿಂಗಳ ಹಿಂದೆ ಸ್ಥಗಿತಗೊಂಡು ಈಗ ಇನ್ನೂ ಕಾರ್ಯನಿರ್ವಹಿಸದ ಕಾರಣ ದೂರದ ಊರುಗಳಿಂದ ಬರುವ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಪ್ರಕ್ರಿಯೆಯಲ್ಲಿ ಅಜಾಗರೂಕತೆ ನಡೆ ಎದ್ದು ಕಾಣುತ್ತಿದ್ದು, ಆಯ್ಕೆ ಪಟ್ಟಿಯ ಪ್ರಕಾರ ನಡೆಯಬೇಕಾದ ಪ್ರವೇಶಾತಿಯು ಸರಿಯಾದ ಕ್ರಮವನ್ನು ಅನುಸರಿಸದೆ ವಿದ್ಯಾರ್ಥಿಗಳು ಗೊಂದಲಕ್ಕೀಡಾಗಿದ್ದಾರೆ. ವಿಕಲಚೇತನರಿಗೆ (ದೃಷ್ಟಿದೋಷ) ಮೊದಲ ದಿನವೇ ಪ್ರವೇಶಾತಿ ನೀಡದೆ ಅಲೆದಾಡಿಸಿರುವುದು ಅಧಿಕಾರಿಗಳು ಸ್ಪಂದಿಸುವ ರೀತಿಯನ್ನು ಪ್ರದರ್ಶಿಸುತ್ತಿದೆ. ಪ್ರವೇಶ ಶುಲ್ಕ ಹಾಗೂ ಕೊಠಡಿಗಳ ಹಂಚಿಕೆಯ ವಿಚಾರದಲ್ಲಿಯೂ ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಿಲಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಕ್ರಮವಹಿಸಿ ವಿದ್ಯಾರ್ಥಿಗಳ ದಿಕ್ಕುಗೆಡಿಸದೇ ನಿಲಯಗಳನ್ನು ಪ್ರಾರಂಭಿಸಬೇಕು. ಆಯ್ಕೆಪಟ್ಟಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಯಾವುದೇ ರೀತಿಯ ಅನ್ಯಾಯವಾಗದಂತೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ನೀಡಬೇಕು.

–ಪ್ರದೀಪ್ ಸೋಗಳ್ಳಿ, ಮೈಸೂರು.

ನಿರ್ಲಕ್ಷ್ಯಕ್ಕೊಳಗಾಗಿರುವ ನೂತನ ಡಾ.ಬಿ.ಆರ್.ಅಂಬೇಡ್ಕರ್ ಭವನ

ಮಾನ್ಯರೆ,

ನಿರ್ಲಕ್ಷ್ಯ, ಆಲಸ್ಯ ಮನುಷ್ಯನಿಗೆ ಸಾಮಾನ್ಯ. ಆದರೆ ಜನಪ್ರತಿನಿಧಿಗಳಾದ ಎಂಎಲ್‌ಎ, ಎಂಪಿ, ವಿಧಾನಪರಿಷತ್ ಸದಸ್ಯರುಗಳಿಗೂ ನಿರ್ಲಕ್ಷ್ಯವೇ, ಆಲಸ್ಯವೇ?

ಅಪಾರ ಜನರ ಗೌರವ ಮತದಾರರ ಮೂಲಕ ಆಯ್ಕೆಯಾದವರು ಅವರ ಆಶೋತ್ತರಗಳಿಗೆ ಅನುಗುಣವಾಗಿ ಅಭಿವೃದ್ಧಿ ಕೆಲಸಗಳನ್ನು ಹಮ್ಮಿಕೊಳ್ಳುವುದು ಕರ್ತವ್ಯ. ಆದರೆ ಜನ ಸಮುದಾಯದ ನಡುವೆ ಅಸಮಾನತೆಯ ಬೆಂಕಿಯ ಬೇಗೆಯಲ್ಲಿ ನಲುಗಿ ಹೋಗಿರುವ ಜನರ ಆಶಾಕಿರಣವಾಗಿ ಕೆಲವು ಅಭಿವೃದ್ಧಿ ಕೆಲಸಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಕೂಡ ನಿರ್ಲಕ್ಷ್ಯವೆ. ಭಾರತದ ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಈ ಜನರ ಸಮಾನತೆಗಾಗಿ ಹೋರಾಡಿದ ರಾಷ್ಟ್ರ ನಾಯಕರು. ಇವರ ಹೆಸರಿನ ಡಾ. ಬಿ.ಆರ್. ಅಂಬೇಡ್ಕರ್ ನೂತನ ಭವನದ ಮೇಲೆ ಯಾಕೆ ಈ ನಿರ್ಲಕ್ಷ್ಯ.

ಚಾಮುಂಡಿ ಗೆಸ್ಟ್ ಹೌಸ್ ಹಿಂಭಾಗದಲ್ಲಿ ಕರ್ನಾಟಕ ಕಲಾಮಂದಿರದ ಮಾದರಿಯಲ್ಲಿಯೇ ವಿಶಿಷ್ಟ ಹಾಗೂ ವಿಶಾಲ ಸಭಾ ಭವನ ಸಂಪೂರ್ಣ ಸುಸಜ್ಜಿತವಾಗಿದ್ದರೂ ಯಾರೂ ಯಾಕೆ ಇದರ ಉದ್ಘಾಟನೆಗೆ ಮುಂದಾಗುತ್ತಿಲ್ಲ. ಇದರ ಸದುಪಯೋಗಕ್ಕೆ ಮನಸ್ಸು ಮಾಡಿಲ್ಲ. ಆಸಕ್ತಿಯೇ ಇಲ್ಲ, ಇಚ್ಛಾಶಕ್ತಿಯ ಕೊರತೆಯೋ ಇಲ್ಲ, ಸಾರಾಸಗಟಾಗಿ ನಿರ್ಲಕ್ಷ್ಯವೋ ಯಾವುದು ಕಾರಣವಿರಬಹುದು. ಇದು ಈ ಜನರ ಉಪಯೋಗಕ್ಕೆ ಸಜ್ಜುಗೊಳ್ಳುವುದು ಯಾವಾಗ? ನಿಮ್ಮ ನಿರ್ಲಕ್ಷ್ಯ ಹೀಗೆಯೇ ಮುಂದುವರೆಯಲಿ. ಮುಂದಿನ ದಿನಗಳಲ್ಲಿ ಈ ಜನ ನಿಮ್ಮನ್ನು ನಿರ್ಲಕ್ಷಿಸುವುದರ ಅವಕಾಶ ಸಿಗುತ್ತದೆ. ಜನ ಉಪಯೋಗಿ ಕೆಲಸಗಳಿಗೆ ಯಾವಾಗಲೂ ನಿಮ್ಮ ಕೈಗಳು ಮನಸುಗಳು ಕೊಡುಗೆ ನೀಡಲಿ. ನಿಮ್ಮ ಹೆಸರನ್ನು ನಿಮ್ಮ ಕೆಲಸಗಳನ್ನು ಶಾಶ್ವತ ನೆಲೆಗಟ್ಟಿನಲ್ಲಿ ಉಳಿಯುವಂತಾಗಲಿ.


– ಆರ್.ರಂಗಸ್ವಾಮಿ ಶಾಂತ, ಅಶೋಕಪುರಂ, ಮೈಸೂರು.

ಇಂತಹ ಸಾಮಾಜಿಕ ಕಳಕಳಿಯುಳ್ಳ ಜನಪ್ರತಿನಿಧಿಗಳು ಸಮಾಜಕ್ಕೆ ಅಗತ್ಯ

ಮಾನ್ಯರೆ,

ಹಲವಾರು ವರ್ಷಗಳಿಂದ ಮೈಸೂರಿನ ತಾಲೂಕು ಕಚೇರಿ ಮಿನಿ ವಿಧಾನಸೌಧ ನಜರ್‌ಬಾದ್‌ನಲ್ಲಿ ಲಿಫ್ಟ್ ಕೆಟ್ಟು ಹೋಗಿ ಕಚೇರಿಗೆ ನಾನಾ ಕೆಲಸಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಹಿರಿಯ ನಾಗರಿಕರಿಗೆ ಮೆಟ್ಟಿಲು ಹತ್ತಿ ಕಷ್ಟಪಡುವ ಸ್ಥಿತಿ ಇತ್ತು. ಹಲವಾರು ಬಾರಿ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದರೂ ಏನೂ ಪ್ರಯೋಜನವಾಗಿರಲಿಲ್ಲ. ಪರಿಸ್ಥಿತಿಯನ್ನು ಮನಗಂಡ ಹಾಲಿ ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡರು ತಮ್ಮ ವೈಯಕ್ತಿಕ ಹಣ 2.5 ಲಕ್ಷ ರೂ. ಖರ್ಚು ಮಾಡಿ ಲಿಫ್ಟ್ ವ್ಯವಸ್ಥೆ ಮಾಡಿಕೊಟ್ಟಿರುವುದಕ್ಕೆ ಅವರಿಗೆ ಎಲ್ಲಾ ಹಿರಿಯ ನಾಗರಿಕರ ಪರವಾಗಿ ಧನ್ಯವಾದಗಳು. ಎಲ್ಲಾ ಜನಪ್ರತಿನಿಧಿಗಳು ಇವರನ್ನು ಅನುಸರಿಸಿ ಸಮಾಜಮುಖಿ ಕಾರ್ಯಗಳನ್ನು ಮಾಡಲಿ.

–ಜಿ.ಪಿ. ರಾಜೇಶ್, ವಿ.ವಿ. ಮೊಹಲ್ಲಾ, ಮೈಸೂರು.



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...


ದೇವಮಾನವ ಚಂದ್ರಸ್ವಾಮಿ ಹಾಗೂ ಮಾರ್ಗರೇಟ್ ಥ್ಯಾಚರ್



ಚಂದ್ರಸ್ವಾಮಿ



ಮಾರ್ಗರೇಟ್ ಥ್ಯಾಚರ್



ಯೋಗಿ ಅರ್ಕಾ

ಕಬ್ಬಿಣವು ಕರಗಿದಾಗ ದ್ರವ ರೂಪದ ಕಬ್ಬಿಣ ದೊರೆಯುವುದು. ಆದರೆ ಕಬ್ಬಿಣದ ಮಹಿಳೆ (Iron Lady) ಸತ್ತಾಗ, ಸುಟ್ಟರೆ ಬೂದಿ ದೊರೆಯುವುದು ಅಥವಾ ಮಣ್ಣು ಮಾಡಿದರೆ ಧೂಳು ದೊರೆಯುವುದು–"ಧೂಳಿನಿಂದ ಜನಿಸಿದ ನೀನು ಮರಳಿ ಧೂಳು ಸೇರುವೆ' (Dust thou art and to dust thou shalt return)

ಗ್ರೇಟ್ ಬ್ರಿಟನ್ ದೇಶದ ಐರನ್ ಲೇಡಿ ಎಂದೇ ಕರೆಯಲ್ಪಡುತ್ತಿದ್ದ ಬ್ರಿಟನ್ ಮಾಜಿ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ಇತ್ತೀಚೆಗೆ ಮರಣ ಹೊಂದಿದರು. ಮೊನ್ನೆ ತಾನೆ ಅವರ ಅಂತ್ಯಸಂಸ್ಕಾರ ನಡೆದಿದ್ದು, ಕ್ರಿಶ್ಚಿಯನ್ ಪದ್ಧತಿ ಪ್ರಕಾರ ಅವರನ್ನು ದಫನ್ ಮಾಡಿರುವುದರಿಂದ, ಈ ಕಬ್ಬಿಣವು ಕೂಡ ನಿಸ್ಸಂದೇಹವಾಗಿ ಧೂಳು ಸೇರುವುದು.

ಮೃತ್ಯು ಎಂಬುದು ಸಮಕಾರಿಗೊಳಿಸುವ ಒಂದು ವ್ಯವಸ್ಥೆ. ಬದುಕಿದ್ದಾಗ ಮಾತ್ರ ನಾವು ವಿಭಿನ್ನವಾಗಿರುತ್ತೇವೆ. ಆದರೂ ಕೂಡ, ಕೆಲವು ಖಾಸಗಿ ವಿಚಾರಗಳಲ್ಲಿ ಎಲ್ಲಾ ಮನುಷ್ಯರೂ, ಎಷ್ಟೇ ದೊಡ್ಡವರಿರಲಿ ಅಥವಾ ಚಿಕ್ಕವರಿರಲಿ, ಒಂದೇ ರೀತಿ ವರ್ತಿಸುತ್ತಾರೆ. ಉದಾಹರಣೆಗೆ ಮಾರ್ಗರೇಟ್ ಥ್ಯಾಚರ್ ವಿಚಾರದಲ್ಲಿ; ಈ ಬಗ್ಗೆ ಭಾರತೀಯ ಮಾಜಿ ರಾಯಭಾರಿ ಹಾಗೂ ಕೇಂದ್ರ ಸಚಿವ ಕೆ.ನಟ್‌ವರ್‌ಸಿಂಗ್ ತಮ್ಮ ಪುಸ್ತಕ "Walking with lions: Tales from a diplomatic past" ನಲ್ಲಿ ಉಲ್ಲೇಖಿಸಿದ್ದಾರೆ.

ಚಂದ್ರಸ್ವಾಮಿ ಭಾರತದ ಕುಖ್ಯಾತ ದೇವಮಾನವರಾಗಿದ್ದು, ಇವರ ಸೇವೆಯನ್ನು ಪಡೆದ ಹಲವಾರು ಶ್ರೀಮಂತ ಮತ್ತು ಪ್ರಭಾವಿ ಖ್ಯಾತ ನಾಮರ ಪೈಕಿ ಹಾಲಿವುಡ್ ತಾರೆ ಎಲಿಜಬೆತ್ ಟೇಲರ್ ಹಾಗೂ ಮಾಜಿ ಪ್ರಧಾನಮಂತ್ರಿ ಪಿ.ವಿ. ನರಸಿಂಹ ರಾವ್ ಕೂಡ ಇದ್ದಾರೆ. ಅವರನ್ನು ಓರ್ವ ಸಿದ್ಧಪುರುಷ ತಾಂತ್ರಿಕ್ ಹಾಗೂ ಜ್ಯೋತಿಷಿ ಎಂದು ಜನರು ಗುರುತಿಸಿದ್ದರು. ಅಕ್ರಮ ಹಣಕಾಸು ವ್ಯವಹಾರ ಮತ್ತು ರಾಜೀವ್ ಗಾಂಧಿ ಹತ್ಯೆಯಲ್ಲಿ ಭಾಗಿಯಾಗಿರುವ ಆರೋಪದ ಹಿನ್ನೆಲೆಯಲ್ಲಿ ಚಂದ್ರಸ್ವಾಮಿಯನ್ನು 1996ರಲ್ಲಿ ಬಂಧಿಸಲಾಗಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಇವರು ಕೊನೆಗೆ ಅವಮಾನಿತ ದೇವಮಾನವರಾದರು. ಈಗ ಅವರ ಬಗ್ಗೆ ಯಾರೂ ಮಾತನಾಡುವುದಿಲ್ಲ.

ನಟ್‌ವರ್‌ಸಿಂಗ್ ಹೇಳುವ ಪ್ರಕಾರ, ಅವರು ಲಂಡನ್‌ನಲ್ಲಿ ಡೆಪ್ಯೂಟಿ ಹೈ ಕಮಿಷನರ್ ಆಗಿ 1975ರಲ್ಲಿ ಸೇವೆ ಸಲ್ಲಿಸುತ್ತಿರುವಾಗ, ಚಂದ್ರಸ್ವಾಮಿ ಇವರಿಗೆ ದೂರವಾಣಿ ಕರೆ ಮಾಡಿ ತಾನು ಲಂಡನ್‌ನಲ್ಲಿ ತಂಗಿರುವಲ್ಲಿಗೆ ಬಂದು ಭೇಟಿ ಮಾಡುವಂತೆ ಆಗ್ರಹಿಸಿದ್ದರಂತೆ. ಸಿಂಗ್ ಈ ಆಹ್ವಾನವನ್ನು ನಿರಾಕರಿಸಿ, ಬೇಕಿದ್ದರೆ 'ಇಂಡಿಯಾ ಹೌಸ್'ನಲ್ಲಿರುವ ತನ್ನ ಕಚೇರಿಗೆ ಬಂದು ತನ್ನನ್ನು ಕಾಣಬಹುದು ಎಂದು ಹೇಳಿದರಂತೆ. ಚಂದ್ರಸ್ವಾಮಿ ಒಪ್ಪಿಕೊಂಡರು. ಚಂದ್ರಸ್ವಾಮಿ ಆಗ ಯುವಕ, ಇಪ್ಪತ್ತರ ಹರೆಯ. ಒಂದು ಅಕ್ಷರ ಕೂಡ ಇಂಗ್ಲಿಷ್ ಮಾತನಾಡಲು ಬರುತ್ತಿರಲಿಲ್ಲ. ಈಗ ಚೆನ್ನಾಗಿ ಮಾತನಾಡಬಲ್ಲರು ಎಂದು ತೋರುತ್ತದೆ. ಸಂಭಾಷಣೆಯ ನಡುವೆ ಖ್ಯಾತನಾಮರ ಹೆಸರನ್ನು ನಡುವೆ ತೂರಿಸುವಲ್ಲಿ ಇವರು ನಿಸ್ಸೀಮರಂತೆ.

ಕೆಲ ದಿನಗಳ ನಂತರ ಇವರು ನಟ್‌ವರ್‌ಸಿಂಗ್‌ರನ್ನು ಭೇಟಿಯಾಗಿ, ಅವರನ್ನು ಹಾಗೂ ಅವರ ಪತ್ನಿಯನ್ನು ಊಟಕ್ಕೆ ಕರೆದರಂತೆ. ಊಟವಾದ ಬಳಿಕ, ಚಂದ್ರಸ್ವಾಮಿ ತನ್ನ ಮಾಯಾವಿ ಆಟ ಪ್ರಾರಂಭಿಸಿದರಂತೆ. ಈ ಆಟವು ಮಾಟ ಮಂತ್ರದಂತೆ ತೋರುತ್ತದೆ ಎಂದು ನಮ್ಮ ಬಹಳಷ್ಟು ಓದುಗರು ಒಪ್ಪಿಕೊಳ್ಳುತ್ತಾರೆ; ಆದರೆ ಸುಳ್ಳು ಎಂದು ಕಡೆಗಾಣಿಸುವಂತಿಲ್ಲ. ಏಕೆಂದರೆ ಅವರಿಗೆ ಸ್ವತಃ ಅದರ ಅನುಭವ ಆಗಿರುತ್ತದೆ. ನಾನೂ ಇದನ್ನು ಅನುಭವಿಸಿದ್ದು, ಅದರ ಬಗ್ಗೆ ನಂತರ ಹೇಳುವೆ.

ಚಂದ್ರಸ್ವಾಮಿ ಮೂರು ಖಾಲಿ ಚೀಟಿಗಳನ್ನು ನಟವರ್‌ಸಿಂಗ್ ಪತ್ನಿಗೆ ನೀಡಿ, ಒಂದೊಂದರಲ್ಲೂ ಒಂದು ಪ್ರಶ್ನೆಯನ್ನು ಬರೆಯಲು ಹೇಳಿದರಂತೆ. ನಂತರ ಆ ಚೀಟಿಗಳನ್ನು ಉಂಡೆ ಮಾಡಿ ಚೆಸ್ ಬೋರ್ಡ್‌ನ ಒಂದೊಂದು ಚೌಕದಲ್ಲಿ ಇಡುವಂತೆ ಸೂಚಿಸಿದರಂತೆ. ಶ್ರೀಮತಿ ಸಿಂಗ್ ಪ್ರಶ್ನೆಗಳನ್ನು ಇಂಗ್ಲಿಷ್‌ನಲ್ಲಿ ಬರೆದರಂತೆ. "ನಂತರ ಚಂದ್ರಸ್ವಾಮಿ ಕಣ್ಣು ಮುಚ್ಚಿಕೊಂಡು ಧ್ಯಾನ ಮಗ್ನರಾದರು". ಕೆಲ ನಿಮಿಷಗಳ ನಂತರ, ಉಂಡೆಗಟ್ಟಿದ್ದ ಮೂರು ಚೀಟಿಗಳ ಪೈಕಿ ಒಂದನ್ನು ಬಿಡಿಸಲು ಹೇಳಿದರಂತೆ. ಅದರಲ್ಲಿ ಬರೆದಿದ್ದ ಪ್ರಶ್ನೆ ಏನೆಂಬುದನ್ನು ಚಂದ್ರಸ್ವಾಮಿ, ಶ್ರೀಮತಿ ಸಿಂಗ್‌ಗೆ ಹೇಳಿದರಂತೆ. ಅದು ಸರಿಯಾಗಿಯೇ ಇತ್ತು. ಉಳಿದ ಎರಡು ಪ್ರಶ್ನೆಗಳನ್ನು ಕೂಡ ಚಂದ್ರಸ್ವಾಮಿ ಸರಿಯಾಗಿ ಹೇಳಿದರಂತೆ. ನಟ್‌ವರ್ ಸಿಂಗ್ ಹಾಗೂ ಅವರ ಪತ್ನಿ ಅಚ್ಚರಿಗೊಂಡರಂತೆ.

ನಟ್‌ನರ್‌ಸಿಂಗ್ ಓರ್ವ ಉತ್ತಮ ಕಥಾ ನಿರೂಪಕನಾಗಿದ್ದು, ಚೀಟಿಯಲ್ಲಿ ಬರೆಯಲಾದ ಪ್ರಶ್ನೆಗಳು ಹಾಗೂ ಅವುಗಳಿಗೆ ಚಂದ್ರಸ್ವಾಮಿ ನೀಡಿದ ಉತ್ತರದ ಬಗ್ಗೆ ಓದುಗರಿಗೆ ತಿಳಿಸಿಲ್ಲ. ಬಹುಶಃ ಆ ಉತ್ತರಗಳು ತೀರಾ ಖಾಸಗಿಯಾಗಿರಬೇಕು. ಆದರೆ, ಓದುಗರ ಕುತೂಹಲವನ್ನು ತಣಿಸುವ ಸಲುವಾಗಿಯಾದರೂ ಅವರ ಪತ್ನಿ ಕೇಳಿದ ಪ್ರಶ್ನೆಗಳು ಏನು ಮತ್ತು ಚಂದ್ರಸ್ವಾಮಿಯು ಅಂದು ಭವಿಷ್ಯ ನುಡಿದಿದ್ದು ನಿಜವಾಯಿತೆ ಎಂಬುದನ್ನಾದರೂ ತಿಳಿಸಬಹುದಿತ್ತು. ಇರಲಿ ಬಿಡಿ. ನಂತರದ ವಿಚಾರ ಇನ್ನೂ ರೋಚಕವಾಗಿದೆ.

ತನ್ನ ತಾಂತ್ರಿಕ ಶಕ್ತಿಯನ್ನು ನಟ್‌ವರ್ ಸಿಂಗ್ ಮುಂದೆ ಪ್ರದರ್ಶಿಸಿ ಅವರ ವಿಶ್ವಾಸವನ್ನು ಗಳಿಸಿದ ನಂತರ, ತನ್ನನ್ನು **ಲಾರ್ಡ್ ಮೌಂಟ್ ಬ್ಯಾಟನ್ ಮತ್ತು ಮಾರ್ಗರೇಟ್ ಥ್ಯಾಚರ್‌ಗೆ ಪರಿಚಯಿಸುವಂತೆ ಕೋರಿಕೊಂಡರು**. ಥ್ಯಾಚರ್ ಆಗ ಕನ್ಸರ್‌ವೇಟಿವ್ ಪಕ್ಷದ ನಾಯಕಿಯಾಗಿದ್ದು, ಆಗಿನ್ನೂ ಐರನ್ ಲೇಡಿ ಆಗಿರಲಿಲ್ಲ ಎಂದು ನಟ್‌ವರ್ ಸಿಂಗ್ ನಮಗೆ ನೆನಪಿಸುತ್ತಾರೆ! ಇದನ್ನು ಓದಿದ ನಾನು, ಈ ಇಪ್ಪತ್ತರ ಹರೆಯದ ಸ್ವಾಮಿಯ ಉದ್ಧಟತನ, ತಲೆಹರಟೆ ಮತ್ತು ಧೈರ್ಯದ ಬಗ್ಗೆ ಹುಬ್ಬೇರಿಸಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ತಾಂತ್ರಿಕ ಸ್ವಾಮಿಯ ಆಶೆಯನ್ನು ಪೂರೈಸಲು ನಟ್‌ವರ್‌ಸಿಂಗ್ ಉತ್ಸುಕರಾದರು. ಅವರು ಮೌಂಟ್ ಬ್ಯಾಟನ್‌ಗೆ ದೂರವಾಣಿ ಕರೆ ಮಾಡಿ ಕೇಳಿಕೊಂಡಾಗ, ನಟವರ್‌ಸಿಂಗ್ ಅವರ ಅಪರಿಚಿತ ಮಿತ್ರನನ್ನು ಭೇಟಿ ಆಗುವುದಕ್ಕಿಂತ ಬದಲಾಗಿ ನಿರ್ಧಾರವಾಗಿದ್ದ ತನ್ನ ಪ್ರವಾಸಕ್ಕೆ ತೆರಳುವುದು ಸೂಕ್ತವೆಂದು ಮೌಂಟ್ ಬ್ಯಾಟನ್ ತೀರ್ಮಾನಿಸಿದರು.

ಇನ್ನು ಮಾರ್ಗರೇಟ್ ಥ್ಯಾಚರ್ ಕಚೇರಿಗೆ ನಟ್‌ವರ್ ಸಿಂಗ್ ಖುದ್ದಾಗಿ ತೆರಳಿ ತಾನು ಬಂದ ವಿಷಯ ತಿಳಿಸಿದರಂತೆ.

ಅವರು ನೀಡಿದ ಉತ್ತರ: "ನಾನು ಅವರನ್ನು ಭೇಟಿ ಆಗಬೇಕು ಎಂದು ನೀವು ಭಾವಿಸಿದರೆ, ನಾನು ಭೇಟಿ ಆಗುವೆ. ಆದರೆ ಅವರು ನನ್ನನ್ನು ಯಾಕೆ ಕಾಣಬೇಕಂತೆ?"

"ಅದನ್ನು ಅವರೇ ಹೇಳುತ್ತಾರೆ" ಎಂದು ನಟ್‌ವರ್‌ಸಿಂಗ್ ಉತ್ತರಿಸಿದರು. "ಕೇವಲ ಹತ್ತು ನಿಮಿಷಗಳು ಮಾತ್ರ ಡೆಪ್ಯೂಟಿ ಹೈ ಕಮಿಷನರ್" ಎಂದು ಆಕೆ ಖಂಡತುಂಡವಾಗಿಯೇ ಹೇಳಿದರು.

ಚಂದ್ರಸ್ವಾಮಿ, ಮಾರ್ಗರೇಟ್ ಥ್ಯಾಚರ್‌ರೊಂದಿಗೆ ಕೂಡ ಶ್ರೀಮತಿ ನಟ್‌ವರ್ ಸಿಂಗ್ ಮುಂದೆ ಪ್ರದರ್ಶಿಸಿದ ಅದೇ ತನ್ನ ತಂತ್ರವನ್ನು ಪ್ರದರ್ಶಿಸಿದರು. ಆದರೆ, ಈ ಬಾರಿ ಮೂರು ಪ್ರಶ್ನೆಗಳ ಬದಲಿಗೆ ಐದು ಪ್ರಶ್ನೆಗಳನ್ನು ಕೇಳಿದರು. ಇಲ್ಲಿ ಕೂಡ ಪ್ರಶ್ನೆಗಳು ಮತ್ತು ಉತ್ತರಗಳ ಬಗ್ಗೆ ನಮಗೆ ತಿಳಿಸಿಲ್ಲ. ಆದರೆ, ಒಂದಂತೂ ಸ್ಪಷ್ಟವಾಯಿತು; **ಮಾರ್ಗರೇಟ್ ಥ್ಯಾಚರ್, ಚಂದ್ರಸ್ವಾಮಿ ಮೋಡಿಗೆ ಮಾರುಹೋದರು**. ಆಕೆ ಚಂದ್ರಸ್ವಾಮಿಯನ್ನು ಮತ್ತೊಮ್ಮೆ ಭೇಟಿ ಆಗುವ ಇಚ್ಛೆ ವ್ಯಕ್ತಪಡಿಸಿ, ಮುಂದಿನ ಭೇಟಿ ನಟ್‌ವರ್ ಸಿಂಗ್ ಮನೆಯಲ್ಲಿ ನಡೆಯಿತು. ಇಲ್ಲಿ ಥ್ಯಾಚರ್ ಹಲವಾರು ಪ್ರಶ್ನೆಗಳನ್ನು ಕೇಳಿದ್ದು, ಅವುಗಳಲ್ಲಿ ಪ್ರಮುಖ ಎಂದರೆ ಆಕೆ ಪ್ರಧಾನಮಂತ್ರಿ ಆಗುವ ಸಾಧ್ಯತೆಗಳ ಬಗ್ಗೆ ಕುರಿತು. "ನೀವು ಒಂಬತ್ತು, ಹನ್ನೊಂದು ಅಥವಾ ಹದಿಮೂರು ವರ್ಷಗಳವರೆಗೆ ಪ್ರಧಾನಿ ಆಗಿರುತ್ತೀರಾ' ಎಂದು ಚಂದ್ರಸ್ವಾಮಿ ಭವಿಷ್ಯ ನುಡಿದರು. ಥ್ಯಾಚರ್ ಒಂದು ಅಂತಿಮ ಪ್ರಶ್ನೆ ಕೇಳಿದರು: ತಾನು ಯಾವಾಗ ಪ್ರಧಾನಿ ಆಗುವೆ ಎಂದು. ಚಂದ್ರಸ್ವಾಮಿ: "ಇನ್ನು ಮೂರು ಅಥವಾ ನಾಲ್ಕು ವರ್ಷಗಳಲ್ಲಿ".

ಅವರ ಭವಿಷ್ಯ ವಾಣಿ ನಿಜವಾಯಿತು. ಆಕೆ ಹನ್ನೊಂದು ವರ್ಷಗಳವರೆಗೆ ಪ್ರಧಾನಿ ಆಗಿದ್ದರು. **ಮಾರ್ಗರೇಟ್ ಥ್ಯಾಚರ್ ಅನ್ನು ಪ್ರಧಾನಿ ಮಾಡಲು ಚಂದ್ರಸ್ವಾಮಿ ಯಾವ ಮಾಟ–ಮಂತ್ರ ಅಥವಾ ಪವಾಡ ನಡೆಸಲಿಲ್ಲ. ಅವರು ಕೇವಲ ಭವಿಷ್ಯವನ್ನು** ಹೇಳಿದರು. ನೊಸ್ಟ್ರಾಡೇಮಸ್ ತರಹ. ಆ ಭವಿಷ್ಯವು ಪೂರ್ವ ನಿರ್ಧಾರಿತವಾಗಿತ್ತು. ಆದ್ದರಿಂದಲೇ ಚಂದ್ರಸ್ವಾಮಿಗೆ ಭವಿಷ್ಯ ನುಡಿಯಲು ಸಾಧ್ಯವಾಯಿತು... ನಿಜವೇ?

ಆದ್ದರಿಂದಲೇ ಜನರು ಜ್ಯೋತಿಷ್ಯ ಹಾಗೂ ವಿಧಿಬರಹದ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದಾರೆ. ಒಂದು ವೇಳೆ ಚಂದ್ರಸ್ವಾಮಿ ಆ ರೀತಿ ಭವಿಷ್ಯ ನುಡಿಯದಿದ್ದರೂ ಕೂಡ ಮಾರ್ಗರೇಟ್ ಥ್ಯಾಚರ್ ವಿಧಿಯ ಪ್ರಕಾರ ಏನಾಗಬೇಕಿತ್ತೋ ಅದೇ ಆಗುತ್ತಿದ್ದರು. ಆದರೆ, ಚಂದ್ರಸ್ವಾಮಿಯ ಭವಿಷ್ಯ ನುಡಿ ಕೇಳಿದ ನಂತರ ಆಕೆಗೆ ಹೆಚ್ಚಿನ ಆತ್ಮಸ್ಥೈರ್ಯ ಮತ್ತು ದೃಢಸಂಕಲ್ಪ ಬಂದಿರಬೇಕು. ಆಕೆಗೆ ಸಂತೋಷ ಕೂಡ ಆಗಿರಬೇಕು. ಲಾಭದಾಯಕ ಭವಿಷ್ಯವನ್ನು ಕೇಳಿ ನಾವುಗಳು ಕೂಡ ಸಂತೋಷದಿಂದ ಹಿಗ್ಗುವಂತೆ. ಅದೇನೆ ಇದ್ದರೂ, ಈ ವಿಚಾರದಲ್ಲಿ ಏನೋ ರೋಚಕತೆ ಇದೆ. ಏನೋ ನಿಗೂಢತೆ ಇದೆ. ಈ ದೇವಮಾನವನ ವಿಚಾರದಲ್ಲಿ ನಿಮ್ಮ ಭವಿಷ್ಯದ ಬಗ್ಗೆ ಅರಿಯುವ ಕ್ಷಮತೆ ಉಳ್ಳ ಈ ತಾಂತ್ರಿಕ ಸಿದ್ಧ ಪುರುಷನ ವಿಚಾರದಲ್ಲಿ.

ಈ ಪ್ರಕರಣದಲ್ಲಿ, ಚಂದ್ರಸ್ವಾಮಿಯು ಮೊದಲೇ ಮಾರ್ಗರೇಟ್ ಥ್ಯಾಚರ್ ಅವರ ಜಾತಕವನ್ನು ಅಧ್ಯಯನ ಮಾಡಿ ತನ್ನ ಜ್ಞಾನವನ್ನು ಆಕೆಯೊಂದಿಗೆ ಹಂಚಿಕೊಳ್ಳಲು ಮುಂದಾಗಿರಬೇಕು. ಇದೇ ಕಾರಣಕ್ಕಾಗಿ ಚಂದ್ರಸ್ವಾಮಿ ಲಾರ್ಡ್ ಮೌಂಟ್ ಬ್ಯಾಟನ್‌ರನ್ನು ಭೇಟಿ ಆಗುವ ಇಚ್ಛೆ ವ್ಯಕ್ತಪಡಿಸಿರಬೇಕು. ಆದರೆ ಮೌಂಟ್ ಬ್ಯಾಟನ್ ಉತ್ತರ ಐರ್‌ಲ್ಯಾಂಡ್‌ಗೆ ಪ್ರವಾಸ ಹೊರಟಿದ್ದರಿಂದ ಆ ಭೇಟಿ ಸಾಧ್ಯವಾಗಲಿಲ್ಲ. ಒಂದು ವೇಳೆ ಅವರು ಚಂದ್ರಸ್ವಾಮಿಯನ್ನು ಭೇಟಿಯಾಗಿದ್ದಿದ್ದರೆ ಮಾರ್ಗರೇಟ್ ಥ್ಯಾಚರ್‌ನಂತೆ ಅವರು ಕೂಡ ತನ್ನ ಭವಿಷ್ಯವನ್ನು ಕಂಡುಕೊಳ್ಳುತ್ತಿದ್ದರೇನೋ...? ಅಲ್ಲದೆ, 1987ರ ಆಸುಪಾಸಿನಲ್ಲಿ ಐರ್‌ಲ್ಯಾಂಡ್‌ಗೆ ಹೋಗದಂತೆ ಸಲಹೆ ನೀಡುತ್ತಿದ್ದರೇನೋ? ಆಗ ತಾನು ಹತ್ಯೆ ಆಗುವುದನ್ನು ಅವರು ತಪ್ಪಿಸಿಕೊಳ್ಳುತ್ತಿದ್ದರೇನೋ... ಆದರೆ ಅದು ಮೌಂಟ್ ಬ್ಯಾಟನ್, ಚಂದ್ರಸ್ವಾಮಿಯ ಸಲಹೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದರೋ ಇಲ್ಲವೋ ಎಂಬುದರ ಮೇಲೆ ಆಧರಿಸಿರುತ್ತಿತ್ತು.

ಅದೇನೆ ಇರಲಿ. ಈ ಪ್ರಶ್ನೆ–ಉತ್ತರದ ಆಟವನ್ನು ನಾನು ಅನುಭವಿಸಿದ್ದು–ಚಂದ್ರಸ್ವಾಮಿ ಆಡಿರುವಂತೆ – ಆ ಅನುಭವವನ್ನು ಇಲ್ಲಿ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಅದು 1962 ಇಸವಿ. ಹಿರಿಯ ವಕೀಲರಾದ ರೇಗೊ ಎಂಬುವವರ ಬಳಿ ನಾನು ಕಿರಿಯ ವಕೀಲನಾಗಿ ಬೆಂಗಳೂರಿನ ಇನ್ಫೆಂಟ್ರಿ ರಸ್ತೆಯಲ್ಲಿರುವ ಕಚೇರಿಗೆ ಸೇರಿ ಆರು ತಿಂಗಳಾಗಿತ್ತು. ಈ ವೃತ್ತಿಯಲ್ಲಿ ಸುದೀರ್ಘ ತ್ರಾಸದಾಯಕ ಪ್ರಯಾಣವನ್ನು ಬೆಳೆಸಿ ತೀವ್ರ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು ಎಂದು ನನಗೆ ಆಗ ಅನ್ನಿಸಿತ್ತು. ಆಗ ನನ್ನ ವಯಸ್ಸು 22 ವರ್ಷಗಳು. ಇದೇ ದೋಣಿಯಲ್ಲಿ ನನ್ನೊಂದಿಗೆ ಪ್ರಯಾಣಿಸುತ್ತಿದ್ದ ನನ್ನ ಇಬ್ಬರು ಮಿತ್ರರು ಕೂಡ ಇದ್ದರು.

ಒಬ್ಬ ನನಗಿಂತ ಹಿರಿಯನಾಗಿದ್ದು, ಷಾ ವ್ಯಾಲೆಸ್ ಸಂಸ್ಥೆಯಲ್ಲಿ ದುಡಿಯುತ್ತಿದ್ದು, ಬಹಳ ಅಸಂತುಷ್ಟನಾಗಿದ್ದ. ಮತ್ತೊಬ್ಬ ಗ್ಯಾಮನ್ ಫ ಕೆಮ್‌ನ ತನ್ನ ನೌಕರಿಯನ್ನು ಬಿಟ್ಟು ಕಾನೂನು ಶಾಸ್ತ್ರ ಅಧ್ಯಯನ ಕೈಗೊಳ್ಳಬೇಕೆಂದು ಆಸಕ್ತಿ ವಹಿಸಿದ್ದ – ಬೇಡ ಎಂದು ನಾನು ಸಲಹೆ ನೀಡಿದರೂ ಕೂಡ. ನಾವು ಒಬ್ಬ ಖ್ಯಾತ ಜ್ಯೋತಿಷಿಯ ಬಳಿ ಹೋದೆವು. –ಈ ಜ್ಯೋತಿಷಿಗೆ ನಿಮ್ಮ ಜನ್ಮ ದಿನಾಂಕವನ್ನು ಹೇಳಿದರೆ ಸಾಕು; ಕವಡೆ ಹಾಗೂ ನಕ್ಷೆಗಳ ಮೂಲಕ ಲೆಕ್ಕಾಚಾರ ಹಾಕುತ್ತಾರೆ. ಆದರೆ ನಮ್ಮ ವಿಚಾರದಲ್ಲಿ ವಿಭಿನ್ನವಾಗಿತ್ತು. ಆ ಜ್ಯೋತಿಷಿಯು ನನಗೆ ಮೂರು ಚೀಟಿಗಳನ್ನು ನೀಡಿ ಚಂದ್ರಸ್ವಾಮಿಯಂತೆಯೇ ನಿರ್ದೇಶನ ನೀಡಿದರು. ಆದರೆ ಚೀಟಿಯನ್ನು ಉಂಡೆ ಗಟ್ಟಿ ಇಡುವ ಬದಲು ನನ್ನ ಮುಂದೆ ಮಗುಚಿ ಇಡಲು ಹೇಳಲಾಯಿತು.

ನನ್ನ ಮೊದಲ ಪ್ರಶ್ನೆ : ನಾನು ವಕೀಲನಾಗಿ ವೃತ್ತಿಯಲ್ಲಿ ಮುಂದುವರಿಯಬೇಕೆ?

ಉತ್ತರ : ಬೇಡ

ಎರಡನೇ ಪ್ರಶ್ನೆ : ನಾನು ಒಂದು ಕೆಲಸಕ್ಕಾಗಿ ಅರ್ಜಿ ಹಾಕಿದ್ದೇನೆ. ಅದು ನನಗೆ ಸಿಗುವುದೇ?

ಉತ್ತರ : ಇಲ್ಲ

ಮೂರನೇ ಪ್ರಶ್ನೆ : ನನಗೆ ಯಾವ ವ್ಯಾಪಾರ / ವೃತ್ತಿ ಸೂಕ್ತ?

ಉತ್ತರ : ಮುದ್ರಣ

ಮುದ್ರಣ ವೃತ್ತಿಗೆ ನಾನು ಅರ್ಹತೆ ಪಡೆದಿಲ್ಲ; ನಾನೊಬ್ಬ ಕಿರಿಯ ವಕೀಲ ಎಂದು ಅವರಿಗೆ ಹೇಳಿದೆ. ಆಗ ಅವರು ಹೇಳಿದರು, "ಮುದ್ರಣ ಎಂದರೆ ಟೈಪಿಂಗ್ ಕೂಡ ಆಗುತ್ತದೆ; ನೀವು ಟೈಪಿಂಗ್ ಇನ್‌ಸ್ಟಿಟ್ಯೂಟ್ ಅನ್ನು ಪ್ರಾರಂಭಿಸಬಹುದು" ಎಂದು. ನನಗೆ ಕೋಪ ಬಂತು. ಆದರೆ ಏನೂ ಮಾತನಾಡಲಿಲ್ಲ. ಆತನಿಗೆ ಎರಡು ರೂಪಾಯಿ ನೀಡಿ ಜಾಗ ಖಾಲಿ ಮಾಡಿದೆ. – ನನ್ನೊಂದಿಗೆ ಬಂದ ಮಿತ್ರರ ಸರದಿಗಾಗಿ.

ಈಗ ನಾನು ಎಲ್ಲಿರುವೆ ನೋಡಿ. ನಾನು ಮುದ್ರಕನಲ್ಲವೆ? ನಾನು 1964ರಲ್ಲಿ ಪತ್ರಿಕೋದ್ಯಮ ವೃತ್ತಿ ಪ್ರವೇಶಿಸಿದೆ. ಅದು ಈ ಜ್ಯೋತಿಷಿಯನ್ನು ಭೇಟಿ ಆದ ಎರಡು ವರ್ಷಗಳಲ್ಲಿ. ಅಲ್ಲಿಂದ ಇಲ್ಲಿಯವರೆಗೆ ನಾನು ಮುದ್ರಣ ವೃತ್ತಿಯಲ್ಲೇ ಮುಂದುವರಿದಿದ್ದೇನೆ? ಆ ಜ್ಯೋತಿಷಿ ಹೇಳಿದ್ದು ಸುಳ್ಳೆ? ಹಿಂತಿರುಗಿ ನೋಡಿದರೆ, ಇಲ್ಲ ಅನ್ನಿಸುತ್ತೆ.

ಮತ್ತೊಂದು ಅನುಭವ ಕೂಡ ಇದೆ. ಈ ಅನುಭವವನ್ನು ನಾನು ನಮ್ಮ ಓದುಗರೊಂದಿಗೆ ಬಹುಶಃ 25 ವರ್ಷಗಳ ಹಿಂದೆ (2023ಕ್ಕೆ ಅದು 35 ವರ್ಷವಾಗುತ್ತೆ) ಹಂಚಿಕೊಂಡಿದ್ದೆ ಎಂಬ ನೆನಪು.

ಎಂಭತ್ತರ ದಶಕದ ಆರಂಭದಲ್ಲಿ, ನಾನು ಎರಡೂವರೆ ಎಕರೆ ಒಣ ಭೂಮಿಯನ್ನು ಗದ್ದಿಗೆ ರಸ್ತೆಯಲ್ಲಿ ಬರುವ ಮರಟಿಕ್ಯಾತನಹಳ್ಳಿಯಲ್ಲಿ ಖರೀದಿಸಿದ್ದೆ. ಇದು ನಗರದಿಂದ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ತೋಟವನ್ನು ಅಭಿವೃದ್ಧಿಪಡಿಸಿ, ವಾರಾಂತ್ಯಗಳನ್ನು ಮಿತ್ರರೊಡನೆ ಸಂತೋಷವಾಗಿ ಕಳೆಯುವ ಉದ್ದೇಶ ನನ್ನದಾಗಿತ್ತು. ಒಂದು ಕಾಟೇಜ್ ಮನೆ, ಒಂದು ಹೂದೋಟ, ತೆಂಗಿನಮರಗಳು, ಹಣ್ಣಿನ ಮರಗಳು ಮತ್ತು ವಿಹಾರಕ್ಕೆ ಕಾಲುದಾರಿ– ಈ ರೀತಿಯ ಕನಸು ಕಂಡಿದ್ದೆ. ಆದರೆ, ನೀರೇ ಎಲ್ಲದಕ್ಕೂ ಜೀವಾಳ. ಹಠ ಬಿಟ್ಟು ಏಳು ಬೋರ್‌ವೆಲ್‌ಗಳನ್ನು ಕೊರೆದರೂ ಆ ಜಾಗದಲ್ಲಿ ನೀರು ಲಭಿಸಲಿಲ್ಲ. ಅದೊಂದು ಹಾಸ್ಯದ ವಿಚಾರವಾಯಿತು. ನನ್ನ ಬ್ಯಾಂಕರ್ ಕೂಡ ಕರುಣೆ ತೋರಲಿಲ್ಲ. ಆದ್ದರಿಂದ ಆ ಜಾಗವನ್ನು ಮಾರಾಟ ಮಾಡಲು ತೀರ್ಮಾನಿಸಿದೆ. ನನ್ನದೇ ಪತ್ರಿಕೆಯಲ್ಲಿ ಜಾಹೀರಾತು ನೀಡಿದೆ. ಹಲವು ಜನ ಬಂದರು. ಆದರೆ ಯಾರೂ ಖರೀದಿಸಲಿಲ್ಲ. ಚೌಕಾಶಿ ಕೂಡ ನಡೆಸಲಿಲ್ಲ. ನಾನು ಹತಾಶನಾದೆ.

ನಂತರ ಒಂದು ದಿನ ನನ್ನ ಮಿತ್ರರೊಬ್ಬರು ಶ್ರೀನಿವಾಸ ಯೋಗಿ ಅರ್ಕಾ ಬಗ್ಗೆ ನನಗೆ ಹೇಳಿದರು. ಇವರು ನಂತರ ಮಹಾಗುರು ಅರ್ಕಾ ಆಗಿ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಜ್ಯೋತಿಷ್ಯ ವೃತ್ತಿ ನಡೆಸುತ್ತಿದ್ದರು. ಇವರ ಕೊಠಡಿಯು ವಿಶಿಷ್ಟವಾಗಿ ವಿನ್ಯಾಸಗೊಳಿಸಿದ್ದು, ಕಡಿಮೆ ವೆಚ್ಚದಲ್ಲಿ ಹೋಟೆಲ್ ಮಾಲೀಕರು ಅವರಿಗೆ ನೀಡಿದ್ದರು. ಬಹುಶಃ ಯೋಗಿ ಅರ್ಕಾ ಅವರ ಜ್ಯೋತಿಷ್ಯವು ಆ ಹೋಟೆಲ್ ಮಾಲೀಕರಿಗೆ ಲಾಭದಾಯಕವಾಗಿರಬೇಕು. "ಅವರ ಬಳಿ ಹೋಗಿ. ಅವರು ನಿಮಗೆ ಸಹಾಯ ಮಾಡಬಹುದು" ಎಂದು ನನ್ನ ಮಿತ್ರ ಸಲಹೆ ನೀಡಿದರು. ನಾನು ಅಲ್ಲಿಗೆ ಹೋದೆ. ಮತ್ತೊಮ್ಮೆ ಅದೇ ಆಟ ಮುಂದುವರೆಯಿತು. 1962ರಲ್ಲಿ ಬೆಂಗಳೂರಿನಲ್ಲಿ ಅನುಭವಿಸಿದ್ದು.

ನನ್ನ ಮೊದಲ ಪ್ರಶ್ನೆ : ನನ್ನ ಭೂಮಿಯಲ್ಲಿ ನನಗೆ ನೀರು ಸಿಗುವುದೇ?

ಅರ್ಕಾ : ಇಲ್ಲ, ನಿಮಗೆ ಸಿಗುವುದಿಲ್ಲ.

ಪ್ರಶ್ನೆ : ನಾನು ಅದನ್ನು ಮಾರಬಹುದೆ?

ಅರ್ಕಾ : ಹೌದು

ಪ್ರಶ್ನೆ : ಮಾರಾಟ ಮಾಡಿದರೆ ನನಗೆ ಒಳ್ಳೆಯ ಬೆಲೆ ಸಿಗುವುದೆ?

ಉತ್ತರ : ಇಲ್ಲ

"ಸಿಕ್ಕಿದ ಬೆಲೆಯಲ್ಲಿ ಈಗಲೇ ಮಾರಿಬಿಡಿ. ಇಲ್ಲವಾದಲ್ಲಿ ಮುಂದೆ ಮಾರಲು ಸಾಧ್ಯವೇ ಆಗುವುದಿಲ್ಲ" ಎಂದು ಬೇರೆ ಅರ್ಕಾ ಸಲಹೆ ನೀಡಿದರು. ನಂಬಿದರೆ ನಂಬಿ, ಬಿಟ್ರೆ ಬಿಡಿ, ಎರಡನೇ ದಿನ ಬೆಳಗ್ಗೆಯೇ ಒಬ್ಬ ಆ ಭೂಮಿಯನ್ನು ಖರೀದಿಸುವ ವಿಚಾರದಲ್ಲಿ ನನ್ನ ಕಚೇರಿಗೆ ಭೇಟಿ ನೀಡಿ, ಮುಂಗಡ ಹಣ ನೀಡಿದ ನಂತರ ನಾನು ಆ ಭೂಮಿಯನ್ನು ಆತನಿಗೆ ಮಾರಿದೆ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಯೋಗಿ ಅರ್ಕಾರನ್ನು ಕಂಡಾದ ಮೇಲೆ ಭೂಮಿ ಮಾರಾಟ ಮಾಡುವವರೆಗೆ ನಾನು ಅನುಭವಿಸಿದ ಸಂತೋಷ.

ಮತ್ತೊಂದು ಅಂಶವೆಂದರೆ; ಈ ಜ್ಯೋತಿಷಿಗಳು, ತಾಂತ್ರಿಕರು ಅಥವಾ ದೇವಮಾನವರು ಭವಿಷ್ಯವನ್ನು ಮೊದಲೇ ಕಾಣುವ ಶಕ್ತಿಯನ್ನು ಎಲ್ಲಿಂದ ಪಡೆಯುತ್ತಾರೆ ಎಂದು... ಆ ದೇವರೇ ಬಲ್ಲ...

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

Email: voice@starofmysore.com

(ಈ ಲೇಖನ 21–4–2013 ರಂದು ಇದೇ ಅಂಕಣದಲ್ಲಿ ಪ್ರಕಟವಾಗಿತ್ತು)

ಮೈಸೂರು ಮಿತ್ರ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

2023



	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 – 12.00
ಗುರು	1.30 – 3.00	6.00 – 7.30	9.00 – 10.30
ಶುಕ್ರ	10.30 – 12.00	3.00 – 4.30	7.30 – 9.00
ಶನಿ	9.00 – 10.30	1.30 – 3.00	6.00 – 7.30

ಜನವರಿ 2023

ಭಾನು	1	8	15	22	29
ಸೋ	2	9	16	23	30
ಮಂ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6°	13	20	27	
ಶನಿ	7	14	21•	28	

ಫೆಬ್ರವರಿ 2023

ಭಾನು		5°	12	19	26
ಸೋ		6	13	20•	27
ಮಂ		7	14	21	28
ಬುಧ	1	8	15	22	
ಗುರು	2	9	16	23	
ಶುಕ್ರ	3	10	17	24	
ಶನಿ	4	11	18	25	

ಮಾರ್ಚ್ 2023

ಭಾನು		5	12	19	26
ಸೋ		6	13	20	27
ಮಂ		7°	14	21•	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

ಏಪ್ರಿಲ್ 2023

ಭಾನು	30	2	9	16	23
ಸೋ		3	10	17	24
ಮಂ		4	11	18	25
ಬುಧ		5	12	19	26
ಗುರು		6°	13	20•	27
ಶುಕ್ರ		7	14	21	28
ಶನಿ	1	8	15	22	29

ಮೇ 2023

ಭಾನು		7	14	21	28
ಸೋ	1	8	15	22	29
ಮಂ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5°	12	19•	26	
ಶನಿ	6	13	20	27	

ಜೂನ್ 2023

ಭಾನು		4°	11	18•	25
ಸೋ		5	12	19	26
ಮಂ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	

ಜುಲೈ 2023

ಭಾನು	30	2	9	16	23
ಸೋ	31	3°	10	17•	24
ಮಂ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29

ಆಗಸ್ಟ್ 2023

ಭಾನು		6	13	20	27
ಸೋ		7	14	21	28
ಮಂ	1°	8	15	22	29
ಬುಧ	2	9	16•	23	30
ಗುರು	3	10	17	24	31
ಶುಕ್ರ	4	11	18	25	
ಶನಿ	5	12	19	26	

ಸೆಪ್ಟೆಂಬರ್ 2023

ಭಾನು		3	10	17	24
ಸೋ		4	11	18	25
ಮಂ		5	12	19	26
ಬುಧ		6	13	20	27
ಗುರು		7	14•	21	28
ಶುಕ್ರ	1	8	15	22	29°
ಶನಿ	2	9	16	23	30

ಅಕ್ಟೋಬರ್ 2023

ಭಾನು	1	8	15	22	29
ಸೋ	2	9	16	23	30
ಮಂ	3	10	17	24	31
ಬುಧ	4	11	18	25	
ಗುರು	5°	12	19	26	
ಶುಕ್ರ	6	13	20	27	
ಶನಿ	7	14•	21	28°	

ನವೆಂಬರ್ 2023

ಭಾನು		5	12	19	26
ಸೋ		6	13•	20	27°
ಮಂ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	
ಶನಿ	4	11	18	25	

ಡಿಸೆಂಬರ್ 2023

ಭಾನು	31	3	10	17	24
ಸೋ		4	11	18	25
ಮಂ		5	12•	19	26°
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

ವಿಶೇಷ ದಿನಗಳು

ಜನವರಿ
01 ನೂತನ ವರ್ಷಾರಂಭ
15 ಮಕರ ಸಂಕ್ರಾಂತಿ
26 ಗಣರಾಜ್ಯೋತ್ಸವ

ಫೆಬ್ರವರಿ
18 ಮಹಾ ಶಿವರಾತ್ರಿ

ಮಾರ್ಚ್
08 ಹೋಳಿ ಹಬ್ಬ
22 ಚಾಂದ್ರಮಾನ ಯುಗಾದಿ
26 ದೇವರ ದಾಸಿಮಯ್ಯ ಜಯಂತಿ
30 ಚಾಂದ್ರ ಶ್ರೀರಾಮನವಮಿ

ಏಪ್ರಿಲ್
04 ಮಹಾವೀರ ಜಯಂತಿ
07 ಗುಡ್ ಫ್ರೈಡೇ
08 ಹೋಲಿ ಸಾಟರ್ಡೆ
14 ಡಾ. ಅಂಬೇಡ್ಕರ್ ಜಯಂತಿ/ಸೌರ ಯುಗಾದಿ
22 ರಂಜಾನ್
23 ಬಸವ ಜಯಂತಿ
25 ರಾಮಾನುಜಾಚಾರ್ಯರ ಜಯಂತಿ, ಶಂಕರ ಜಯಂತಿ

ಮೇ
01 ಕಾರ್ಮಿಕರ ದಿನ
05 ಬುದ್ಧ ಪೂರ್ಣಿಮಾ

ಜೂನ್
29 ಬಕ್ರೀದ್

ಆಗಸ್ಟ್
15 ಸ್ವಾತಂತ್ರ್ಯ ದಿನಾಚರಣೆ
25 ವರಮಹಾಲಕ್ಷ್ಮಿ ವ್ರತ
29 ಋಗ್ ಉಪಾಕರ್ಮ /ತಿರು ಓಣಂ
30 ಯಜುರ್ ಉಪಾಕರ್ಮ
31 ನಾರಾಯಣಗುರು ಜಯಂತಿ

ಸೆಪ್ಟೆಂಬರ್
06 ಶ್ರೀಕೃಷ್ಣ ಜನ್ಮಾಷ್ಟಮಿ
17 ವಿಶ್ವಕರ್ಮ ಜಯಂತಿ
18 ಸ್ವರ್ಣ ಗೌರೀ ವ್ರತ /ಗಣೇಶ ಚತುರ್ಥಿ
28 ಈದ್-ಮಿಲಾದ್ /ಅನಂತಪದ್ಮನಾಭ ವ್ರತ

ಅಕ್ಟೋಬರ್
02 ಗಾಂಧಿ ಜಯಂತಿ
14 ಮಹಾಲಯ ಅಮಾವಾಸ್ಯೆ
18 ತುಲಾ ಸಂಕ್ರಮಣ
23 ಮಹಾನವಮಿ /ಅಯುಧ ಪೂಜೆ
24 ವಿಜಯದಶಮಿ
28 ವಾಲ್ಮೀಕಿ ಜಯಂತಿ

ನವೆಂಬರ್
01 ರಾಜ್ಯೋತ್ಸವ
12 ನರಕ ಚತುರ್ದಶಿ
14 ಬಲಿಪಾಡ್ಯಮಿ
27 ಗುರುನಾನಕ್ ಜಯಂತಿ /ಹುತ್ತರಿ
30 ಕನಕದಾಸ ಜಯಂತಿ

ಡಿಸೆಂಬರ್
24 ಕ್ರಿಸ್‌ಮಸ್ ಈವ್
25 ಕ್ರಿಸ್‌ಮಸ್

ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದ ಭೂಮಿ ವಾಪಸ್

ನಿರ್ವಸತಿಗರಿಗೆ, ಲೈನ್ ಮನೆಗಳಲ್ಲಿ ವಾಸಿಸುವ ಬಡವರಿಗೆ ನಿವೇಶನ ನೀಡಲು ಕ್ರಮ

ಮಡಿಕೇರಿ,ಡಿ.31– ಅರಣ್ಯ ಇಲಾಖೆಗೆ ಈ ಹಿಂದೆ ಹಸ್ತಾಂತರಿಸಲಾಗಿದ್ದ 'ಸಿ ಮತ್ತು ಡಿ' ದರ್ಜೆಯ ಕೊಡಗಿನ ಸುಮಾರು 2 ಲಕ್ಷ ಹೆಕ್ಟೇರ್ ಜಾಗವನ್ನು ಹಿಂದಕ್ಕೆ ಪಡೆಯುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಎಂದು ರಾಜ್ಯ ಸರಕಾರಿ ಭೂಮಿ ಸಂರಕ್ಷಣಾ ಸಮಿತಿ ಅಧ್ಯಕ್ಷರೂ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಕೆ.ಜಿ. ಬೋಪಯ್ಯ ಸ್ಪಷ್ಟಪಡಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯವ್ಯಾಪಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿರುವ ಜಾಗದಲ್ಲಿ 9 ಲಕ್ಷ ಹೆಕ್ಟೇರ್ ಪ್ರದೇಶವನ್ನು ಅಗತ್ಯ ಸರ್ಕಾರಿ ಕೆಲಸ ಕಾರ್ಯಗಳು ಹಾಗೂ ವಿವಿಧ ಅಭಿವೃದ್ಧಿ ಉದ್ದೇಶಗಳಿಂದ ಹಿಂದಕ್ಕೆ ಪಡೆಯಲು ಸರ್ಕಾರಿ ಆದೇಶ ಮಾಡಲಾಗಿದೆ. ಜಿಲ್ಲೆಗೆ ಸಂಬಂಧಿಸಿದಂತೆ ಹಿಂದಕ್ಕೆ ಪಡೆದ ಜಾಗದ ಮಾಹಿತಿಯನ್ನು ಆಯಾ ಗ್ರಾಮ ಮಟ್ಟದಿಂದ ಪಡೆಯಲಾಗುತ್ತದೆ ಎಂದು ತಿಳಿಸಿದರು.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ನಿರ್ವಸತಿಗರಿಗೆ, ಲೈನ್‌ಮನೆಗಳಲ್ಲಿ ವಾಸವಿರುವ ಬಡ ಮಂದಿಗೆ ಅರಣ್ಯ ಇಲಾಖೆಯಿಂದ ಹಿಂಪಡೆಯುವ ಭೂಮಿಯಲ್ಲಿ ಅಗತ್ಯ ನಿವೇಶನಗಳನ್ನು ಕಲ್ಪಿಸಲಾಗುತ್ತದೆ. ಈಗಾಗಲೇ ಮೊಗೇರ ಸಮಾಜ ತಮ್ಮ ಸಮುದಾಯದ ಬಡ ಮಂದಿಗೆ ನಿವೇಶನ ಒದಗಿಸುವಂತೆ ಕೋರಿದೆ. ಅದು ನ್ಯಾಯ ಸಮ್ಮತವಾದ ಬೇಡಿಕೆಯಾಗಿದ್ದು, ಇದನ್ನು ಈಡೇರಿಸಲು ಅರಣ್ಯ ಇಲಾಖೆಯಿಂದ ಹಿಂಪಡೆಯುವ ಜಾಗ ಸಹಕಾರಿಯಾಗಲಿದೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಕೃಷಿ ಭೂಮಿ ಗುತ್ತಿಗೆಗೆ: ಸರ್ಕಾರಿ ಪೈಸಾರಿ ಜಾಗದಲ್ಲಿ 25 ಎಕರೆಯಷ್ಟು ಭೂಮಿಯಲ್ಲಿ ಅಕ್ರಮವಾಗಿ ಕಾಫಿ, ಕರಿಮೆಣಸು ಸೇರಿದಂತೆ ಇತರೆ ಪ್ಲಾಂಟೇಷನ್ ಕೃಷಿ ನಡೆಸಿದ್ದಲ್ಲಿ ಅಂತಹ ಜಾಗವನ್ನು 30 ವರ್ಷಗಳ ಕಾಲ ಗುತ್ತಿಗೆಗೆ ನೀಡಲು ಸರ್ಕಾರ ನಿರ್ಧಾರ ಕೈಗೊಂಡಿದೆ ಆದರೆ, ಸರ್ಕಾರದ ಈ ನಿರ್ಧಾರ ಕೇವಲ ಕುಟುಂಬಕ್ಕೆ ಸಂಬಂಧಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಿದರು. ಗುತ್ತಿಗೆಯಲ್ಲಿ ಪಡೆದ ಜಾಗದಲ್ಲಿ ಕೃಷಿ ಮಾಡುವುದಕ್ಕೆ ಮಾತ್ರ ಅವಕಾಶವಿದ್ದು, ಅದರಲ್ಲಿನ ಮರಗಳು ಸರ್ಕಾರದ ಸ್ವತ್ತಾಗಿರುತ್ತದೆ ಮತ್ತು ಅಂತಹ ಜಾಗವನ್ನು ಪರಭಾರೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಗುತ್ತಿಗೆ ಪಡೆದ ಕುಟುಂಬವೇ ಅದನ್ನು ನಿರ್ವಹಣೆ ಮಾಡಬೇಕಾಗುತ್ತದೆ. ಪಡೆದ ಜಾಗವನ್ನು ಮತ್ತೊಬ್ಬರಿಗೆ ಕೃಷಿ ಮಾಡಲು ಹಸ್ತಾಂತರಿಸುವಂತಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಫಿ, ಕರಿಮೆಣಸು ಹೀಗೆ ವಿವಿಧ ಬೆಳೆಗಳನ್ನು ಸರ್ಕಾರಿ ಪೈಸಾರಿ ಜಾಗದಲ್ಲಿ ನಡೆಸಿದ ಕುಟುಂಬಕ್ಕೆ ಆ ಜಾಗವನ್ನು ಗುತ್ತಿಗೆಗೆ ನೀಡುವ ಸಂದರ್ಭ ಅಗತ್ಯ ತೆರಿಗೆಯನ್ನು ಪಾವತಿಸಬೇಕಾಗುತ್ತದೆ. ಈ ಹಿನ್ನೆಲೆ ಸರ್ಕಾರ ತನ್ನ ಆದೇಶಕ್ಕೆ ಪೂರಕವಾಗಿ 0–5 ಎಕರೆ, 5 ರಿಂದ 10 ಎಕರೆ ಮತ್ತು 10 ರಿಂದ 25 ಎಕರೆ ಗುತ್ತಿಗೆ ನೀಡುವ ಕೃಷಿ ಭೂಮಿಗೆ ಪಾವತಿಸಬೇಕಾದ ತೆರಿಗೆಯನ್ನು ಮತ್ತು ಮಾರ್ಗಸೂಚಿಗಳನ್ನು ಹೊರಡಿಸಲಿದೆ ಎಂದು ಅವರು ತಿಳಿಸಿದರು.

ಸರ್ಕಾರದ ಈ ಆದೇಶ ಯಾವುದೇ ಕಾರಣಕ್ಕೂ ಕಂಪೆನಿ ತೋಟಗಳಿಗೆ ಅನ್ವಯಿಸಲಾರದು ಎಂದು ಸ್ಪಷ್ಟಪಡಿಸಿದ ಶಾಸಕ ಬೋಪಯ್ಯ, ಸರ್ಕಾರದ ಗುತ್ತಿಗೆ ಆಧಾರದಲ್ಲಿ ಜಾಗವನ್ನು ನೀಡುವ ನಿರ್ಧಾರದಿಂದ ಇಲ್ಲಿಯವರೆಗೆ ಕಿಂಚಿತ್ ಯಾವುದೇ ತೆರಿಗೆಯೂ ಬಾರದೆ ಇದ್ದಂತಹ ಸರ್ಕಾರಿ ಪೈಸಾರಿ ಜಾಗದಿಂದ ತೆರಿಗೆ ಸಂಗ್ರಹವಾಗಲಿದ್ದು, ಇದು ರಾಜ್ಯದ ಆರ್ಥಿಕತೆಗೂ ನೆರವಾಗಲಿದೆ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಜಾಗ ಪರಿವರ್ತನೆ ಕಾಯ್ದೆ ತಿದ್ದುಪಡಿ: ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಸುವುದಕ್ಕೆ ಅನುಕೂಲವಾಗುವಂತೆ ಕಳೆದ ಅಧಿವೇಶನದಲ್ಲಿ ಭೂ ಕಂದಾಯ ಕಾಯ್ದೆ 1964ಸೆಕ್ಷನ್ 95ಕ್ಕೆ ತಿದ್ದುಪಡಿಯನ್ನು ತರುವ ಮೂಲಕ, ಜಾಗ ಪರಿವರ್ತನೆಯನ್ನು ಸರಳೀಕರಿಸಲಾಗಿದೆ ಎಂದು ಮಾಹಿತಿ ನೀಡಿದರು. ಕಂದಾಯ ಕಾಯ್ದೆಯ ತಿದ್ದುಪಡಿಯೊಂದಿಗೆ ಯಾವುದೇ ಜಾಗ ಮಾಲೀಕ ತನ್ನ ಕೃಷಿ ಭೂಮಿಯ ಪರಿವರ್ತನೆಗೆ ಅಫಿಡವಿಟ್‌ನೊಂದಿಗೆ ಜಿಲ್ಲಾಧಿಕಾರಿಗಳಿಗೆ ಅಗತ್ಯ ದಾಖಲೆಯೊಂದಿಗೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಈ ಪ್ರಕ್ರಿಯೆ 7 ದಿನಗಳ ಒಳಗಾಗಿ ಜಾಗದ ಪರಿವರ್ತನೆಯನ್ನು ಮಾಡಿಕೊಡಬೇಕಾಗುತ್ತದೆ. ಒಂದೊಮ್ಮೆ ನಿಗದಿತ 7 ದಿನಗಳ ಒಳಗೆ ಪರಿವರ್ತನೆ ಯಾಗದಿದ್ದಲ್ಲಿ, ಕಾಯ್ದೆ ತಿದ್ದುಪಡಿಯಂತೆ ಸೂಚಿತ ಜಾಗ 'ಡೀಮ್ಡ್ ಕನ್‌ವರ್ಷನ್' ಆಗುತ್ತದೆ. ಅಂದರೆ ಆ ಜಾಗ ತಾನೇ ತಾನಾಗಿ ಪರಿವರ್ತಿತ ಜಾಗವೆಂದು ಪರಿಗಣಿಸಲಾಗುತ್ತದೆಂದು ವಿವರಿಸಿದರು.

ದಂಡ ಮೊತ್ತ ಏರಿಕೆ: ಜಾಗ ಪರಿವರ್ತನೆಗೆ ಅವಕಾಶವನ್ನು ಒದಗಿಸುವುದರ ಜೊತೆಯಲ್ಲೆ ಸುಳ್ಳು ಅಫಿಡವಿಟ್ ಸಲ್ಲಿಸಿದಲ್ಲಿ, ಅಂತಹವರಿಗೆ ವಿಧಿಸಲಾಗುತ್ತಿದ್ದ ದಂಡದ ಮೊತ್ತವನ್ನು 1 ಸಾವಿರ ರೂ.ಗಳಿಂದ 1 ಲಕ್ಷ ರೂ.ಗಳಿಗೆ, ತಪ್ಪು ದಾಖಲೆ ನೀಡಿದಲ್ಲಿ 2500 ರೂ. ದಂಡದ ಬದಲು 25 ಸಾವಿರ ರೂ. ದಂಡವನ್ನು ವಿಧಿಸುವ ಅವಕಾಶವನ್ನು ಕಾಯ್ದೆಯಲ್ಲಿ ಸೇರಿಸಲಾಗಿದೆ ಎಂದರು.

ಶೂನ್ಯ ಬಡ್ಡಿ ಸಾಲಕ್ಕೆ ಕ್ರಮ: ಕೃಷಿಕರಿಗೆ ಈಗಾಗಲೇ 3 ಲಕ್ಷ ರೂ.ಗಳವರೆಗೆ ಶೂನ್ಯ ಬಡ್ಡಿ ದರದ ಸಾಲವನ್ನು ಒದಗಿಸಲಾಗುತ್ತಿದೆ. ಈ ಸಾಲದ ನೆರವನ್ನು ಫ್ರೂಟ್ ಆಪ್ ಮೂಲಕ ಒದಗಿಸಲಾಗುತ್ತಿತ್ತು. ಕಳೆದ ಸಾಲಿನಿಂದ ಕಾಫಿ ಕೃಷಿ ಮಾಡಿದ ಬೆಳೆಗಾರರಿಗೆ ಸಾಲದ ಮೇಲೆ ಶೇ.1 ಸ್ಟಾಂಪ್ ಡ್ಯೂಟಿ ವಿಧಿಸಲಾಗುತ್ತಿತ್ತು. ಈ ವಿಚಾರವನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ, ಕಾಫಿ ಬೆಳೆಗಾರರಿಗೆ ಸ್ಟಾಂಪ್ ಡ್ಯೂಟಿ ರಹಿತವಾಗಿ ಶೂನ್ಯ ಬಡ್ಡಿದರದ ಸಾಲ ಒದಗಿಸಬೇಕೆಂದು ಆಗ್ರಹಿಸಿದ್ದು, ಇದಕ್ಕೆ ಕಂದಾಯ ಸಚಿವರು ಒಪ್ಪಿಗೆ ಸೂಚಿಸಿದ್ದು, ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ ಎಂದರು.

ಬೆಳೆಗಾರರಿಗೆ ಉಚಿತ ವಿದ್ಯುತ್: ಕೊಡಗಿನ ಕಾಫಿ ಬೆಳೆಗಾರರು ಇತರೆ ಜಿಲ್ಲೆಗಳ ಕೃಷಿಕರಿಗೆ ನೀಡುವಂತೆ 10 ಹೆಚ್.ಪಿ. ಒಳಗಿನ ಮೋಟಾರ್ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕೆಂದು ಆಗ್ರಹಿಸಿದರು. ಇದಕ್ಕೆ ಸರ್ಕಾರ ಒಪ್ಪಿಗೆಯನ್ನು ಸೂಚಿಸಿದ್ದು, ತಕ್ಷಣದಿಂದಲೇ ಜಾರಿಯಾಗಲಿದೆ. ಇದರೊಂದಿಗೆ ಜಿಲ್ಲೆಯ ಬೆಳೆಗಾರರ 48 ಕೋಟಿ ವಿದ್ಯುತ್ ಬಿಲ್ ಪಾವತಿಗೆ ಬಾಕಿ ಇದೆ ಜಿಲ್ಲೆಯಲ್ಲಿನ ಅತಿವೃಷ್ಟಿ ಮೊದಲಾದ ಕಾರಣಗಳಿಂದ ಬೆಳೆಗಾರ ಸಂಕಷ್ಟದಲ್ಲಿರುವುದರಿಂದ ಈ ಮೊತ್ತವನ್ನು ಮನ್ನಾ ಮಾಡಬೇಕೆಂದು ತಾವು ಆಗ್ರಹಿಸಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು, ಕ್ರಮ ಕೈಗೊಳ್ಳುವುದಾಗಿ ಸರ್ಕಾರ ತಿಳಿಸಿದೆ ಎಂದು ಹೇಳಿದರು.

ಸದ್ಯದಲ್ಲೇ ಶ್ವೇತಪತ್ರ

ಜಿಲ್ಲೆಗೆ ಶಾಸಕರು ಏನು ಮಾಡಿದ್ದಾರೆ ಎನ್ನುವ ಕಾರಣಕ್ಕಾಗಿ ಮತ್ತು ಎಷ್ಟು ಅನುದಾನ ತಂದಿದ್ದಾರೆ ಎನ್ನುವ ವಿಚಾರಗಳಿಗೆ ಸಂಬಂಧಿಸಿದಂತೆ ವಿಪಕ್ಷಗಳು ಪ್ರಶ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸದ್ಯದಲ್ಲಿಯೇ ತಾನು ಮತ್ತು ಶಾಸಕ ಅಪ್ಪಚ್ಚು ರಂಜನ್ ಅವರು ಒಟ್ಟಾಗಿ 'ಶ್ವೇತಪತ್ರ'ವನ್ನು ಹೊರಡಿಸುವುದಾಗಿ ಘೋಷಿಸಿದರು.

ಕೊಡಗು ಜಿಲ್ಲೆಗೆ ಕಳೆದ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ 15 ಇಲಾಖೆಗಳಿಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 851 ಕೋಟಿ ರೂ. ಅನುದಾನ ಬಂದಿದೆ. ಎನ್‌ಡಿಆರ್‌ಎಫ್ ನೆರವು, ಸಂಸದರು, ಶಾಸಕರ ನಿಧಿಯ ನೆರವು ಸೇರಿದಂತೆ ಈ ಅನುದಾನ 1300 ಕೋಟಿ ರೂ.ಗಳಾಗುತ್ತದೆ ಎಂದು ಕೆ.ಜಿ. ಬೋಪಯ್ಯ ತಿಳಿಸಿದರು.

ಕೊಡಗು ಜಿಲ್ಲೆಗೆ ಪ್ರವಾಸಿಗರ ದಂಡು

ತುಂಬಿ ತುಳುಕುತ್ತಿರುವ ಎಸ್ಟೇಟ್–ಹೋಂ ಸ್ಟೇ, ರೆಸಾರ್ಟ್, ಲಾಡ್ಜ್‌ಗಳು

● ಪ್ರವಾಸಿ ತಾಣಗಳಲ್ಲಿಯೂ ಪ್ರವಾಸಿಗರ ಎಂಜಾಯ್



ಮಡಿಕೇರಿ,ಡಿ.31– ಕೊಡಗು ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸಿದ್ದು, ಸಂಭ್ರಮದಿಂದ ಹೊಸವರ್ಷ ಆಚರಿಸುತ್ತಿದ್ದಾರೆ. ಜಿಲ್ಲೆಯ ಬಹುತೇಕ ಎಸ್ಟೇಟ್ ಸ್ಟೇ, ಹೋಂ ಸ್ಟೇ, ರೆಸಾರ್ಟ್, ಲಾಡ್ಜ್‌ಗಳು ಪ್ರವಾಸಿಗರಿಂದ ತುಂಬಿದ್ದು, ಪ್ರವಾಸಿಗರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಮೂಲಕ ಹೊಸ ವರ್ಷ ಆಚರಿಸಿ, ಕುಣಿದು ಕುಪ್ಪಳಿಸಿದರು. ಅಬ್ಬಿಫಾಲ್ಸ್, ಮಾಂದಲ್ ಪಟ್ಟಿ, ದುಬಾರೆ, ನಿಸರ್ಗ ಧಾಮದಲ್ಲಿಯೂ ಪ್ರವಾಸಿಗರ ಸಂಖ್ಯೆ ಕಳೆದ ವರ್ಷಕ್ಕಿಂತ ಹೆಚ್ಚಿತ್ತು. ಕೋವಿಡ್, ಅತೀವ ಮಳೆಯಿಂದ ಹಿನ್ನಡೆಯಾಗಿ ಸೊರಗಿದ್ದ ಜಿಲ್ಲೆಯ ಪ್ರವಾಸೋದ್ಯಮದಲ್ಲಿಯೂ ಕೊಂಚ ಚೇತರಿಕೆ ಕಂಡು ಬಂದಿದೆ.

ಇನ್ನು ಮಡಿಕೇರಿಯ ಪ್ರಸಿದ್ಧ ಪ್ರವಾಸಿ ತಾಣ ರಾಜಾಸೀಟಿನಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಪ್ರವಾಸಿಗರು ವರ್ಷಾಂತ್ಯದ ಸೂರ್ಯಾಸ್ತಮಕ್ಕಾಗಿ ಕಾದು ಕುಳಿತಿದ್ದರು. ಕೆಂಬಣ್ಣ ಚೆಲ್ಲುತ್ತಾ ಬೆಟ್ಟ ಶ್ರೇಣಿಗಳ ನಡುವೆ ನೇಸರ ಮರೆಯಾಗುವ ಸಂದರ್ಭ ಪ್ರವಾಸಿಗರು ಏಕಕಾಲದಲ್ಲಿ ಹಿಂದಿನ ವರ್ಷಕ್ಕೆ ಗುಡ್ ಬೈ ಹೇಳುವ ಮೂಲಕ ವರ್ಷಾಂತ್ಯದ ನೇಸರನನ್ನು ಬೀಳ್ಕೊಟ್ಟರು. ಮಾತ್ರವಲ್ಲದೇ ಪ್ರಕೃತಿಯ ಮಡಿಲಲ್ಲಿ ಜಾರುತ್ತಿದ್ದ ಸೂರ್ಯನ ವಿಹಂಗಮ ದೃಶ್ಯವನ್ನು ಪ್ರವಾಸಿಗರು ಕಣ್ತುಂಬಿಕೊಂಡರು. ಮೊಬೈಲ್, ಕ್ಯಾಮರಾಗಳಲ್ಲಿ ಫೋಟೋ ತೆಗೆದುಕೊಂಡು ಸಂಭ್ರಮಿಸಿದರು. ಕೆಲವರು ಸೂರ್ಯಾಸ್ತದೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ವರ್ಷಾಂತ್ಯವನ್ನು ಸಂಭ್ರಮಿಸಿದರು. 2022ರ ಕೊನೆಯ ಸೂರ್ಯಾಸ್ತದ ಬಳಿಕ ಪ್ರವಾಸಿಗರು ರಾಜಾಸೀಟ್‌ನಿಂದ ನಿರ್ಗಮಿಸಿದರು.

ಬಾಕ್ಸಿಂಗ್ ಸ್ಪರ್ಧೆಯಲ್ಲಿ ಪ್ರಜ್ವಲಾಗೆ ಪ್ರಥಮ ಸ್ಥಾನ



ಗೋಣಿಕೊಪ್ಪ, ಡಿ.31– ಪದವಿಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಬೆಂಗಳೂರು ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಪದವಿಪೂರ್ವ ವಿಭಾಗದ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಗೋಣಿಕೊಪ್ಪ ಲಯನ್ಸ್ ಕಾಲೇಜು ವಿದ್ಯಾರ್ಥಿನಿ ಮನ್ನಕಮನೆ ಬಿ. ಪ್ರಜ್ವಲಾ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇವರು ಗೋಣಿಕೊಪ್ಪದ ಮನ್ನಕಮನೆ ಬಾಲಕೃಷ್ಣ, ಸೌಮ್ಯ ದಂಪತಿ ಪುತ್ರಿ.

ಹೊಸ ವರ್ಷಾಚರಣೆ

ಮಂಡ್ಯ: ಪ್ರವಾಸಿ ತಾಣಗಳು ಬಂದ್

ಮಂಡ್ಯ,ಡಿ.31– ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ಪ್ರವಾಸಿ ತಾಣಗಳನ್ನು ಬಂದ್‌ಗೊಳಿಸಿ, ಆಯಾಯ ತಾಲೂಕು ಆಡಳಿತ ಆದೇಶ ಮಾಡಿದ್ದು, ಹೊಸ ವರ್ಷದ ದಿನ ಭಾನುವಾರ ಎಲ್ಲಾ ಪ್ರವಾಸಿ ತಾಣಗಳು ಬಂದ್ ಆಗಿರಲಿವೆ.

ಶ್ರೀರಂಗಪಟ್ಟಣದ ಬಲಮುರಿ, ಸಂಗಮ, ಕೆ.ಆರ್.ಎಸ್. ಹಿನ್ನೀರು, ಪಾಂಡವಪುರದ ಕೆರೆತೊಣ್ಣೂರು, ಮಳವಳ್ಳಿ ಮುತ್ತತ್ತಿ ಪ್ರವಾಸಿ ತಾಣಗಳನ್ನು ಬಂದ್‌ಗೊಳಿಸಲಾಗಿದೆ.

ಪ್ರವಾಸಿ ತಾಣಗಳಲ್ಲಿ ಯಾವುದೇ ಅಹಿತಕರ ಘಟನೆ, ಮದ್ಯ ಸೇವಿಸಿ ನೀರಿಗಿಳಿಯುವುದನ್ನು ತಡೆಯಲು ಈ ನಿರ್ಧಾರ ಕೈಗೊಂಡಿದ್ದು, ಅನುಮತಿ ಪಡೆದಿರುವ ಕ್ಲಬ್‌ಗಳಲ್ಲಿ ಒಂದು ಗಂಟೆಯವರೆಗೆ ಅವಕಾಶವಿದ್ದು, ಹೊಸ ವರ್ಷ ದಿನ ಹಾಗೂ ಹಿಂದಿನ ದಿನ ಮದ್ಯಪಾನ ಮಾಡಿ ವಾಹನ ಚಲಾಯಿಸಿದರೆ ದಂಡ ವಿಧಿಸುವ ಎಚ್ಚರಿಕೆ ಸಹ ನೀಡಲಾಗಿದೆ ಎಂದು ಎಸ್ಪಿ ಯತೀಶ್ ತಿಳಿಸಿದ್ದಾರೆ.

ಜನಸಂಕಲ್ಪ ಯಾತ್ರೆ ಅಭೂತಪೂರ್ವ ಯಶಸ್ಸು

ಮಂಡ್ಯ, ಡಿ.31– ನಗರದ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆ ಅಭೂತಪೂರ್ವ ಯಶಸ್ಸು ಕಂಡಿದೆ. ಇದರೊಂದಿಗೆ ಜಿಲ್ಲೆಯಲ್ಲಿ ಬಿಜೆಪಿ ತನ್ನ ಶಕ್ತಿ ಪ್ರದರ್ಶನ ಮಾಡಿದೆ ಎಂದು ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲೆಯ ಎಲ್ಲ ತಾಲೂಕಿನಿಂದ ನಿರೀಕ್ಷೆಗೂ ಮೀರಿ ಜನರು ಆಗಮಿಸಿದ್ದರು. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನಪರ ಆಡಳಿತಕ್ಕೆ ಸಿಕ್ಕ ಸ್ಪಂದನೆ. ಎರಡೂ ಸರ್ಕಾರಗಳು ಎಲ್ಲ ವರ್ಗದ ಜನರ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಉತ್ತಮ ಆಡಳಿತ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜನಪರ ಕಾರ್ಯಕ್ರಮಗಳು ಪ್ರತಿಯೊಬ್ಬರನ್ನೂ ತಲುಪುತ್ತಿವೆ ಎನ್ನುವುದಕ್ಕೆ ಸಮಾವೇಶಕ್ಕೆ ಹರಿದುಬಂದ ಜನರು ಸಾಕ್ಷಿ ಎಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ ಸೇರಿದಂತೆ ಹಲವು ನಾಯಕರು ಮುಂದಿನ ಚುನಾವಣೆಗೆ ಮಂಡ್ಯದಿಂದ ಸ್ವಾಭಿಮಾನದ ಕಹಳೆ ಊದಿದ್ದಾರೆ. ಇದಕ್ಕೆ ಸಾವಿರಾರೂ ಜನರು ಬೆಂಬಲ ನೀಡಿದ್ದಾರೆ. ಈ ಮೂಲಕ ಜಾ.ದಳ, ಕಾಂಗ್ರೆಸ್‌ಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.

ಈ ಎರಡು ಪಕ್ಷದ ದುರಾಡಳಿತದಿಂದ ಬೇಸತ್ತಿರುವ ಜಿಲ್ಲೆಯ ಜನರು ಬಿಜೆಪಿ ಪರವಾಗಿ ನಿಂತಿದ್ದಾರೆ. ಈ ನಿಟ್ಟಿನಲ್ಲಿ ಮುಂಬರುವ ಚುನಾವಣೆಯಲ್ಲಿ ಜಿಲ್ಲೆಯ ಏಳು ಕ್ಷೇತ್ರದಲ್ಲಿ ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಜಿಲ್ಲೆಯಲ್ಲಿ ಏಳು ಕ್ಷೇತ್ರದಲ್ಲಿಯೂ ಕಮಲ ಅರಳಿದೆ. ಇದರೊಂದಿಗೆ ರಾಜ್ಯದಲ್ಲಿಯೂ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದ್ದು, ಇದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಜನಸಂಕಲ್ಪ ಯಾತ್ರೆಯನ್ನು ಯಶಸ್ಸುಗೊಳಿಸಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ ಎಂದಿದ್ದಾರೆ.

ಪಂಚರತ್ನ ರಥಯಾತ್ರೆ ಯಶಸ್ಸು, ಬಿಜೆಪಿ–ಕಾಂಗ್ರೆಸ್ ಹತಾಶೆ

ಮಂಡ್ಯ,ಡಿ.31– ಜೆಡಿಎಸ್ ಮಹತ್ವಾಕಾಂಕ್ಷೆ ಯೋಜನೆಯಾದ ಪಂಚರತ್ನ ರಥಯಾತ್ರೆ ಯಶಸ್ಸಿನಿಂದ ಬಿಜೆಪಿ–ಕಾಂಗ್ರೆಸ್ಸಿಗರು ಹತಾಶರಾಗಿದ್ದು, ಜೆಡಿಎಸ್ ವಿರುದ್ಧ ಅಪಪ್ರಚಾರದ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಜೆಡಿಎಸ್ ಜಿಲ್ಲಾ ವಕ್ತಾರ ಮಹಾಲಿಂಗೇಗೌಡ ಅಸಮಾಧಾನ ವ್ಯಕ್ತಪಡಿದರು.



ನಗರದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಪಂಚರತ್ನ ರಥಯಾತ್ರೆ ವಂಚನೆ ರಥಯಾತ್ರೆಯಲ್ಲ. ಪಂಚವಾರ್ಷಿಕ ಯೋಜನೆಯ ವಚನ ಯಾತ್ರೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಹೇಳಿಕೆಗೆ ತಿರುಗೇಟು ನೀಡಿದರು. ರಾಷ್ಟ್ರೀಯ ಪಕ್ಷಗಳಿಂದ ಯಾವುದೇ ಕಾರಣಕ್ಕೂ ರಾಜ್ಯದ ಅಭಿವೃದ್ಧಿ ಅಸಾಧ್ಯ. ಪ್ರಾದೇಶಿಕ ಪಕ್ಷ ಜೆಡಿಎಸ್‌ನಿಂದ ಮಾತ್ರ ರಾಜ್ಯದ ಅಭಿವೃದ್ಧಿ ಸಾಧ್ಯ. ಆದ್ದರಿಂದ ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಿ ಎಂದು ಮನವಿ ಮಾಡಿದರು.

ಬಿಜೆಪಿಗೆ ರಾಜ್ಯದ ಅಭಿವೃದ್ಧಿ ಬೇಕಿಲ್ಲ ಕೇವಲ ವೋಟಿನ ರಾಜಕಾರಣ ವಷ್ಟೆ ಬೇಕಿದೆ. ಮಂಡ್ಯದಲ್ಲಿ ಬಿಜೆಪಿ ಖಾತೆಯನ್ನೆ ತೆರೆಯುವುದಿಲ್ಲ. ಈಗ ಬಿಜೆಪಿ ಖಾತೆ ತೆರೆದಿರುವ ಸಚಿವ ನಾರಾಯಣಗೌಡ ಅವರು ಮುಂದಿನ ದಿನಗಳಲ್ಲಿ ಯಾವ ಪಕ್ಷಕ್ಕೆ ಹೋಗುತ್ತಾರೆ ಎಂಬುದನ್ನು ಕಾದು ನೋಡಿ ಎಂದರು. ಜೆಡಿಎಸ್‌ನ ಒಬ್ಬನೇ ಒಬ್ಬ ಕಾರ್ಯಕರ್ತ ಕೂಡ ಬಿಜೆಪಿಗೆ ಹೋಗುವುದಿಲ್ಲ. ಸ್ವಾಭಿಮಾನಿ ಕಾರ್ಯಕರ್ತರನ್ನು ಜೆಡಿಎಸ್ ಪಕ್ಷ ಬೆಳೆಸುತ್ತಿದೆ. ಬಿಜೆಪಿ ರೀತಿ ಕ್ರಿಮಿನಲ್ ಪ್ರಕರಣಗಳಿರುವ ರೌಡಿಗಳನ್ನು ಸೇರಿಸಿಕೊಳ್ಳುತ್ತಿಲ್ಲ ಎಂದು ಅಮಿತ್ ಶಾ ಹೇಳಿಕೆಗೆ ತಿರುಗೇಟು ನೀಡಿದರು.

ಬಿಜೆಪಿ ಕಮಿಷನ್ ಸರ್ಕಾರ: ರಾಜ್ಯ ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ. ಶೇ.40 ರಷ್ಟು ಕಮಿಷನ್ ದಂಧೆ ಹಾಗೂ ರಾಜ್ಯದಲ್ಲಿ ಗುತ್ತಿಗೆದಾರರ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸೂಕ್ತ ನಿದರ್ಶನವಾಗಿದೆ ಎಂದರು.

ತಾತಾ ಮೊಮ್ಮಗನಿಗೆ, ತಾಯಿ ಮಗನಿಗೆ ಕ್ಷೇತ್ರ ಬಿಟ್ಟುಕೊಡುವುದು ತ್ಯಾಗವೇ ಎಂಬ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿಕೆಗೆ ಪ್ರತಿಕ್ರಿಯಿಸಿ, ಚಿಕ್ಕಮಗಳೂರು ಕ್ಷೇತ್ರದಲ್ಲಿ ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ಅವಕಾಶ ಮಾಡಿಕೊಡಿ ಎಂದು ತಿರುಗೇಟು ನೀಡಿದರು.

ಅಮಿತ್ ಶಾ ಕ್ಷಮೆಯಾಚನೆಗೆ ಆಗ್ರಹ: ಗೆಜ್ಜಲಗೆರೆ ಮನ್ಮುಲ್ ಮೆಗಾಡೇರಿ ಉದ್ಘಾಟನೆಯಲ್ಲಿ ಚುಂಚಶ್ರೀ ಪಕ್ಕದಲ್ಲಿ ಕಾಲ ಮೇಲೆ ಕಾಲು ಹಾಕಿ ಕುಳಿತುಕೊಳ್ಳುವ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ವಾಮೀಜಿಗೆ ಅಗೌರವ ತಂದಿದ್ದಾರೆ. ಕೂಡಲೇ ಸ್ವಾಮೀಜಿ ಅವರಲ್ಲಿ ಬಹಿರಂಗ ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳು ಕಪ್ಪು–ಬಿಳುಪು ಸಿನಿಮಾ ಇದ್ದಂತೆ ಎಂದು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ ನಮ್ಮದು ಹೆಚ್.ಡಿ. ಕಲರ್ ಮೂವಿ. ಅದೇ ಕಾಂಗ್ರೆಸ್–ಬಿಜೆಪಿ ಕಪ್ಪು ಬಿಳುಪು ಮೂವಿ ಎಂದು ಲೇವಡಿ ಮಾಡಿದರು.



ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಗೆ ಮಲ್ಲಿಗೆರೆ ಗ್ರಾಮದಲ್ಲಿ ಮಾತೃ ಭೋಜನ

ಪಾಂಡವಪುರ, ಡಿ.31– ತಾಲೂಕಿನ ಮಲ್ಲಿಗೆರೆ ಗ್ರಾಮದಲ್ಲಿ ನಡೆಯುತ್ತಿರುವ ಎನ್‌ಎಸ್‌ಎಸ್ ಶಿಬಿರದ ಶಿಬಿರಾರ್ಥಿಗಳಿಗೆ ಗ್ರಾಮದ ಮಹಿಳೆಯರು ಗುರುವಾರ 'ಮಾತೃ ಭೋಜನ' ಎಂಬ ವಿನೂತನ ಕಾರ್ಯಕ್ರಮ ನಡೆಸಿದರು.

ಮಲ್ಲಿಗೆರೆ ಗ್ರಾಮದಲ್ಲಿ ಚಿನಕುರಳಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ವತಿಯಿಂದ ಹಮ್ಮಿಕೊಂಡಿರುವ ಎನ್‌ಎಸ್‌ಎಸ್ ಶಿಬಿರದಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಮಹಿಳೆಯರು 'ಮಾತೃ ಭೋಜನ' ವಿಶೇಷ ಕಾರ್ಯಕ್ರಮದಲ್ಲಿ ಮನೆಯಿಂದ ಊಟ ತಂದು ಬಡಿಸಿದರು.

ಇದೇ ಕಾರ್ಯಕ್ರಮದಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ಅವರು ಸರತಿ ಸಾಲಿನಲ್ಲಿ ಮಕ್ಕಳೊಂದಿಗೆ ಕುಳಿತು ಮಾತೃ ಭೋಜನ ಊಟ ಮಾಡುವ ಮೂಲಕ ಸರಳತೆ ಮೆರೆದರು.

ಗ್ರಾಮದ ಮಹಿಳೆಯರು ಮಾತೃಭೋಜನ ಕಾರ್ಯಕ್ರಮಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಸಾಕಷ್ಟು ಮೆಚ್ಚುಗೆ ವ್ಯಕ್ತಪಡಿಸಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಕ್ಕಳೊಂದಿಗೆ ಕಾಲ ಕಳೆದರು. ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್, ತಾಪಂ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಮಾಜಿ ಅಧ್ಯಕ್ಷರಾದ ರವಿಕು, ಚಂದ್ರೇಗೌಡ, ಸದಸ್ಯ ರವಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ಎಸ್.ಜಗದೀಶ್, ಸೋಮೇಗೌಡ, ಪ್ರಾಂಶುಪಾಲ ಮಂಜುನಾಥ್ ಸೇರಿದಂತೆ ಹಲವರು ಹಾಜರಿದ್ದರು.



ಕೃಷ್ಣರಾಜ ಸಾಗರದ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ 125 ಸಿಬ್ಬಂದಿಗೆ ಇನ್ಫೋಸಿಸ್ ಕಂಪನಿ ಸುಧಾಮೂರ್ತಿ ಸಮವಸ್ತ್ರಗಳನ್ನು ವಿತರಿಸಿದರು.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ವಿಜಯ್ ರಾಮೇಗೌಡರಿಗೆ ಗ್ರಾಮಸ್ಥರ ಬೆಂಬಲ

ಕೆಆರ್. ಪೇಟೆ, ಡಿ.31– ಬೂಕನಕೆರೆ ಗ್ರಾಮದ ಗ್ರಾಮ ದೇವತೆ ಗೋಗಾಲಮ್ಮ ದೇವಾಲಯದ ಆವರಣದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಮಿತ್ರ ಫೌಂಡೇಷನ್ ಸಂಸ್ಥೆಯ ಅಧ್ಯಕ್ಷ ವಿಜಯ್ ರಾಮೇಗೌಡ ಅವರ ನೇತೃತ್ವದಲ್ಲಿ ಗ್ರಾಮಸ್ಥರು ಗ್ರಾಮದೇವತೆಗೆ ವಿಶೇಷ ಪೂಜೆ ಸಲ್ಲಿಸಿ, ಸಭೆ ನಡೆಸಿದರು.



ಗ್ರಾಮದ ಸುಪುತ್ರ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ಗ್ರಾಮದ ಕೀರ್ತಿಯನ್ನು ಬೆಳಗಿದ್ದಾರೆ. ಅದೇ ರೀತಿ ಕಾಂಗ್ರೆಸ್ ಪಕ್ಷದಿಂದ ವಿಧಾನಸಭೆಗೆ ಸ್ಪರ್ಧಿಸಲು ಮುಂದಾಗಿರುವ ವಿಜಯ್ ರಾಮೇಗೌಡರಿಗೆ ಟಿಕೆಟ್ ಸಿಕ್ಕಿ, ಸ್ಪರ್ಧೆ ಮಾಡಿದರೆ ಎಲ್ಲರೂ ಒಗ್ಗಟ್ಟಿನಿಂದ ಬೆಂಬಲಿಸುವ ಎಂದು ಸಭೆಯಲ್ಲಿದ್ದ ಮುಖಂಡರು ತೀರ್ಮಾನಕ್ಕೆ ಬಂದರು.

ಜಿಪಂ ಮಾಜಿ ಸದಸ್ಯ ಬಿ.ಟಿ.ವೆಂಕಟೇಶ್ ಮಾತನಾಡಿದರು. ಬೂಕನಕೆರೆ ವಿಜಯ್ ರಾಮೇಗೌಡ ಮಾತನಾಡಿದರು. ತಾಪಂ ಮಾಜಿ ಸದಸ್ಯ ಮಾಧವ ಪ್ರಸಾದ್, ಮುಖಂಡರಾದ ರಾಯಪ್ಪ, ಸರ್ವಮಂಗಳ ವೆಂಕಟೇಶ್, ನಾರಾಯಣಗೌಡ, ಎ.ಬಿ.ಕುಮಾರ್, ಕುಮಾರ್, ನಾಗರಾಜು, ಸಿದ್ದಿಕ್ ಅಹಮದ್, ಸಂತೋಷ್ ವೆಂಕಟರಾಮು, ಜಿ.ಎ. ರಾಯಪ್ಪ ಶ್ರೀನಿವಾಸ್ ಸೇರಿದಂತೆ ಇತರರಿದ್ದರು.

ಇಂದು ಕಸ್ತೂರು ದೊಡ್ಡಮ್ಮತಾಯಿ ಬಂಡಿ ಜಾತ್ರೆ

● ಹದಿನಾರು ಬಂಡಿ ಕಟ್ಟುವ ವಿಶೇಷ ಜಾತ್ರೆ
● ವರ್ಷದ ಮೊದಲ ಜಾತ್ರೆಗೆ ಸಿದ್ಧತೆ ಪೂರ್ಣ
● ಕಸ್ತೂರಿಗೆ ಡಿವೈಎಸ್‌ಪಿ ಭೇಟಿ, ಜಾತ್ರೆ ಸಿದ್ಧತೆ ಪರಿಶೀಲನೆ



ಚಾಮರಾಜನಗರ/ಬದನಗುಪ್ಪೆ, ಡಿ.31– ಹದಿನಾರು ಬಂಡಿಗಳು ಸೇರುವ ಕಸ್ತೂರು ಬಂಡಿ ಜಾತ್ರೆ ನಾಳೆ (ಭಾನುವಾರ) ನಡೆಯಲಿದ್ದು, ಸುತ್ತಮುತ್ತಲ ಗ್ರಾಮಗಳಲ್ಲಿ ಸಂಭ್ರಮ, ಸಡಗರ ಮನೆ ಮಾಡಿದೆ.

ತಾಲೂಕಿನ ಸಂತೇಮರಹಳ್ಳಿ ಹೋಬಳಿಗೆ ಸೇರಿದ ಕಸ್ತೂರಿನ ದೊಡ್ಡಮ್ಮತಾಯಿ ದೇವಸ್ಥಾನದಲ್ಲಿ ಜಾತ್ರೆ ತಯಾರಿ ಭರದಿಂದ ಸಾಗಿದ್ದು, ಕಸ್ತೂರು ಸೇರಿದಂತೆ ಚಾಮರಾಜನಗರ ಹಾಗೂ ನಂಜನಗೂಡು ತಾಲೂಕಿನ 23 ಗ್ರಾಮಗಳಲ್ಲೂ ಈ ಜಾತ್ರೆಯ ಸಂಭ್ರಮ ಕಳೆಗಟ್ಟಿದೆ.

ಕಳೆದೆರಡು ವರ್ಷಗಳಿಂದ ಕೋವಿಡ್ ಕಾರಣದಿಂದ ಸರಳವಾಗಿ ಆಚರಿಸಲಾಗಿದ್ದ ಜಾತ್ರೆಯನ್ನು ಈ ಬಾರಿ ವಿಜ್ರಂಭಣೆಯಿಂದ ಆಚರಿಸಲು ಸಿದ್ಧತೆ ನಡೆಸಲಾಗುತ್ತದೆ. ಪ್ರತಿ ವರ್ಷದ ಧನುರ್ಮಾಸದಲ್ಲಿ ಪುಷ್ಯ ಮಾಸದ ಎರಡನೇ ಭಾನುವಾರ ಬಂಡಿ ಜಾತ್ರೆ ನಡೆಯುತ್ತದೆ. ಈ ಬಾರಿ ವರ್ಷದ ಮೊದಲ ದಿನವೇ ಜಾತ್ರೆ ಬಂದಿರುವುದು ವಿಶೇಷವಾಗಿದ್ದು, ವರ್ಷದ ಮೊದಲನೇ ಜಾತ್ರಾ ಮಹೋತ್ಸವವಾಗಿ ಕಸ್ತೂರು ಬಂಡಿ ಜಾತ್ರೆ ಜಿಲ್ಲೆಯ ಜಾತ್ರೆಗಳಿಗೆ ಮುನ್ನುಡಿ ಬರೆಯಲಿದೆ.



ಹದಿನಾರು ಬಂಡಿಗಳ ವಿಶೇಷ ಜಾತ್ರೆ: ಕಸ್ತೂರು, ಭೋಗಾಪುರ, ಮರಿಯಾಲ, ಕಿರಗಸೂರು, ಸಪ್ಪಯ್ಯನಪುರ, ಕೆಲ್ಲಂಬಳ್ಳಿ, ಮೂಕಹಳ್ಳಿ, ಆನಹಳ್ಳಿ, ತೊರವಳ್ಳಿ, ಪುಟ್ಟೇಗೌಡನಹುಂಡಿ, ಹೊನ್ನೇಗೌಡನಹುಂಡಿ, ಪುಟ್ಟಯ್ಯನಹುಂಡಿ, ದಾಸನೂರು, ಚಿಕ್ಕಹೊಮ್ಮ, ದೊಡ್ಡಹೊಮ್ಮ ಹಾಗೂ ಹೆಗ್ಗವಾಡಿ ಗ್ರಾಮಸ್ಥರು ಬಂಡಿಗಳನ್ನು ಕಟ್ಟಿ, ಊರಲ್ಲಿ ಪೂಜೆ ಸಲ್ಲಿಸಿ ನಂತರ ಮೆರವಣಿಗೆ ಮೂಲಕ ಕಸ್ತೂರು ದೊಡ್ಡಮ್ಮತಾಯಿ ದೇವಾಲಯಕ್ಕೆ ಬಂದು, ಪ್ರದಕ್ಷಿಣೆ ಹಾಕುವುದು ಈ ಜಾತ್ರೆಯ ವಿಶೇಷ.

23 ಗ್ರಾಮಗಳಲ್ಲಿ ಜಾತ್ರೆಯ ದಿನ ಹಬ್ಬದ ವಾತಾವರಣ ಮನೆ ಮಾಡುತ್ತದೆ. ದೂರದ ಊರುಗಳಲ್ಲಿ ನೆಲೆಸಿರುವ ಕುಟುಂಬಸ್ಥರು ಮನೆಗೆ ಬರುತ್ತಾರೆ. ಸ್ನೇಹಿತರು, ನೆಂಟರಿಷ್ಟರನ್ನು ಮನೆಗೆ ಆಹ್ವಾನ ಮಾಡಿ, ಹಬ್ಬದ ಊಟ ಬಡಿಸುತ್ತಾರೆ.

ಬಂಡಿ ಜಾತ್ರೆಯನ್ನು ವ್ಯವಸ್ಥಿತವಾಗಿ ನಡೆಸಲು ಸಹಕಾರ ನೀಡಬೇಕು ಎಂದು ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಗೆ ಗ್ರಾಮಸ್ಥರಲ್ಲಿ ಮನವಿ ಮಾಡಿಕೊಂಡಿದೆ. ಜಾತ್ರೆಯ ಅಂಗಳವನ್ನು ಸ್ವಚ್ಛತೆಗೊಳಿಸಲಾಗಿದ್ದು, ದೊಡ್ಡಮ್ಮತಾಯಿ ದೇವಾಲಯದ ಆವರಣದಲ್ಲಿ ಹೋಟೆಲ್, ಅಂಗಡಿ–ಮುಂಗಟ್ಟುಗಳು ಹಾಗೂ ಆಟಿಕೆ ಸಾಮಾನು ಮಾರಾಟಗಾರರಿಗಾಗಿ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ.

ಡಿವೈಎಸ್‌ಪಿ ಭೇಟಿ: ಜಾತ್ರೆ ಹಿನ್ನೆಲೆಯಲ್ಲಿ ಶನಿವಾರ ಕಸ್ತೂರಿನ ದೊಡ್ಡಮ್ಮತಾಯಿ ದೇವಸ್ಥಾನಕ್ಕೆ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣಿಕೊಪ್ಪ ಭೇಟಿ ನೀಡಿ, ಸಿದ್ಧತೆ ಪರಿಶೀಲಿಸಿದರು. ಈ ವೇಳೆ ಸಂತೇಮರಳ್ಳಿ ಪಿಎಸ್‌ಐ ಮಹೇಶ್, ಕುದೇರ್ ಪಿಎಸ್‌ಐ ಹನುಮಂತ್ ಉಪ್ಪಾರ್ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದರು.

ಬಸವ ಭವನ ನಿರ್ಮಾಣಕ್ಕೆ ಶಾಸಕರಿಂದ ಭೂಮಿ ಪೂಜೆ

ಗುಂಡ್ಲುಪೇಟೆ, ಡಿ.31– ತಾಲೂಕಿನ ದೊಡ್ಡತುಪ್ಪೂರು ಗ್ರಾಮದಲ್ಲಿ 13 ಲಕ್ಷ ವೆಚ್ಚದಲ್ಲಿ ಬಸವ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ನಿರಂಜನ ಕುಮಾರ್ ಭೂಮಿ ಪೂಜೆ ನೆರವೇರಿಸಿದರು.


ನಂತರ ಮಾತನಾಡಿದ ಅವರು, ತಾಲೂಕಿನ ಹಲವು ಗ್ರಾಮಗಳಲ್ಲಿ ಈಗಾಗಲೇ ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ. ಅವುಗಳ ಸೂಕ್ತ ನಿರ್ವಹಣೆಯನ್ನು ಗ್ರಾಮಸ್ಥರು ಮಾಡಿಕೊಂಡು ಸಮುದಾಯ ಭವನಗಳನ್ನು ಸದುಪಯೋಗಪಡಿಸಿಕೊಂಡು ಶುಭ ಕಾರ್ಯಗಳನ್ನು ನೆರವೇರಿಸಿಕೊಳ್ಳಿ ಎಂದು ಸಲಹೆ ನೀಡಿದರು.



ಈ ಸಂದರ್ಭದಲ್ಲಿ ಬನ್ನಿತಾಳಪುರ ಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಮಹದೇವಪ್ರಸಾದ್, ಸದಾನಂದ, ನಾಗರಾಜು, ನವೀನ್, ಲಿಂಗರಾಜು ಹಾಗೂ ಇತರರು ಇದ್ದರು.

ನೀಲಕಂಠೇಶ್ವರ ದೇಗುಲದಲ್ಲಿ ಕಳ್ಳತನ

ಯಳಂದೂರು, ಡಿ.31– ತಾಲೂಕಿನ ಗಣಿಗನೂರು ಗ್ರಾಮದ ಸುವರ್ಣಾವತಿ ನದಿಯ ನಡುವೆ ಇರುವ ಶ್ರೀ ನೀಲಕಂಠೇಶ್ವರ ದೇಗುಲದಲ್ಲಿ ಶುಕ್ರವಾರ ರಾತ್ರಿ ದೇಗುಲದ ಬಾಗಿಲು ಮುರಿದು ಕಳ್ಳತನ ಮಾಡಲಾಗಿದೆ.



ದೇಗುಲದಲ್ಲಿ ಇದ್ದ ಗೋಲಕವನ್ನು ಕಳ್ಳರು ಹೊತ್ತೊಯ್ದಿದ್ದಾರೆ. ಅಲ್ಲದೆ ದೇಗುಲದಲ್ಲಿ ಇದ್ದ ಚಿನ್ನದ ತಾಳಿಯನ್ನು ಕಳ್ಳತನ ಮಾಡಿದ್ದಾರೆ. ದೇಗುಲದ ಮುಖ್ಯ ದ್ವಾರವನ್ನು ಒಡೆದು ಈ ಕಳ್ಳತನ ನಡೆಸಲಾಗಿದೆ. ಈ ಬಗ್ಗೆ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು ಪೊಲೀಸರು ಮುಂದಿನ ಕ್ರಮವನ್ನು ವಹಿಸಿದ್ದಾರೆ.

ಅಸ್ಪೃಶ್ಯತೆ ಅಳಿಯಲಿ, ಮಾನವತೆ ಬೆಳಗಲಿ ಜಾಗೃತಿ ಜಾಥಾ

ಚಾಮರಾಜನಗರ, ಡಿ.31– ಅಸ್ಪೃಶ್ಯತೆ ಅಳಿಯಲಿ, ಮಾನವತೆ ಬೆಳಗಲಿ ಎಂಬ ಘೋಷ ವಾಕ್ಯವನ್ನಿಟ್ಟುಕೊಂಡು ಮೈಸೂರಿನ ಬಿಡುಗಡೆ ಹಾಗೂ ಚಾಮರಾಜನಗರದ ಸಮಾನಾಸಕ್ತರು ನಗರದಲ್ಲಿ ಗುರುವಾರ ಜಾಗೃತಿ ಜಾಥಾ ನಡೆಸಿದರು.

ಇಲ್ಲಿನ ಪ್ರವಾಸಿ ಮಂದಿರದಿಂದ ಹೊರಟ ಜಾಥಾವು ದೊಡ್ಡ ಅಂಗಡಿ ಬೀದಿ, ಚಿಕ್ಕ ಅಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನದವರೆಗೆ ನಡೆಯಿತು. ಅಲ್ಲಿ ಸ್ವಲ್ಪ ಸಮಯ ಧರಣಿ ನಡೆಸಿದ ನಂತರ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಅಸ್ಪೃಶ್ಯತೆ ಆಚರಣೆ ಕಾನೂನು ದೃಷ್ಟಿಯಲ್ಲಿ ಅಪರಾಧ. ಸಾಮಾಜಿಕವಾಗಿ ಮತ್ತು ನೈತಿಕವಾಗಿ ಹೀನ ನಡವಳಿಕೆ. ಅವೈಜ್ಞಾನಿಕವಾದದ್ದು, ಸರ್ಕಾರಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದೆ. ಆದರೂ, ಈ ಕ್ಷಣದಲ್ಲಿಯೂ ಅಸ್ಪೃಶ್ಯತೆ ಆಚರಣೆಯ ವರದಿಗಳು ಎಲ್ಲಾ ಕಡೆಗಳಿಂದ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಜಾಗೃತಿ ಕಾರ್ಯಕ್ರಮಗಳನ್ನು ತೀವ್ರಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಲೇಖಕರಾದ ಹೊರೆಯಾಲ ದೊರೆಸ್ವಾಮಿ, ಚಿಂತಾಮಣಿ, ಪರಿಸರವಾದಿ ಪುಣಜನೂರು ದೊರೆಸ್ವಾಮಿ, ಹಿರಿಯ ಪತ್ರಕರ್ತ ಎ.ಡಿ. ಸಿಲ್ವ, ಸಾಹಿತಿ ಕೆ. ವೆಂಕಟರಾಜು, ರೋಟರಿ ಅಧ್ಯಕ್ಷ ಮಹದೇವಸ್ವಾಮಿ, ನಗರಸಭೆ ಸದಸ್ಯ ಮಹೇಶ್, ಗಾಯಕ ಸಿ.ಎಂ. ನರಸಿಂಹಮೂರ್ತಿ, ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಮುಖಂಡರಾದ ಸಿದ್ದಮಲ್ಲಪ್ಪ, ಅಬ್ರಾರ ಅಹಮದ್, ಎಚ್.ಎಸ್. ಗಂಗಾಧರ್, ಶಿವಲಿಂಗಮೂರ್ತಿ ಇತರರಿದ್ದರು.

ಚಿಕ್ಕಲ್ಲೂರು ಜಾತ್ರಾ ಮಹೋತ್ಸವ: ಏಕಮುಖ ಸಂಚಾರ

ಚಾಮರಾಜನಗರ, ಡಿ.31– ಕೊಳ್ಳೇಗಾಲ ತಾಲೂಕು ಹನೂರು ಠಾಣಾ ಸರಹದ್ದು ವ್ಯಾಪ್ತಿಯ ಚಿಕ್ಕಲ್ಲೂರು ಗ್ರಾಮದಲ್ಲಿ ಜ.6ರಿಂದ 10ರವರೆಗೆ ನಡೆಯಲಿರುವ ಶ್ರೀ ಸಿದ್ದಪ್ಪಾಜಿ ಜಾತ್ರಾ ಮಹೋತ್ಸವ ಸಂಬಂಧ ಜಾತ್ರೆಗೆ ಬರುವ ಭಕ್ತಾದಿಗಳು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮತ್ತು ಸುಗಮ ವಾಹನ ಸಂಚಾರಕ್ಕಾಗಿ ಬಾಣೂರು–ಚಿಕ್ಕಲ್ಲೂರು ಮಾರ್ಗದಲ್ಲಿ ಏಕಮುಖ ಸಂಚಾರದ (ಒನ್‌ವೇ) ವ್ಯವಸ್ಥೆಗೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಆದೇಶ ಹೊರಡಿಸಿದ್ದಾರೆ. ಮಾರ್ಗ–1ರಲ್ಲಿ ಚಿಕ್ಕಲ್ಲೂರು ಗ್ರಾಮಕ್ಕೆ ಒಳಬರಲು ಕೊತ್ತನೂರು ಗ್ರಾಮ–ಬಾಣೂರು ಕ್ರಾಸ್–ಬಾಣೂರು–ಸುಂಡ್ರಳ್ಳಿ ಮಾರ್ಗದಲ್ಲಿ ಏಕಮುಖವಾಗಿ ಮಾತ್ರ ವಾಹನಗಳು ಸಂಚರಿಸಬೇಕು ಮತ್ತು ಮಾರ್ಗ–2ರಲ್ಲಿ ಚಿಕ್ಕಲ್ಲೂರು ಗ್ರಾಮದಿಂದ ಹೊರಹೋಗಲು ಚಿಕ್ಕಲ್ಲೂರು–ಬಾಣೂರು ಕ್ರಾಸ್–ಕೊತ್ತನೂರು ಮಾರ್ಗದಲ್ಲಿ ರಸ್ತೆಯ ಏಕಮುಖ ಸಂಚಾರವೆಂದು ಘೋಷಿಸಿ ಜಿಲ್ಲಾಧಿಕಾರಿಯವರು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಚಾಮರಾಜನಗರ, ಡಿ.31– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಭಾನುವಾರ (ಜ.1) ಬೆಳಗ್ಗೆ 11 ಗಂಟೆಗೆ ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ. ಶ್ರೀನಿವಾಸಪ್ರಸಾದ್ ಉಪಸ್ಥಿರಿರುವರು.

ಒಂದನೇ ಪುಟದಿಂದ

320 ಪ್ರಕರಣಗಳಲ್ಲಿ 346 ಮಂದಿ ಬಂಧನ

ಒತ್ತು ನೀಡಲಾಗಿದೆ. ಹಗಲು ಮತ್ತು ರಾತ್ರಿ ಗಸ್ತಿನ ವೇಳೆ ಕಳವು ಪ್ರಕರಣಗಳ ಆರೋಪಿಗಳ ಚಲನ-ವಲನದ ಮೇಲೆ ನಿಗಾ ವಹಿಸಲಾಗುತ್ತಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದರು.

ರೌಡಿಗಳಿಗೆ ಎಚ್ಚರಿಕೆ ಸಂದೇಶ: ನಗರದಲ್ಲಿ ರೌಡಿ ಚಟುವಟಿಕೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ರೌಡಿಗಳ ಮನೆ ಮೇಲೆ ಅನಿರೀಕ್ಷಿತವಾಗಿ ದಾಳಿ ನಡೆಸಲಾಗುತ್ತಿದೆ. ಸಕ್ರಿಯವಾಗಿ ರೌಡಿ ಚಟುವಟಿಕೆಯಲ್ಲಿ ತೊಡಗಿರುವವರ ವಿರುದ್ಧ ಭದ್ರತಾ ಪ್ರಕರಣಗಳನ್ನು ದಾಖಲಿಸ ಲಾಗಿದೆ. ಜೊತೆಗೆ ಕೆಲವರನ್ನು ಗಡಿಪಾರು ಮಾಡುವ ಮೂಲಕ ರೌಡಿಗಳಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಅವರು ಹೇಳಿದರು.

ಸಾರ್ವಜನಿಕರ ಸಹಭಾಗಿತ್ವ: ಅಪರಾಧ ತಡೆಗಾಗಿ ಸಾರ್ವಜನಿಕರ ಸಹಭಾಗಿತ್ವವು ಅತ್ಯವಶ್ಯಕವಾಗಿರುವುದರಿಂದ ಅಪರಾಧ ತಡೆ ಮಾಸಾಚರಣೆ ಹಿನ್ನೆಲೆಯಲ್ಲಿ ನಗರಾದ್ಯಂತ ಅಪರಾಧ ನಿಯಂತ್ರಣ ಮತ್ತು ಸಂಚಾರ ನಿಯಮಗಳ ಕುರಿತು ಅರಿವು ಕಾರ್ಯಕ್ರಮ ಗಳನ್ನು ನಡೆಸಲಾಗುತ್ತಿದೆ. ಶಾಲಾ-ಕಾಲೇಜುಗಳು, ಮಹಿಳೆಯರು ಕಾರ್ಯ ನಿರ್ವಹಿಸುವ ಕಾರ್ಖಾನೆ, ಕಚೇರಿಗಳು ಹಾಗೂ ಇತರ ಸ್ಥಳಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸ ಲಾಗುತ್ತಿದೆ. ಹೆಚ್ಚು ಜನಸಂದಣಿ ಇರುವ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ಪ್ರವಾಸಿ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಕಳವು ಪ್ರಕ ರಣಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದರು. ಈ ವೇಳೆ ಡಿಸಿಪಿಗಳಾದ ಎಂ.ಎಸ್.ಗೀತಾ ಪ್ರಸನ್ನ, ಎಂ.ಮುತ್ತುರಾಜ್, ಎಸಿಪಿಗಳಾದ ಶಿವರಾಜ್, ಎಂ.ಶಿವಶಂಕರ್, ಸಿ.ಪಿ.ಅಶ್ವತ್ಥ ನಾರಾಯಣ, ಪರಶುರಾಮಪ್ಪ ಹಾಗೂ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಉಪಸ್ಥಿತರಿದ್ದರು.

ಆನ್‌ಲೈನ್ ವಂಚನೆ ಸವಾಲು ಸ್ವೀಕರಿಸಿ ಯಶಸ್ವಿಯಾದ ಪೊಲೀಸರು!

ಹಲವು ಪ್ರಕರಣ ಭೇದಿಸಿ, ಲಕ್ಷಾಂತರ ರೂ. ಸಂತ್ರಸ್ತರಿಗೆ ವಾಪಸ್

ಮೈಸೂರು, ಡಿ.31-ಸೈಬರ್ ಕ್ರೈಂ ಪ್ರಕರಣಗಳಲ್ಲಿ ವಂಚಕರು ದೂರದ ಯಾವುದೋ ಊರಿನಲ್ಲಿ ಕುಳಿತು ಆನ್‌ಲೈನ್ ಮೂಲಕ ಹಣ ದೋಚುತ್ತಾರೆ. ಕೆಲವು ಪ್ರಕರಣಗಳಲ್ಲಿ ಖದೀಮರು ವಿದೇಶದಲ್ಲೇ ಕುಳಿತು ನಮ್ಮ ಹಣವನ್ನು ದೋಚುತ್ತಾರೆ. ಹೀಗೆ ನಮ್ಮ ಬ್ಯಾಂಕ್ ಖಾತೆಯಿಂದ ಹಣ ಕಬಳಿಸಿದವರು ಯಾರು ಎಂಬುದರ ಸುಳಿವೇ ಇರುವುದಿಲ್ಲ. ಹೀಗಾಗಿ ಸೈಬರ್ ಕ್ರೈಂ ಪ್ರಕರಣಗಳು ಪತ್ತೆಯಾಗಿ ಕಳೆದುಕೊಂಡ ಹಣ ಮರಳಿ ಸಿಗುವುದು ತೀರಾ ಕಷ್ಟ. ಆದರೆ ಮೈಸೂರು ನಗರ ಸೆನ್ ಠಾಣೆ ಪೊಲೀಸರು ಕಳೆದ ವರ್ಷ ವರದಿಯಾದ 284 ಪ್ರಕರಣಗಳ ಪೈಕಿ 94 ಅನ್ನು ಭೇದಿಸಿ, 96.85 ಲಕ್ಷ ರೂ. ವಶಪಡಿಸಿಕೊಂಡು ವಾರಸುದಾರರಿಗೆ ಹಿಂತಿರುಗಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ವಶಪಡಿಸಿಕೊಂಡ ಕಳವು ಮಾಲುಗಳನ್ನು ಇಂದು ತಮ್ಮ ಕಚೇರಿಯಲ್ಲಿ ವಾರಸುದಾರರಿಗೆ ಹಿಂತಿರುಗಿಸಿದ ವೇಳೆ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು. ಒಂದು ಪ್ರಕರಣವಂತೂ 2020ರ ಕೊನೆಯಲ್ಲಿ ನಡೆದು, 2021ರಲ್ಲಿ ಪ್ರಥಮ ಪ್ರಕರಣವಾಗಿ ಸೆನ್ ಠಾಣೆಯಲ್ಲಿ ದಾಖಲಾಗಿತ್ತು. ಈ ಪ್ರಕರಣವನ್ನೂ ಕೂಡ ಕಳೆದ ವರ್ಷ ಪೊಲೀಸರು ಪತ್ತೆ ಹಚ್ಚಿದ್ದಾರೆ.

ಮೈಸೂರಿನ ವಿವಿ ಮೊಹಲ್ಲಾದ ಉದ್ಯಮಿ ತೇಜಸ್ ರುದ್ರಪ್ಪ ಎಂಬುವರ ಡೆಬಿಟ್ ಕಾರ್ಡ್‌ಗಳನ್ನು ಬಳಸಿಕೊಂಡು ಅವರಿಗೆ ಅರಿವಿಲ್ಲದಂತೆ 2020 ನ.1ರಿಂದ ಡಿ.24ರವರೆಗೆ 21,02,041 ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿತ್ತು. ಈ ಸಂಬಂಧ ಅವರು 2021ರ ಜ.8ರಂದು ಮೈಸೂರು ನಗರ ಸೆನ್ ಠಾಣೆಗೆ ದೂರು ಸಲ್ಲಿಸಿದ್ದರು. ಆ ವರ್ಷದಲ್ಲಿ ಈ ಠಾಣೆಯಲ್ಲಿ ದಾಖಲಾದ ಪ್ರಥಮ ದೂರು ಅದು.

ಈ ಪ್ರಕರಣದ ತನಿಖೆ ಕೈಗೊಂಡಿದ್ದ ಪೊಲೀಸರು ತಾಂತ್ರಿಕತೆಯನ್ನು ಬಳಸಿಕೊಂಡು ತೇಜಸ್ ರುದ್ರಪ್ಪ ಅವರ ಡೆಬಿಟ್ ಕಾರ್ಡ್‌ಗಳನ್ನು ಬಳಸಿ ಯಾವ್ಯಾವ ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ. ಆದರೆ ಖದೀಮ ಡೆಬಿಟ್ ಕಾರ್ಡ್‌ಗಳ ಮೂಲಕ ಹಣ ಡ್ರಾ ಮಾಡದೇ ಅಮೆಜಾನ್‌ನಲ್ಲಿ ಆನ್‌ಲೈನ್ ಮೂಲಕ ಸುಮಾರು 20 ಲಕ್ಷ ರೂ. ಮೌಲ್ಯದ ಚಿನ್ನದ ಕಾಯಿನ್ ಹಾಗೂ ಇತರ ವಸ್ತುಗಳನ್ನು ಖರೀದಿಸಿದ್ದ ಎಂಬುದು ತನಿಖೆ ವೇಳೆ ತಿಳಿದು ಬಂದಿದೆ. ಆದರೆ ಆತನ ವಿಳಾಸವಂತೂ ಅಸ್ಪಷ್ಟ, ಆದರೂ ಛಲ ಬಿಡದ ಸೆನ್ ಠಾಣೆ ಪೊಲೀಸರು ತನಿಖೆಯನ್ನು ಮುಂದುವರೆಸಿ ಕೊನೆಗೂ ಮೈಸೂರಿನವನೇ ಆದ ಆರೋಪಿಯನ್ನು ಬಂಧಿಸಿ ಆತನಿಂದ ಬೋಟ್ ಕಂಪನಿಯ ಸ್ಪೀಕರ್, ಎಂಐ ಕಂಪನಿಯ ಟಿವಿ, ಲೈಫ್ ಲೈನ್ ಕಂಪನಿಯ ಟ್ರೆಡ್ ಮಿಲ್, ನಿಕಾನ್ ಕಂಪನಿಯ ಡಿಜಿಟಲ್ ಕ್ಯಾಮರಾ, ವಿವಿಟರ್ ಕಂಪನಿಯ ಲೆನ್ಸ್ ಫಿಲ್ಟರ್, ವಿವಿಟರ್ ಸೀರಿಯಲ್-1 ಕಂಪನಿಯ ಲೆನ್ಸ್, ಲೂಮಿನಸ್ ಕಂಪನಿಯ ಇನ್‌ವರ್ಟರ್ ಮತ್ತು ಟ್ರ್ಯಾಲಿ ಸೇರಿದಂತೆ 2.16 ಲಕ್ಷ ರೂ. ಮೌಲ್ಯದ ವಸ್ತುಗಳು ಹಾಗೂ 15.05 ಲಕ್ಷ ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಒಟ್ಟಾರೆ ತೇಜಸ್ ರುದ್ರಪ್ಪ ಕಳೆದುಕೊಂಡ 21.02 ಲಕ್ಷ ರೂ. ಪೈಕಿ ಸೈಬರ್ ಕ್ರೈಂ ಪೊಲೀಸರು 17.41 ಲಕ್ಷ ರೂ. ವಶಪಡಿಸಿಕೊಂಡಂತಾಯಿತು ಎಂದು ಸೆನ್ ಠಾಣೆಯ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್ ಇದೇ ವೇಳೆ ನಗರ ಪೊಲೀಸ್ ಆಯುಕ್ತರಿಗೆ ನೀಡಿದ ವರದಿಯಲ್ಲಿ ತಿಳಿಸಿದ್ದಾರೆ. ಈ ಮೂಲಕ ಆನ್‌ಲೈನ್‌ನಲ್ಲಿ ಕಳೆದುಕೊಂಡ ಹಣವನ್ನೂ ಕೂಡ ಸೈಬರ್ ಕ್ರೈಂ ಪೊಲೀಸರ ದಕ್ಷತೆಯಿಂದ ಮರಳಿ ಪಡೆಯಬಹುದು ಎಂಬ ವಿಶ್ವಾಸವನ್ನು ಸಾರ್ವಜನಿಕರಲ್ಲಿ ಮೂಡಿಸಿದಂತಾಗಿದೆ.

ಸರಗಳ್ಳರ ಸೆರೆಯಲ್ಲಿ ಸಾಹಸ ಮೆರೆದ ಯುವತಿ ಧೈರ್ಯಕ್ಕೆ ಪ್ರಶಂಸೆ



ಮೈಸೂರು, ಡಿ.31-ಸರಗಳ್ಳರು ಕ್ಷಣಮಾತ್ರದಲ್ಲಿ ಕತ್ತಿನಲ್ಲಿದ್ದ ಸರ ಕಿತ್ತಾಗ ಮಹಿಳೆಯರು ಹಾಗೂ ಯುವತಿಯರು ಆಘಾತಕ್ಕೊಳಗಾಗಿ, ಏನೂ ಮಾಡಲು ತೋಚದಂತಾಗುತ್ತಾರೆ. ಆದರೆ ಮೈಸೂರು ನಗರದಲ್ಲಿ ಯುವತಿಯೋರ್ವಳು ತನ್ನ ಸರ ಕೀಳಲು ಬಂದ ನಾಲ್ವರನ್ನು ಪೊಲೀಸರಿಗೆ ಹಿಡಿದು ಕೊಡುವ ಮೂಲಕ ಧೈರ್ಯ ಪ್ರದರ್ಶಿಸಿದ್ದು, ಇಂದು ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಕಳವು ಮಾಲುಗಳನ್ನು ವಾರಸುದಾರರಿಗೆ ಹಿಂತಿರುಗಿಸಿದ ಕಾರ್ಯಕ್ರಮದ ವೇಳೆ ಬೆಳಕಿಗೆ ಬಂತು.

ವಿವರ: ಜೆಎಲ್‌ಬಿ ರಸ್ತೆಯ ನಿವಾಸಿ ಸೌಮ್ಯ ಅವರು ಸುಮಾರು 7 ತಿಂಗಳ ಹಿಂದೆ ಕೈಯ್ಯಲ್ಲಿ ಕೋಲು ಹಿಡಿದು ಬೆಳಗಿನ ಜಾವ ಸಾಕುನಾಯಿಯನ್ನು ವಾಯು ವಿಹಾರಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಒಂದು ಕಾರು ಯೂ-ಟರ್ನ್ ಹೊಡೆದು ಅವರ ಬಳಿಗೆ ಬಂದಿದೆ. ಆಗ ಕಾರಿನಲ್ಲಿದ್ದ ಖದೀಮ ಸೌಮ್ಯ ಅವರ ಕತ್ತಿಗೆ ಕೈಹಾಕಿ ಸರ ಕಿತ್ತಿದ್ದಾನೆ. ತಕ್ಷಣವೇ ಸೌಮ್ಯ ಅವರು ಕೈಯ್ಯಲ್ಲಿದ್ದ ಕೋಲಿನಿಂದ ಆತನಿಗೆ ಹೊಡೆದದ್ದಲ್ಲದೇ, ಕಾರು ಚಲಿಸಲಾರಂಭಿಸಿದಾಗ ಆತನ ಕೈಯ್ಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಖದೀಮರು ಬಂದಿದ್ದ ಕಾರು ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದು ನಿಂತಿದೆ. ಈ ವೇಳೆ ಅದೇ ರಸ್ತೆಯಲ್ಲಿ ಬಂದ ಕೆಲ ಸಾರ್ವ ಜನಿಕರು ಸೌಮ್ಯ ಅವರ ಸಹಾಯಕ್ಕೆ ಬಂದು ಕಾರಿನಲ್ಲಿದ್ದ ನಾಲ್ವರು ಖದೀಮರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಇಂದು ಈ ವಿಷಯವನ್ನು ಸೌಮ್ಯ ಸುದ್ದಿಗಾರರಿಗೆ ತಿಳಿಸಿದರು. ಈ ವೇಳೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಸೌಮ್ಯ ಅವರ ಧೈರ್ಯ ಹಾಗೂ ಸಾಹಸದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂದಿನಿಗೂ ಆಗಲಿದೆ!

ವ್ಯಕ್ತಪಡಿಸಿದ್ದಾರೆ. ಇದಕ್ಕೆ ಸಿದ್ದರಾಮಯ್ಯ ಅವರೂ ಧ್ವನಿಗೂಡಿಸಿದ್ದಾರೆ. ಕರ್ನಾಟಕ ಹಾಲು ಮಹಾ ಮಂಡಳವು ಗುಜರಾತ್ ಅಮುಲ್ ಜೊತೆಗೂಡಬೇಕೆಂಬ ಬಯಕೆಯನ್ನು ಗೃಹ ಸಚಿವ ಅಮಿತ್ ಶಾ ಅವರು ವ್ಯಕ್ತಪಡಿಸಿದ್ದಾರೆ. ಕನ್ನಡಿಗರು ಈಗಲೇ ಎಚ್ಚೆತ್ತುಕೊಂಡು, ವಿರೋಧ ತೋರ್ಪಡಿಸದಿದ್ದರೆ ನಮ್ಮ ನಾಡಿನ ಬ್ಯಾಂಕುಗಳಿಗಾದ ಗತಿಯೇ ನಂದಿನಿಗೂ ಆಗಲಿದೆ ಎಂದು ಎಚ್ಚರಿಸಿದ್ದಾರೆ. ನಮ್ಮ ರಾಜ್ಯದ ಹಾಲು ಉತ್ಪಾದಕ ರೈತರು ಸುಮಾರು ರೂ. 20,000 ಕೋಟಿ ವರೆಗೆ ಹಾಲಿನ ವಹಿವಾಟು ಮಾಡುತ್ತಾರೆ. ಇವರ ಬದುಕು ನಿಂತಿರುವುದು ಹೈನುಗಾರಿಕೆಯ ಮೇಲೆ. ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆ ಖರ್ಚಿನಿಂದ ಹಿಡಿದು, ಅಕ್ಕಿ, ಬೇಳೆ, ಬಟ್ಟೆ- ಬರೆ ಮುಂತಾದವುಗಳೆಲ್ಲ ಹಾಲಿನಿಂದಲೆ ಬರಬೇಕು. ಇಂಥ ಚಿನ್ನದ ಮೊಟ್ಟೆ ಇಡುವ ಕೋಳಿಯ ಮೇಲೆ ಈಗ ಗುಜರಾತ್ ಕಾರ್ಪೊರೇಟ್ ಕುಳಗಳ ಕಣ್ಣು ಬಿದ್ದಿದೆ. ಅವರ ಕಣ್ಣು ಬಿದ್ದ ಕಡೆ, ಅವರು ಕಾಲು ಇಟ್ಟ ಕಡೆ ಎಲ್ಲವೂ ಸರ್ವನಾಶವಾಗುತ್ತದೆ. ಇವರಿಗಾಗಿಯೆ ಹಗಲಿರುಳು ದುಡಿಯುತ್ತಿರುವ ಅಮಿತ್ ಶಾ, ನರೇಂದ್ರ ಮೋದಿ ಮುಂತಾದವರೆಲ್ಲರು ಥರ ಥರದ ಸುಳ್ಳುಗಳನ್ನು ಸಿದ್ಧಪಡಿಸಿಕೊಂಡು ಕನ್ನಡಿಗರ ತಲೆಗೆ ತುಂಬುತ್ತಾರೆ ಎಂದು ಅವರು ಹೇಳಿದ್ದಾರೆ. ನಮ್ಮನ್ನು ದೋಚಲು ಬಿಜೆಪಿಯವರು ಸಿದ್ಧಪಡಿಸಿಕೊಂಡಿರುವ ಸುಳ್ಳಿನ ಸರಮಾಲೆಯಲ್ಲಿ ಹಿಂದೂ-ಮುಸ್ಲಿಂ ದ್ವೇಷ, ಭ್ರಷ್ಟಾಚಾರ, ಕುಟುಂಬ ರಾಜಕಾರಣ ಎಂಬ ಕಡ್ಡಾಯವಾದ ಮೂರು ಅಂಶಗಳು ಇರುತ್ತವೆ. ಹಾಗಾಗಿ ಜನರು ಎಚ್ಚರ ವಹಿಸಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಟ್ರಿಣ್ ಟ್ರಿಣ್ ಸೇವೆಗೆ ಹೊಸ ವರ್ಷಕ್ಕೆ ನೂತನ ಸ್ಪರ್ಶ; ಮತ್ತೊಂದು ಕಂಪನಿಗೆ ಹೊಸದಾಗಿ ಟೆಂಡರ್

ಜ.26ರೊಳಗೆ ಅತ್ಯಾಧುನಿಕ ಪೆಡಲ್ ಅಸಿಸ್ಟ್ ಸೌಲಭ್ಯ ಹೊಂದಿರುವ ಸಾವಿರ ಬೈಸಿಕಲ್‌ಗಳು ಸೇವೆಗೆ ಲಭ್ಯ





● ಎಂ.ಬಿ.ಪವನ್‌ಮೂರ್ತಿ

ಮೈಸೂರು,ಡಿ.31- ಮೈಸೂರಿನ ಸೈಕಲ್ ಸವಾರಿಯ ಪರಂಪರೆಗೆ ಮತ್ತಷ್ಟು ಉತ್ತೇಜನ ನೀಡುವ ಸಲುವಾಗಿ ಮೈಸೂರು ಮಹಾನಗರ ಪಾಲಿಕೆ ಅನುಷ್ಠಾನಗೊಳಿಸಿದ ಟ್ರಿಣ್... ಟ್ರಿಣ್... ಸಾರ್ವಜನಿಕ ಸೈಕಲ್ ವಿನಿಯೋಗ (ಪಿಬಿಎಸ್) ವ್ಯವಸ್ಥೆಗೆ ಹೊಸ ವರ್ಷಕ್ಕೆ (2023) ಹೊಸ ಮೆರಗು ದೊರೆಯುತ್ತಿದ್ದು, ಈ ವ್ಯವಸ್ಥೆಯಡಿ ಸಾವಿರ ಹೊಸ ಸೈಕಲ್‌ಗಳು ಸವಾರರ ಸೇವೆಗೆ ಲಭ್ಯವಾಗಲಿವೆ.

ಜನವರಿ 26ರ ಗಣರಾಜ್ಯೋತ್ಸವದ ಒಳಗಾಗಿ ಅತ್ಯಾಧುನಿಕ ಪೆಡಲ್ ಅಸಿಸ್ಟ್ ಸೌಲಭ್ಯ ಹೊಂದಿರುವ ಸಾವಿರ ಬೈಸಿಕಲ್‌ಗಳು ಮೈಸೂರು ನಗರದ ರಸ್ತೆಗಿಳಿಯಲಿವೆ. ಈ ಎಲ್ಲಾ ಬೈಸಿಕಲ್‌ಗಳು ಬ್ಯಾಟರಿ ಹೊಂದಿರುವ ಹಿನ್ನೆಲೆಯಲ್ಲಿ ಎತ್ತರದ ರಸ್ತೆಗಳಲ್ಲಿ ಪೆಡಲ್ ಮಾಡದೇ ಚಲಿಸುವ ಸೌಲಭ್ಯ ಒಳಗೊಂಡಿವೆ.

ಟ್ರಿಣ್ ಟ್ರಿಣ್ ಸೇವೆಗೆಂದು ಮೈಸೂರು ನಗರದಲ್ಲಿ 52 ವಿನಿಯೋಗ ಸೇವಾ ಕೇಂದ್ರಗಳಿವೆ (ಡಾಕಿಂಗ್ ಸ್ಟೇಷನ್/ಸೈಕಲ್ ನಿಲ್ದಾಣಗಳು). ಇದನ್ನು 100ಕ್ಕೆ ಹೆಚ್ಚಿಸಲಾಗುತ್ತಿದೆ. ಪ್ರಸ್ತುತ 17,414 ಮಂದಿ ಸದಸ್ಯತ್ವ ಪಡೆದು ಟ್ರಿಣ್ ಟ್ರಿಣ್ ಸೈಕಲ್ ಬಳಕೆ ಮಾಡುತ್ತಿದ್ದಾರೆ. ಸವಾರರು ಯಾವುದೇ ಕೇಂದ್ರದಲ್ಲಿ ಸೈಕಲ್ ಪಡೆದು ಸವಾರಿ ಪೂರ್ಣಗೊಳಿಸಿದ ಬಳಿಕ ತಮಗೆ ಸಮೀಪದ ಯಾವುದೇ ಕೇಂದ್ರಗಳಲ್ಲಿ ಟ್ರಿಣ್ ಟ್ರಿಣ್ ಸೈಕಲ್‌ಗಳನ್ನು ನಿಲುಗಡೆ ಮಾಡಬಹುದು.

ಮತ್ತೊಂದು ಕಂಪನಿಗೆ ಟೆಂಡರ್: 2017 ಜೂ.4ರಂದು ಮೈಸೂರಿನಲ್ಲಿ ಸಾರ್ವಜನಿಕ ಸೈಕಲ್ ವಿನಿಯೋಗ (ಪಿಬಿಎಸ್) ವ್ಯವಸ್ಥೆ ಚಾಲನೆಗೆ ಬಂದಿತು. ನಗರ ಭೂಸಾರಿಗೆ ನಿರ್ದೇಶನಾಲಯದ ಸಹಯೋಗದೊಂದಿಗೆ ಈ ವ್ಯವಸ್ಥೆ ಅನುಷ್ಠಾನಗೊಳಿಸಿದ ಪಾಲಿಕೆ, ನಿರ್ವಹಣೆ ಮತ್ತು ಕಾರ್ಯಾಚರಣೆಯನ್ನು ಮೈಸೂರು ಮೂಲದ ಗ್ರೀನ್ ವ್ಹೀಲ್ ರೈಡ್ ಕಂಪನಿಗೆ ಟೆಂಡರ್ ಮೂಲಕ ನೀಡಿತು. ಸದರಿ ಕಂಪನಿಯು ಸದ್ಯ 30 ಗೇರ್ ಸೈಕಲ್‌ಗಳು ಸೇರಿದಂತೆ ಒಟ್ಟು 450 ಸೈಕಲ್‌ಗಳ ಸೇವೆ ನೀಡುತ್ತಿದೆ. ಇದೀಗ ಗುಜರಾತ್ ಮೂಲದ ಗ್ರೀನ್ ಪೀಡಿಯಾ ಬೈಕ್ ಶೇರ್ ಪ್ರೈವೆಟ್ ಲಿಮಿಟೆಡ್ ಕಂಪನಿಗೆ ಹೊಸದಾಗಿ ಟೆಂಡರ್ ಆಗಿದ್ದು, ಅತ್ಯಾಧುನಿಕ ಪೆಡಲ್ ಅಸಿಸ್ಟ್ ಸೌಲಭ್ಯದ ಸಾವಿರ ಸೈಕಲ್‌ಗಳೊಂದಿಗೆ ಸೇವೆ ಆರಂಭಿಸಲಿದೆ.

ಶೀಘ್ರ ಸೈಕಲ್ ಪಥ ನಿರ್ಮಾಣಕ್ಕೆ ಚಾಲನೆ: ಮಹಾನಗರ ಪಾಲಿಕೆ ಟ್ರಿಣ್ ಟ್ರಿಣ್ ಮಾತ್ರವಲ್ಲದೆ, ಎಲ್ಲಾ ಸೈಕಲ್ ಸವಾರರಿಗೆ ಮೈಸೂರು ನಗರದಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೆ ಸಜ್ಜಾಗುತ್ತಿದೆ. ನಗರದ ಹಲವು ರಸ್ತೆಗಳಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣ ಯೋಜನೆ ಸಂಬಂಧ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು, ವರ್ಕ್ ಆರ್ಡರ್ (ಕಾರ್ಯಾದೇಶ) ಕೂಡ ಆಗಿದೆ. ಮೊದಲ ಹಂತದಲ್ಲಿ ವಿವಿಧ ರಸ್ತೆಗಳಲ್ಲಿ ಒಟ್ಟು 8.5 ಕೀ.ಮಿ. ಪಥ ನಿರ್ಮಾಣಕ್ಕೆ ಮುಂದಿನ ವಾರದಲ್ಲಿ ಚಾಲನೆ ದೊರೆಯಲಿದೆ.

ಎಲ್ಲೆಲ್ಲಿ ಪಥ: ಜೆಎಲ್‌ಬಿ ರಸ್ತೆಯಲ್ಲಿ 1,268 ಮೀ. (ಎಂಎನ್ ಜಂಕ್ಷನ್‌ನಿಂದ ಅಶೋಕ ವೃತ್ತದವರೆಗೆ), ಸೀತಾ ವಿಲಾಸ ರಸ್ತೆಯಲ್ಲಿ 746 ಮೀ. (ಎಂಎನ್ ಜಂಕ್ಷನ್‌ನಿಂದ ಕುಕ್ಕರಹಳ್ಳಿ ಕೆರೆ ಗೇಟ್‌ವರೆಗೆ), ಬೋಗಾದಿ ರಸ್ತೆಯಲ್ಲಿ 1,366 ಮೀ. (ಕುಕ್ಕರಹಳ್ಳಿ ಕೆರೆ ಗೇಟ್‌ನಿಂದ ಮೈಸೂರು ವಿವಿ ಮುಖ್ಯದ್ವಾರದವರೆಗೆ), ವಿಶ್ವಮಾನವ ಜೋಡಿ ರಸ್ತೆಯಲ್ಲಿ 1,124 ಮೀ. (ವಿವಿ ಕ್ಯಾಂಪಸ್‌ನಿಂದ ನಿಜಲಿಂಗಪ್ಪ ವೃತ್ತದವರೆಗೆ), ವಿಶ್ವಮಾನವ ಜೋಡಿ ರಸ್ತೆಯಲ್ಲಿ 2,159 ಮೀ. (ನಿಜಲಿಂಗಪ್ಪ ವೃತ್ತದಿಂದ ರಿಂಗ್ ರಸ್ತೆವರೆಗೆ), ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ 1,080 ಮೀ. (ಕೌಟಿಲ್ಯ ವೃತ್ತದಿಂದ ಕನ್ನೇಗೌಡ ವೃತ್ತದವರೆಗೆ), ಚಾಮರಾಜ ಜೋಡಿ ರಸ್ತೆಯಲ್ಲಿ 388 ಮೀ. (ಏಕಲವ್ಯ ವೃತ್ತದಿಂದ ರಾಮಸ್ವಾಮಿ ವೃತ್ತದವರೆಗೆ), ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ 591 ಮೀ. (ಕನ್ನೇಗೌಡ ವೃತ್ತದಿಂದ ಅಶೋಕ ವೃತ್ತದವರೆಗೆ) ಸಿಂಥೆಟಿಕ್ ಪ್ರತ್ಯೇಕ ಸೈಕಲ್ ಪಥ ನಿರ್ಮಿಸಲಾಗುತ್ತಿದೆ.



ಹೊಸ ಸಾವಿರ ಸೈಕಲ್‌ಗಳು ಮತ್ತು 5 ವರ್ಷಗಳ ಅವಧಿಗೆ ಅವುಗಳ ನಿರ್ವಹಣೆ, ಕಾರ್ಯಾಚರಣೆಗೆ 4 ಕೋಟಿ ರೂ. ವೆಚ್ಚದಲ್ಲಿ ಗ್ರೀನ್ ಪೀಡಿಯಾ ಬೈಕ್ ಶೇರ್ ಪ್ರೈವೆಟ್ ಲಿಮಿಟೆಡ್ ಕಂಪನಿಗೆ ಟೆಂಡರ್ ಆಗಿದೆ. ಈ ಸಂಬಂಧ ಕಾರ್ಯಾದೇಶವಾಗಿ ಮೂರು ತಿಂಗಳು ಕಳೆದಿದ್ದು, ಸದರಿ ಕಂಪನಿಯವರು ಸೈಕಲ್‌ಗಳ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಜನವರಿ 26ರ ಗಣರಾಜ್ಯೋತ್ಸವದ ಒಳಗಾಗಿ ಸೈಕಲ್‌ಗಳು ಬರಲಿವೆ. ಈಗಿರುವ ಹಳೇ ಸೈಕಲ್‌ಗಳನ್ನು ಗ್ರೀನ್ ವ್ಹೀಲ್ ರೈಡ್ ಕಂಪನಿ ವಾಪಸ್ ತೆಗೆದುಕೊಂಡು ಟ್ರಿಣ್ ಟ್ರಿಣ್ ಸೇವಾವಧಿ ಪೂರ್ಣಗೊಳಿಸಲಿದೆ. ಮುಂದಿನ ವಾರದಲ್ಲಿ ಸೈಕಲ್ ಪಥ ನಿರ್ಮಾಣ ಕಾಮಗಾರಿಗೆ ಚಾಲನೆ ದೊರೆಯಲಿದೆ. **-ಜಿ.ಲಕ್ಷ್ಮೀಕಾಂತ್‌ರೆಡ್ಡಿ, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ**

ಮೈಸೂರು ರಂಗಾಯಣ ವಾರಾಂತ್ಯ ನಾಟಕದಲ್ಲಿ ಸಿದ್ದರಾಮಯ್ಯರ ಬಗ್ಗೆ ವ್ಯಂಗ್ಯ ಆರೋಪ; ಆಕ್ಷೇಪ

ಮೈಸೂರು, ಡಿ.31- ಪಾತ್ರವೊಂದರ ಮೂಲಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವ್ಯಂಗ್ಯ ಮಾಡಲಾಗಿದೆ ಎಂದು ಮೈಸೂರು ರಂಗಾಯಣದ ವಾರಾಂತ್ಯ ನಾಟಕ ಪ್ರದರ್ಶನಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಘಟನೆ ಶನಿವಾರ ನಡೆದಿದೆ.

ಜ್ಞಾನಪೀಠ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರ ರಚನೆಯ 'ಸಾಂಬಶಿವ ಪ್ರಹಸನ' ನಾಟಕ ಪ್ರದರ್ಶನದಲ್ಲಿ ಪಾತ್ರವೊಂದರ ಮೂಲಕ ಸಿದ್ದರಾಮಯ್ಯನವರನ್ನು ಟೀಕಿಸಿದ್ದಾರೆಂದು ಅವರ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭೂಮಿಗೀತ ರಂಗ ವೇದಿಕೆಯಲ್ಲಿ ಶನಿವಾರ ಸಂಜೆ ಕಾರ್ತಿಕ್ ಉಪಮನ್ಯು ಎಸ್ ನಿರ್ದೇಶನದಲ್ಲಿ ಪದ್ಮಶ್ರೀ ನಾಗರತ್ನಮ್ಮ ರಂಗ ಕಾರ್ಯಾಗಾರದ ಶಿಬಿರಾರ್ಥಿಗಳು 'ಸಾಂಬಶಿವ ಪ್ರಹಸನ' ನಾಟಕ ಅಭಿನಯಿಸುತ್ತಿದ್ದರು. ಈ ವೇಳೆ ವ್ಯಕ್ತಿಯೊಬ್ಬರು ವೇದಿಕೆ ಮೇಲೇರಿ ಸಿದ್ದರಾಮಯ್ಯನವರನ್ನು ವ್ಯಂಗ್ಯ ಮಾಡಿದ್ದೀರಿ, ಈ ಬಗ್ಗೆ ನಾಟಕ ನಿರ್ದೇಶಕರು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸಿದರು.

ನಂತರ ವಿಷಯ ತಿಳಿದು ಸಭಾಂಗಣದ ಹೊರಗೆ ಜಮಾಯಿಸಿದ್ದ ಸಿದ್ದರಾಮಯ್ಯನವರ ಅಭಿಮಾನಿಗಳು ನಾಟಕ ನಿರ್ದೇಶಕ ಕಾರ್ತಿಕ್ ಜೊತೆ ಮಾತಿಗಿಳಿದರು. ಡಾ.ಚಂದ್ರಶೇಖರ ಕಂಬಾರರ ನಾಟಕ ಕೃತಿಯಲ್ಲಿ ಸರ್ಕಾರವೊಂದರ ಭಾಗ್ಯಗಳ ಬಗ್ಗೆ ಉಲ್ಲೇಖಿಸಿದ್ದಾರಾ? ಆದರೆ ನೀವು ನಾಟಕದಲ್ಲಿ ಗೊರಕೆ ಹೊಡೆಯುವ ರಾಜ, ಭಾಗ್ಯಗಳನ್ನು ನೀಡಿ ಜನರನ್ನು ಸೋಮಾರಿ ಮಾಡಿದರು ಎಂದು ಸಿದ್ದರಾಮಯ್ಯನವರನ್ನು ಪರೋಕ್ಷವಾಗಿ ಅವಹೇಳನ ಮಾಡಿದ್ದೀರಿ. ಅವರ ಅಭಿಮಾನಿಯಾದ ನನಗೆ ಅತೀವ ಘಾಸಿಯಾಗಿದೆ. ಇದಕ್ಕೆ ಉತ್ತರ ಕೊಡಿ ಎಂದು ಪಟ್ಟು ಹಿಡಿದರು.

ಮೂಲ ನಾಟಕವನ್ನು ಸಂದರ್ಭಾನುಸಾರ ನಾಟಕ ರೂಪದಲ್ಲಿ ಬದಲಿಸಿಕೊಳ್ಳುವುದು ಸಹಜ. ಸರ್ಕಾರದ ಬಗ್ಗೆ ಮಾತ್ರವಲ್ಲ, ಮಾಧ್ಯಮ, ಕೊರೊನಾ ಇನ್ನಿತರ ಪ್ರಚಲಿತ ಸಂಗತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ವೈಯಕ್ತಿಕವಾಗಿ ಯಾರಿಗೂ ಅಪಮಾನಿಸುವ ಅಥವಾ ಯಾರ ಮನಸ್ಸಿಗೂ ಘಾಸಿ ಮಾಡುವ ಉದ್ದೇಶವಿಲ್ಲ ಎಂದು ನಾಟಕ ನಿರ್ದೇಶಕ ಕಾರ್ತಿಕ್ ಸಮಾಧಾನಪಡಿಸುವ ಪ್ರಯತ್ನ ಮಾಡಿದರು. ನಂತರ ಸ್ಥಳಕ್ಕೆ ಧಾವಿಸಿದ ಪೊಲೀಸರು, ಆಕ್ರೋಶಿತರನ್ನು ಸಮಾಧಾನಪಡಿಸಿ, ಪರಿಸ್ಥಿತಿ ತಿಳಿಗೊಳಿಸಿದರು.

ಈ ಸಂಬಂಧ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಮಣ್ಯ ಪ್ರತಿಕ್ರಿಯಿಸಿ, ಸಾಂಬಶಿವ ಪ್ರಹಸನ ನಾಟಕದಲ್ಲಿ ಪಾತ್ರವೊಂದರ ಮೂಲಕ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ನೀಡಿದ್ದ ಯೋಜನೆ, ಕಾರ್ಯಕ್ರಮಗಳನ್ನು ಟೀಕಿಸಲಾಗಿದೆ. ಈ ಬಗ್ಗೆ ನಿರ್ದೇಶಕರು ವಿಷಾಧ ವ್ಯಕ್ತಪಡಿಸಿದ್ದಾರಂತೆ. ಆದರೆ ರಂಗಾಯಣದ ಉಪನಿರ್ದೇಶಕರನ್ನು ಭೇಟಿ ಮಾಡಿ, ನಾಟಕದ ನಿರ್ದೇಶಕರು, ಪಾತ್ರದಾರಿಗಳ ಬಗ್ಗೆ ಮಾಹಿತಿ ಪಡೆದಿದ್ದು, ಪೊಲೀಸ್ ಠಾಣೆಗೆ ದೂರು ನೀಡಿ ಶಿಸ್ತು ಕ್ರಮಕ್ಕೆ ಆಗ್ರಹಿಸಲಾಗುವುದು ಎಂದು ತಿಳಿಸಿದ್ದಾರೆ.

ಜ.28ರಂದು ಕುರಿಮರಿಗಳ ಉಚಿತ ವಿತರಣೆ ಕಾರ್ಯಕ್ರಮ



ಮೈಸೂರು, ಡಿ.31 (ಪಿಎಂ)- ಎಸ್.ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗದ ವತಿಯಿಂದ 'ಕುರುಬರಿಂದ ಕುರುಬರಿಗಾಗಿ, ಉಳ್ಳವರಿಂದ ಅವಶ್ಯಕತೆ ಇರುವವರಿಗಾಗಿ' ಶೀರ್ಷಿಕೆಯಡಿ ಎರಡನೇ ಹಂತದ 'ಕುರಿಮರಿಗಳ ಉಚಿತ ವಿತರಣೆ' ಕಾರ್ಯಕ್ರಮವನ್ನು ಜ.28ರಂದು ಬೆಳಗ್ಗೆ 10.30ಕ್ಕೆ ಆರಾಧ್ಯ ಮಹಾಸಭಾದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಹಾಗೂ ಸಮುದಾಯದ ಮುಖಂಡ ಎಸ್.ಪ್ರಕಾಶ್ ಪ್ರಿಯದರ್ಶನ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಸಮುದಾಯದ ಆರ್ಥಿಕ ಹಿಂದುಳಿದವರಿಗೆ ಕುರಿಮರಿಗಳನ್ನು ವಿತರಿಸುವ ಎರಡನೇ ಹಂತದ ಕಾರ್ಯಕ್ರಮ ಇದಾಗಿದೆ. ಈ ಸಮಾಜಮುಖಿ ಕಾರ್ಯಕ್ಕೆ ಸಮಾಜದ ಹಾಗೂ ಬೇರೆ ಸಮಾಜದ ದಾನಿಗಳು ಕುರಿಮರಿಗಳನ್ನು ನೀಡಬಹುದು. ಉಚಿತವಾಗಿ ಕುರಿಮರಿಗಳನ್ನು ಪಡೆಯಲು ಜ.5ರಿಂದ 15ರವರೆಗೆ ಅರ್ಜಿಗಳನ್ನು ವಿತರಿಸಲಾಗುವುದು ಎಂದರು. ಭರ್ತಿ ಮಾಡಿದ ಅರ್ಜಿಗಳನ್ನು ಜ.16ರಿಂದ 20ರವರೆಗೆ ಸಲ್ಲಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 99166 15913, 96326 21561 ಸಂಪರ್ಕಿಸಬಹುದು ಎಂದರು. ಸಾನ್ವಿ ಕನ್ಸ್‌ಟ್ರಕ್ಷನ್ ಮಾಲೀಕ ಸುಂದರ್ ರಾಜ್, ದಿ ಬೆಸ್ಟ್ ಕಾರ್ ಮಾಲೀಕ ಆರ್.ಮಹೇಶ್, ಮುಖಂಡರಾದ ಮಹದೇವ್ ಕುರುಬರಹಳ್ಳಿ, ಎಂ.ದೀಪಕ್, ಪ್ರಮೋದ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಇಂದು ಕರ್ನಾಟಕ ಸೇನಾ ಪಡೆ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.31- ಕರ್ನಾಟಕ ಸೇನಾ ಪಡೆ ವತಿಯಿಂದ 2023ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಾಳೆ(ಜ.1) ಬೆಳಗ್ಗೆ 11.30ಕ್ಕೆ ನಡೆಯಲಿದ್ದು, ದೇವಾಲಯದ ಸಂಸ್ಥಾಪಕರಾದ ಡಾ.ಭಾಷ್ಯಂ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ರಾಮು, ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಸಂಸ್ಕೃತಿ ಪೋಷಕ ರಘುರಾಮ್ ಕೆ.ವಾಜಪೇಯಿ, ಉದ್ಯಮಿ ಎಂ.ಎನ್.ದೊರೆಸ್ವಾಮಿ, ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶೆಣೈ, ಲಯನ್ಸ್ ಕ್ಲಬ್ ಆಫ್ ಗೋಲ್ಡನ್ ಸಿಟಿ ಅಧ್ಯಕ್ಷ ಲಯನ್ ಸುರೇಶ್ ಟಿ. ಗೋಲ್ಡ್, ಅಂಬೇಡ್ಕರ್ ಫೆಲೋಶಿಫ್ ಪುರಸ್ಕೃತ ಡಾ.ಶಾಂತರಾಜೇ ಅರಸ್ ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜಸ್ ಲೋಕೇಶ್‌ಗೌಡ ತಿಳಿಸಿದ್ದಾರೆ.

ಏನೂ ತಿಳಿಯದೇ ಗೊಂದಲದಲ್ಲಿದ್ದೇವೆ

ಮೀಸಲಾತಿ ಬಗ್ಗೆ ಜಯಮೃತ್ಯುಂಜಯ ಸ್ವಾಮೀಜಿ ಅಸಮಾಧಾನ



ವಿಜಯಪುರ, ಡಿ.31- ಮೀಸಲಾತಿ ತುಪ್ಪವನ್ನು ಸರ್ಕಾರ ಮೂಗಿಗೆ ಸವರಿದ್ದರೇ ವಾಸನೆಯಾದರೂ ನೋಡಬಹುದಿತ್ತು. ಆದರೆ, ಸರ್ಕಾರ ತಲೆಗೆ ತುಪ್ಪ ಸುರಿದಿದೆ. ಹಾಗಾಗಿ ಏನೂ ತಿಳಿಯದೇ ಗೊಂದಲದಲ್ಲಿದ್ದೇವೆ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಡಿ.29ಕ್ಕೆ ಮೀಸಲಾತಿ ನೀಡಿದೆ. ಎಲ್ಲ ಲಿಂಗಾಯತರನ್ನು 2ಡಿಗೆ ಸೇರಿಸಿರುವುದು ಬಹಳ ಸಂತೋಷ. ನಮ್ಮ ಹೋರಾಟದಿಂದ ಎಲ್ಲ ಲಿಂಗಾಯತರಿಗೂ ಒಳ್ಳೆಯದಾಗಿದ್ದು, ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ. ನಿಜವಾದ ಹೋರಾಟ ಮಾಡಿದವರು ಪಂಚಮಸಾಲಿಗಳು. ಕಳೆದ 2 ವರ್ಷದಿಂದ ಮನೆ-ಮಠಗಳನ್ನು ಬಿಟ್ಟು ಹೋರಾಟ ಮಾಡಿದ್ದೇವೆ. ನಮ್ಮ ಪಾಲು ಎಷ್ಟು ಎಂದು ಸ್ಪಷ್ಟತೆ ಇಲ್ಲ. ನಾವು ದುಡಿದಿದ್ದಕ್ಕೆ ಸರ್ಕಾರ ಪ್ರತಿಫಲ ಕೊಡಲಿಲ್ಲ ಎಂದು ಹೇಳಿದರು. ಬೆಳಗಾವಿಯಲ್ಲಿ ಎರಡು ದಿನಗಳಲ್ಲಿ ರಾಜ್ಯ ಮಟ್ಟದ ಪಂಚಮಸಾಲಿ ಕಾರ್ಯಕಾರಣಿ ಸಭೆಯನ್ನು ಕರೆಯುತ್ತೇವೆ. ಈ ಮೀಸಲಾತಿ ಸ್ವೀಕರಿಸಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಅಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ ಎಂದರು.

ಹೃದಯಾಘಾತದಿಂದ ಬಿಎಸ್ಪಿ ಮುಖಂಡ ಪುಟ್ಟಸ್ವಾಮಿ ನಿಧನ



ಮೈಸೂರು,ಡಿ.31-ಮೈಸೂರಿನ ಗಾಂಧಿನಗರದ ನಿವಾಸಿ ಬಿಎಸ್ಪಿ ಮುಖಂಡ ಪುಟ್ಟಸ್ವಾಮಿ(48) ಅವರು ಶನಿವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಹಾಗೂ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಗಾಂಧಿ ನಗರದ ನಿವಾಸಿಗಳು, ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮಿಜಿ, ಕೊಳ್ಳೇಗಾಲ ಶಾಸಕ ಎನ್.ಮಹೇಶ್, ಮಾಜಿ ಮೇಯರ್ ಪುರುಷೋತ್ತಮ್ ಸೇರಿದಂತೆ ಹಲವು ಮುಖಂಡರು ಮೃತರ ಅಂತಿಮ ದರ್ಶನ ಪಡೆದು, ಶ್ರದ್ಧಾಂಜಲಿ ಸಲ್ಲಿಸಿದರು. ಭಾನುವಾರ(ಜ.1) ಬೆಳಗ್ಗೆ ಗಾಂಧಿನಗರದ ಮಹದೇವಪುರ ರಸ್ತೆಯಲ್ಲಿರುವ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಡಿ.31(ಪಿಎಂ)-ಜನ ಚೈತನ್ಯ ಫೌಂಡೇಷನ್ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಎಐಇ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿಯನ್ನು ಕಾಲೇಜಿಗೆ 6ನೇ ರ್‍ಯಾಂಕ್ ಪಡೆಯುವ ಮೂಲಕ ಪೂರ್ಣಗೊಳಿಸಿದ ಎಂ.ಸ್ನೇಹ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಕವಿಯತ್ರಿ ಡಾ.ಕೆ.ಎನ್.ಲಾವಣ್ಯ ಪ್ರಭಾ, ಇಂಗ್ಲಿಷ್ ಮಾಧ್ಯಮ ಅನಿವಾರ್ಯ ಎಂಬ ಮನೋಭಾವ ಇಂದು ಎಲ್ಲೆಲ್ಲೂ ಮನೆ ಮಾಡಿದ್ದು, ಇದು ಸರಿಯಲ್ಲ. ಆಧುನಿಕ ವಿಜ್ಞಾನಗಳ ಬೋಧನೆಯಲ್ಲಿ ಕೇವಲ ಇಂಗ್ಲಿಷ್‌ಗೆ ಆದ್ಯತೆ ನೀಡದೇ ಕನ್ನಡಕ್ಕೂ ಪ್ರಾಮುಖ್ಯತೆ ನೀಡಲು ಅವಕಾಶವಿದೆ. ಹಿಂದಿನ ತಲೆಮಾರಿನಂತೆ ಇಂದಿನ ಪೀಳಿಗೆ ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ತೋರುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಹೊರ ರಾಜ್ಯಗಳಿಂದ ಅನ್ಯಭಾಷಿಗರು ಇಲ್ಲಿಗೆ ಆಗಮಿಸುತ್ತಾರೆ. ಅಂತಹವರಲ್ಲಿ ಹಲವರು ಅಧಿಕಾರಿಗಳೂ ಇದ್ದಾರೆ. ಇವರಿಗೆ ಕನ್ನಡ ಕಲಿಕೆ ಕಡ್ಡಾಯ ಮಾಡಬೇಕು ಎಂದು ಹೇಳಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್, ಲೇಖಕ ಡಾ.ಅಮ್ಮಸಂದ್ರ ಸುರೇಶ್ ಮತ್ತಿತರರು ಹಾಜರಿದ್ದರು.

ದಸರಾ ವಸ್ತುಪ್ರದರ್ಶನಕ್ಕೆ ನಾಳೆ ತೆರೆ: ಫೆ.12ರವರೆಗೆ ಖಾಸಗಿ ಸಂಸ್ಥೆ ವತಿಯಿಂದ ಮೈಸೂರು ವಸ್ತುಪ್ರದರ್ಶನ



ಮೈಸೂರು, ಡಿ.31(ಎಸ್‌ಬಿಡಿ)- ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದ ಒಂದಷ್ಟು ಜಾಗವನ್ನು ಚಳಿಗಾಲದ ವಸ್ತು ಪ್ರದರ್ಶನ ಉದ್ದೇಶಕ್ಕಾಗಿ ಫನ್‌ವರ್ಲ್ಡ್ ಸಂಸ್ಥೆಗೆ 40 ದಿನ ಬಾಡಿಗೆಗೆ ನೀಡಲಾಗಿದೆ.

ದಸರಾ ವಸ್ತುಪ್ರದರ್ಶನ ಜ.2ಕ್ಕೆ ಮುಕ್ತಾಯವಾಗಲಿದ್ದು, ಜ.3ರಿಂದ ಫೆ.12ರವರೆಗೆ ಖಾಸಗಿ ಸಂಸ್ಥೆ ವತಿಯಿಂದ ಏರ್ಪಡಿಸಲಾಗುವ ಮೈಸೂರು ವಸ್ತು ಪ್ರದರ್ಶನ ಇರಲಿದೆ. ಆದರೆ ಸರ್ಕಾರದ ವಿವಿಧ ಇಲಾಖೆ, ನಿಗಮ ಮಂಡಳಿಗಳ ವತಿಯಿಂದ ನಿರ್ಮಿಸಿರುವ ಮಳಿಗೆಗಳನ್ನು ತೆರವು ಮಾಡಲಾಗುತ್ತದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಜ.1ಕ್ಕೆ ದಸರಾ ವಸ್ತು ಪ್ರದರ್ಶನ ಮುಕ್ತಾಯವಾಗಲಿದ್ದು, ಮರುದಿನ ಸ್ವಚ್ಛತಾ ಕಾರ್ಯಕ್ಕೆ ಅವಕಾಶ ನೀಡಲಾಗಿದೆ. ನಂತರ ಜ.3ರಿಂದ 40 ದಿನ ಅಂದರೆ ಫೆ.12ರವರೆಗೆ ಫನ್‌ವರ್ಲ್ಡ್‌ಗೆ ನೆಲ ಬಾಡಿಗೆ ನೀಡಲಾಗಿದೆ. 143 ಮಳಿಗೆಗಳು, ಚಾಮುಂಡೇಶ್ವರಿ ಬ್ಲಾಕ್ (ಫುಡ್ ಕೋರ್ಟ್)ನ ಮೂರು ಘಟಕ, ಅಮ್ಯೂಸ್‌ಮೆಂಟ್ ಪಾರ್ಕ್ ಹಾಗೂ ಪಾರ್ಕಿಂಗ್ ಏರಿಯಾ ಸೇರಿದಂತೆ ಒಟ್ಟು 36 ಲಕ್ಷ ರೂ.ಗೆ ಬಾಡಿಗೆ ನೀಡಲಾಗಿದೆ. ವಿದ್ಯುತ್, ಸ್ವಚ್ಛತೆ ಸೇರಿದಂತೆ ಸಂಪೂರ್ಣ ನಿರ್ವಹಣೆಯನ್ನು ಆ ಸಂಸ್ಥೆಯೇ ನಿರ್ವಹಿಸಲಿದೆ ಎಂದರು.

ಕಳೆದ ನವರಾತ್ರಿ ಮೊದಲ ದಿನವಾದ ಸೆಪ್ಟೆಂಬರ್ 26ರಂದು 90 ದಿನಗಳ ದಸರಾ ವಸ್ತು ಪ್ರದರ್ಶನ ಆರಂಭವಾಗಿತ್ತು. ನಿಗದಿಯಂತೆ ಪ್ರಸಕ್ತ ಡಿ.24ಕ್ಕೆ ಮುಕ್ತಾಯವಾಗಬೇಕಿತ್ತು. ಆದರೆ ಕೆಲ ದಿನಗಳ ಕಾಲ ನಿರಂತರ ಮಳೆ ಇದ್ದ ಕಾರಣಕ್ಕೆ ವ್ಯಾಪಾರಿಗಳು ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ನಿರ್ವಹಣಾ ವೆಚ್ಚ ಪಡೆದು 9 ದಿನ ವಿಸ್ತರಿಸಲಾಗಿತ್ತು ಎಂದರು. ದಸರಾ ವಸ್ತುಪ್ರದರ್ಶನ ನಾಳೆ(ಜ.1)ಕ್ಕೆ ಮುಕ್ತಾಯ ವಾಗಲಿದೆಯಾದರೂ ಮರುದಿನವೂ ವ್ಯಾಪಾರ ವಹಿವಾಟು ಇರಲಿದೆ. ಫೆ3ರಿಂದ ಮತ್ತೆ ದಸರಾ ವಸ್ತುಪ್ರದರ್ಶನ ಆರಂಭವಾಗಲಿರುವುದರಿಂದ ಸಾರ್ವಜನಿಕರು ಫೆ.12ರವರೆಗೂ ಭೇಟಿ ನೀಡಬಹುದು. ವಸ್ತು ಪ್ರದರ್ಶನಕ್ಕೆ ನಿಗದಿಪಡಿಸಿದ್ದಂತೆ ವಯಸ್ಕರಿಗೆ 30 ರೂ. ಹಾಗೂ ಮಕ್ಕಳಿಗೆ 20 ರೂ. ಟಿಕೆಟ್ ದರ ಇರಲಿದೆ.

ದುಬೈಗೆ ವಿಮಾನ ಟಿಕೆಟ್ ಬುಕ್ ಮಾಡುವುದಾಗಿ 1.17 ಲಕ್ಷ ವಂಚನೆ

ಮೈಸೂರು, ಡಿ.31–ದುಬೈಗೆ ವಿಮಾನ ಟಿಕೆಟ್ ಬುಕ್ ಮಾಡುವುದಾಗಿ ತಿಳಿಸಿ ಬೆಂಗಳೂರಿನ ಟ್ರಾವೆಲ್ ಏಜೆನ್ಸಿ 1.17 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಬನ್ನಿಮಂಟಪದಲ್ಲಿ ಮೀಟ್ ಹೌಸ್ ಎಂಬ ಹೆಸರಿನಲ್ಲಿ ಮಾಂಸದ ಗಡಿ ನಡೆಸುತ್ತಿರುವ ಅಮೀರ್ ಪಾಷಾ(29) ವಂಚನೆಗೊಳಗಾದವರಾಗಿದ್ದು, ಸುಮಾರು 7 ತಿಂಗಳ ಹಿಂದೆ ಇವರ ಅಂಗಡಿಗೆ ಬಂದಿದ್ದ ಅರ್ಜುನ್ ಎಂಬಾತ ತಾನು ಬೆಂಗಳೂರಿನಲ್ಲಿ ಬ್ಲೂ ಎಸ್ಕೇಪ್ಸ್ ವರ್ಲ್ಡ್ ಟೂಲ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಟ್ರಾವೆಲ್ ಏಜೆನ್ಸಿ ನಡೆಸುತ್ತಿರುವುದಾಗಿ ಪರಿಚಯ ಮಾಡಿಕೊಂಡಿದ್ದಲ್ಲದೆ ವಿದೇಶಕ್ಕೆ ಪ್ರಯಾಣಿಸಲು ಟಿಕೆಟ್ ಬುಕ್ ಮಾಡಿಕೊಡುವುದಾಗಿ ತಿಳಿಸಿದ್ದಾನೆ. ಅದನ್ನು ನಂಬಿದ ಅಮೀರ್ ಪಾಷಾ, ತಾನೂ ಸೇರಿದಂತೆ ಮೂವರು ದುಬೈಗೆ ತೆರಳಲು ಟಿಕೆಟ್ ಬುಕ್ ಮಾಡುವಂತೆ ಡಿ.9ರಂದು ಅರ್ಜುನ್ ತಿಳಿಸಿದ ಟ್ರಾವೆಲ್ ಏಜೆನ್ಸಿ ಹೆಸರಿನ ಬ್ಯಾಂಕ್ ಖಾತೆಗೆ 1.17 ಲಕ್ಷ ರೂ. ಜಮೆ ಮಾಡಿದ್ದಾರೆ. ಅವರಿಗೆ ವಿಮಾನದ ಟಿಕೆಟ್ ದೊರೆಯಲಿಲ್ಲ. ಅಲ್ಲದೇ ಅರ್ಜುನ್ ಸಂಪರ್ಕಕ್ಕೂ ಸಿಗುತ್ತಿಲ್ಲ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಎನ್.ಆರ್. ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಸಾಲ ವಸೂಲಾತಿ ಗುತ್ತಿಗೆ ಪಡೆದ ವ್ಯಕ್ತಿಯಿಂದ ಖಾಸಗಿ ಬ್ಯಾಂಕ್‌ಗೆ 10.13 ಲಕ್ಷ ರೂ. ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಡಿ.31–ಖಾಸಗಿ ಬ್ಯಾಂಕ್‌ನ ಸಾಲ ವಸೂಲಾತಿ ಗುತ್ತಿಗೆ ಪಡೆದಿದ್ದ ವ್ಯಕ್ತಿ ಬ್ಯಾಂಕ್‌ಗೆ 10.13 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ರಾಜೇಂದ್ರನಗರ, ಕೆಸರೆ ನಿವಾಸಿ ಶ್ರೀನಿವಾಸಮೂರ್ತಿ(39) ಆರೋಪಕ್ಕೆ ಒಳಗಾದವರಾಗಿದ್ದು, ಆಕ್ಸಿಸ್ ಬ್ಯಾಂಕ್ ಕುವೆಂಪುನಗರ ಶಾಖೆಯ ಸಾಲ ವಸೂಲಾತಿ ಮಾಡುವ ಗುತ್ತಿಗೆಯನ್ನು ಈತನಿಗೆ ಬೆಂಗಳೂರಿನ ಕೋರಮಂಗಲದಲ್ಲಿರುವ ಟೀಮ್ ಲೀಸ್ ಸರ್ವೀಸಸ್ ಲಿಮಿಟೆಡ್ ಸಂಸ್ಥೆ ನೀಡಿತ್ತು. 2019ರ ಏ.1 ರಿಂದ ಸಾಲ ವಸೂಲಾತಿಯಲ್ಲಿ ತೊಡಗಿದ್ದ ಈತ, ಗ್ರಾಹಕರಿಂದ ಹಣ ವಸೂಲಿ ಮಾಡಿ ಅವರಿಗೆ ನಕಲಿ ಸಹಿಯೊಂದಿಗೆ ನಕಲಿ ಎನ್‌ಓಸಿ ಕೊಡುವ ಮೂಲಕ ಬ್ಯಾಂಕ್‌ಗೆ 10,13,094 ರೂ. ವಂಚಿಸಿದ್ದಾನೆ ಎಂದು ಟೀಮ್ ಲೀಸ್ ಸರ್ವೀಸಸ್ ಲಿಮಿಟೆಡ್‌ನ ಎಕ್ಸಿಕ್ಯೂಟಿವ್ ವೆಂಕಟಕೃಷ್ಣ ಸಂದೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಹುಲ್ಲಹಳ್ಳಿ, ಡಿ.31–ಮಹಿಳಾ ಪೊಲೀಸ್ ಪೇದೆಯ ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಹುಲ್ಲಹಳ್ಳಿ ಗ್ರಾಮದಿಂದ ವರದಿಯಾಗಿದೆ.

ಹುಣಸೂರು ಪಟ್ಟಣ ಠಾಣೆಯ ಪೊಲೀಸ್ ಪೇದೆ ಹೇಮಾವತಿ(26) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಹುಣಸೂರಿನ ಪೊಲೀಸ್ ವಸತಿ ಗೃಹದಲ್ಲಿ ತಾಯಿಯೊಂದಿಗೆ ವಾಸವಿದ್ದಾರೆ. ಹುಲ್ಲಹಳ್ಳಿಯಲ್ಲಿರುವ ಅವರ ಮನೆಗೆ ಆಗಿಂದಾಗ್ಗೆ ಬಂದು–ಹೋಗುತ್ತಾರೆ. ಡಿ.3ರಂದು ಹುಲ್ಲಹಳ್ಳಿ ಮನೆ ಬೀಗ ಹಾಕಿಕೊಂಡು ಅವರು ಹುಣಸೂರಿಗೆ ತೆರಳಿದ್ದು, ಡಿ.28ರಂದು ಸಂಜೆ ಹುಲ್ಲಹಳ್ಳಿಯಲ್ಲಿ ಇರುವ ಬಾಡಿಗೆ ನೀಡಿರುವ ಮನೆಯವರು ಕರೆ ಮಾಡಿ ತಿಳಿಸಿದಾಗ ಕಳವು ನಡೆದಿರುವುದು ಗೊತ್ತಾಗಿದೆ. ತಕ್ಷಣವೇ ಅವರು ಮನೆಗೆ ಬಂದು ನೋಡಿದಾಗ ಅವರ ಮನೆ ಬೀಗ ಮುರಿದು ಬೀರುವಿನಲ್ಲಿದ್ದ 17 ಗ್ರಾಂ ಚಿನ್ನಾಭರಣ, 500 ಗ್ರಾಂ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ತಿಳಿದು ಬಂದಿದೆ. ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಿಚಿತ ಯುವಕನ ಶವ ಪತ್ತೆ

ಮೈಸೂರು, ಡಿ.31–ಮೈಸೂರು ತಾಲೂಕು ತಳೂರು ಗ್ರಾಮದ ಬಳಿ ವರುಣಾ ನಾಲೆಯಲ್ಲಿ ಅಪರಿಚಿತ ಯುವಕನ ಶವ ಪತ್ತೆಯಾಗಿದೆ. ಸುಮಾರು 25 ರಿಂದ 30 ವರ್ಷ ವಯಸ್ಸಿನ ಈ ಯುವಕನ ಬಗ್ಗೆ ತಿಳಿದಿರುವವರು ಅಥವಾ ವಾರಸುದಾರರು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ 0821–2444944 ಅಥವಾ ಜಿಲ್ಲಾ ಕಂಟ್ರೋಲ್ ರೂಂ ಸಂಖ್ಯೆ 0821–2444800 ಅನ್ನು ಸಂಪರ್ಕಿಸುವಂತೆ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜಯರಾಂ ಕೋರಿದ್ದಾರೆ.

ಸ್ನೇಹಿತನ ಮನೆ ಮುಂದೆ ನಿಲ್ಲಿಸಿದ್ದ ಸ್ಕೂಟರ್ ಕಳವು

ಮೈಸೂರು,ಡಿ.31–ಸ್ನೇಹಿತನ ಮನೆ ಮುಂದೆ ನಿಲ್ಲಿಸಿದ್ದ ಬೈಕ್ ಕಳುವಾಗಿರುವ ಘಟನೆ ಮೈಸೂರಿನ ಲಕ್ಷ್ಮೀಕಾಂತ ನಗರದಲ್ಲಿ ನಡೆದಿದೆ. ಮೈಸೂರಿನ ಜಾಕಿ ಕ್ವಾರ್ಟ್ರಸ್‌ನಲ್ಲಿ ವಾಸವಿರುವ ಪೊಲೀಸ್ ಅಧಿಕಾರಿ ಖಾಜಾ ಭಾಷಾ ಜಮಾದಾರ್(23) ಎಂಬುವರು ಲಕ್ಷ್ಮೀಕಾಂತನಗರದ ಪ್ರಶಾಂತ ಗಣಪತಿ ಬಳಿ ಇರುವ ತಮ್ಮ ಸ್ನೇಹಿತನ ಮನೆ ಮುಂದೆ ಡಿ.26ರಂದು ರಾತ್ರಿ ಹೀರೋ ಎಕ್ಸ್ ಪ್ಲಸ್ ಬೈಕ್ (ಕೆಎ 55 ಇಸಿ 0613) ಅನ್ನು ನಿಲ್ಲಿಸಿದ್ದು, ಮರುದಿನ ಬೆಳಗ್ಗೆ ನೋಡಿದಾಗ ಅವರ ಬೈಕ್ ಕಳುವಾಗಿರುವುದು ತಿಳಿದು ಬಂದಿದೆ. ಈ ಸಂಬಂಧ ಡಿ.28ರಂದು ರಾತ್ರಿ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹೆಬ್ಬಾಳ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪೆಟ್ರೋಲ್ ಬಂಕ್ ಮ್ಯಾನೇಜರ್‌ಯಿಂದ ಮಾಲೀಕರಿಗೆ 1.71 ಕೋಟಿ ವಂಚನೆ

ಸರಗೂರು, ಡಿ.31–ಪೆಟ್ರೋಲ್ ಬಂಕ್ ಮ್ಯಾನೇಜರ್, ತನ್ನ ಮಾಲೀಕನಿಗೆ 1.71 ಕೋಟಿ ರೂ ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ರೂಪಾ ನಗರ ನಿವಾಸಿ ಉಮಾ ವಿಜಯ ಕುಮಾರ್ (42) ಎಂಬುವರು ಸರಗೂರಿನಲ್ಲಿ ಸರ್ವೋ ವಿಜಯ್ ಫ್ಯೂಯಲ್ ಸ್ಟೇಷನ್ ಎಂಬ ಹೆಸರಿನಲ್ಲಿ ಪೆಟ್ರೋಲ್ ಬಂಕ್ ಹೊಂದಿದ್ದಾರೆ. ಈ ಬಂಕ್‌ಗೆ ಮೈಸೂರಿನ ಬೆಮೆಲ್ ಲೇಔಟ್ ನಿವಾಸಿ ಆರ್.ಕಾರ್ತಿಕ್ (35) ಎಂಬುವರನ್ನು ಮ್ಯಾನೇಜರ್ ಆಗಿ 2018ರ ಸೆಪ್ಟೆಂಬರ್ 7ರಂದು ನಿಯೋಜಿಸಿದ್ದಾರೆ. ಕಾರ್ತಿಕ್ 2020ರ ಮಾರ್ಚ್ ನಿಂದ 2022ರ ಏಪ್ರಿಲ್‌ವರೆಗೆ 1,71,34,120 ರೂ. ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಉಮಾ ವಿಜಯಕುಮಾರ್ ನೀಡಿದ್ದ ದೂರನ್ನು ದಾಖಲಿಸಿಕೊಂಡಿರುವ ಸರಗೂರು ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೈಸೂರು ಸುತ್ತಮುತ್ತ ಭಯ ಮೂಡಿಸಿದ್ದ ಸಲಗ ಸೆರೆ

- ತಿಂಗಳ ಹಿಂದೆ ಜಯಪುರದಲ್ಲಿ ಪ್ರತ್ಯಕ್ಷವಾಗಿತ್ತು
- ಕೆ.ಆರ್.ನಗರ, ಹುಣಸೂರು ಬಳಿಯೂ ಓಡಾಡಿತ್ತು
- ಅರಬ್ಬಿತಿಟ್ಟಲ್ಲಿ ಬೀಡು ಬಿಟ್ಟಿದ್ದ ಆನೆ ಸುರಕ್ಷಿತ ಸೆರೆ
- 24 ಗಂಟೆಯಲ್ಲೇ ಸೆರೆಯಾದ ಎರಡನೇ ಆನೆ



ಬಿಳಿಕೆರೆ ಸಮೀಪದ ಅರಬ್ಬಿತಿಟ್ಟು ಪ್ರದೇಶದಲ್ಲಿ ಸೆರೆ ಹಿಡಿದ ಕಾಡಾನೆ.

ಇನ್ನೊಂದು ಆನೆ ಸೆರೆ ಹಿಡಿಯುತ್ತೇವೆ

ಅರಬ್ಬಿತಿಟ್ಟಲ್ಲಿರುವ ಎರಡು ಸಲಗಗಳಲ್ಲಿ ಒಂದನ್ನು ಸುರಕ್ಷಿತವಾಗಿ ಸೆರೆ ಹಿಡಿದಿದ್ದೇವೆ. ಕತ್ತಲಾಗಿದ್ದರಿಂದ ಮತ್ತೊಂದು ಆನೆಯನ್ನು ಸೆರೆ ಹಿಡಿಯಲು ಸಾಧ್ಯವಾಗಲಿಲ್ಲ. ಭಾನುವಾರ ಕಾರ್ಯಾಚರಣೆ ಮುಂದುವರೆಸಿ, ಮತ್ತೊಂದು ಆನೆಯನ್ನು ಸಹ ಸೆರೆ ಹಿಡಿಯಲಾಗುತ್ತದೆ. –ಪಿ.ಎ.ಸೀಮಾ, ಡಿಸಿಎಫ್

ದತ್ತಾರಣ್ಯದಲ್ಲಿ ಆನೆ ಬಿಡುಗಡೆ

ಸೆರೆ ಹಿಡಿದ ಆನೆ ಅಂದಾಜು 30 ವರ್ಷದ್ದಾಗಿದೆ. ಹಾಗಾಗಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸದೇ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ದಟ್ಟಾರಣ್ಯದಲ್ಲಿ ಬಿಡುಗಡೆ ಮಾಡಲಾಗಿದೆ. ಇನ್ನೊಂದು ಆನೆಯನ್ನು ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ, ಅರಣ್ಯದಲ್ಲಿ ಬಿಡುಗಡೆ ಮಾಡಲಾಗುತ್ತದೆ. ಬಳಿಕ ಆ ಆನೆಯ ಚಲನವಲದ ಮೇಲೆ ನಿಗಾ ಇಡಲಾಗುತ್ತದೆ.
– ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ

ಮೈಸೂರು,ಡಿ.31(ಎಂಟಿವೈ)– ಕಳೆದ ಒಂದೂವರೆ ತಿಂಗಳಿಂದ ಮೈಸೂರು ಸುತ್ತ ಮತ್ತ ಓಡಾಡುತ್ತ ಆತಂಕ ಮೂಡಿಸಿದ್ದ ಎರಡು ಸಲಗಗಳಲ್ಲಿ ಒಂದು ಆನೆಯನ್ನು ಅರಣ್ಯ ಸಿಬ್ಬಂದಿ ಇಂದು ಸುರಕ್ಷಿತವಾಗಿ ಸೆರೆ ಹಿಡಿದು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬಿಡುಗಡೆ ಮಾಡಿದ್ದಾರೆ.

ಮೈಸೂರು ತಾಲೂಕಿನ ಜಯಪುರ, ಶೀಳನಕೆರೆ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕಾಣಿಸಿಕೊಂಡು ರೈತರ ಬೆಳೆ ಹಾನಿ ಮಾಡಿದ್ದ ಎರಡು ಸಲಗವನ್ನು ಅರಣ್ಯಕ್ಕೆ ಅಟ್ಟಲು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿತ್ತು. ಆದರೆ, ಆ ಆನೆಗಳು ಅರಣ್ಯ ಸಿಬ್ಬಂದಿ ಕಣ್ತಪ್ಪಿಸಿ ಹುಣಸೂರು ವಿಭಾಗದ ಅರಬ್ಬಿತಿಟ್ಟು ಅರಣ್ಯ ಹೊಕ್ಕಿದ್ದವು. ಆರ್‌ಎಂಪಿ ಪ್ಲಾಂಟ್ ಸೇರಿದಂತೆ ಸುತ್ತಮುತ್ತಲಿನ ಕಾರ್ಖಾನೆಗಳು, ರೈತರು ಜಮೀನಿಗೆ ಹಾಕಿದ್ದ ಬೇಲಿಯನ್ನು ಧ್ವಂಸ ಮಾಡಿದ್ದವು.

ಸ್ಥಳೀಯರಿಗೆ ಕಾಡಾನೆಗಳ ಉಪಟಳ ಜಾಸ್ತಿಯಾದ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳು ಅರಬ್ಬಿತಿಟ್ಟಲ್ಲಿ ಬೀಡು ಬಿಟ್ಟಿದ್ದ ಎರಡು ಸಲಗ ಸೆರೆ ಹಿಡಿದು, ಕಾಡಿಗೆ ಬಿಡಲು ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಶುಕ್ರವಾರ(ಡಿ.30) ಅರಬ್ಬಿತಿಟ್ಟಲ್ಲಿದ್ದ ಕಾಡಾನೆಗಳ ಸೆರೆ ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಸಮೀಪದ ಚಿಕ್ಕ ಬೀಚನಹಳ್ಳಿಯಲ್ಲಿ ಒಂಟಿ ಸಲಗನ ದಾಳಿಗೆ ಮಹಿಳೆ ಬಲಿಯಾಗಿದ್ದರು. ಕೂಡಲೇ ಒಂಟಿ ಸಲಗನ ಸೆರೆಗೆ ಕಾರ್ಯಾಚರಣೆ ನಡೆಸಿ, ಯಶಸ್ವಿಯಾಗಿದ್ದರು. ಇಂದು ಬೆಳಗ್ಗೆ ಅರಬ್ಬಿತಿಟ್ಟಲ್ಲಿ ಕಾರ್ಯಾಚರಣೆ ಆರಂಭಿಸಿದ ಅರಣ್ಯ ಸಿಬ್ಬಂದಿ ಸಂಜೆ 4 ಗಂಟೆಯಲ್ಲಿ ಒಂಟಿ ಸಲಗನಿಗೆ ಅರವಳಿಕೆ ಮದ್ದು ಡಾಟ್ ಮಾಡಿದರು. ಸಂಜೆ 5.30ಕ್ಕೆ ಆನೆ ನಿದ್ರೆಗೆ ಜಾರಿದ ಬಳಿಕ ಕೂಂಬಿಂಗ್ ಸ್ಪೆಷಲಿಸ್ಟ್ ಅಭಿಮನ್ಯು ನೇತೃತ್ವದಲ್ಲಿ ದಸರಾ ಆನೆಗಳಾದ ಭೀಮಾ, ಮಹೇಂದ್ರ, ಪ್ರಶಾಂತ್ ಹಾಗೂ ಗಣೇಶ ಸಾಕಾನೆಗಳಿಂದ ಸೆರೆ ಹಿಡಿದಿದ್ದ 30 ವರ್ಷದ ಸಲಗನನ್ನು ಅರಣ್ಯ ಪ್ರದೇಶದಿಂದ ಹೊರಗೆ ಎಳೆದು ತಂದು ಲಾರಿಯಲ್ಲಿ ತುಂಬಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಕೊಂಡೊಯ್ಯಲಾಯಿತು. ಈ ಸಂದರ್ಭದಲ್ಲಿ ಸಿಎಫ್ ಡಾ.ಮಾಲತಿ ಪ್ರಿಯಾ, ಹುಣಸೂರು ವಿಭಾಗದ ಡಿಸಿಎಫ್ ಹಾಗೂ ಎಲಿಫೆಂಟ್ ಟಾಸ್ಕ್‌ಫೋರ್ಸ್ ಉಸ್ತುವಾರಿ ಪಿ.ಎ.ಸೀಮಾ ಹಾಗೂ ಎಸಿಎಫ್‌ಗಳು, ಆರ್‌ಎಫ್, ಡಿಆರ್‌ಎಫ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಯಶಸ್ವಿನಿ ನೋಂದಣಿ ಅವಧಿ ವಿಸ್ತರಣೆ ಮನವಿ



ಮೈಸೂರು,ಡಿ.31(ಎಂಟಿವೈ)– ಯಶಸ್ವಿನಿ ಯೋಜನೆ ನೋಂದಣಿ ಅವಧಿಯನ್ನು ಒಂದು ತಿಂಗಳು ವಿಸ್ತರಿಸುವಂತೆ ಕರ್ನಾಟಕ ಸೇನಾ ಪಡೆಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ಮನವಿ ಸಲ್ಲಿಸಿದರು.

ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಿಕೊಳ್ಳಲು ನೀಡಿರುವ ಕಾಲಾವಕಾಶ ಇಂದಿಗೆ ಕೊನೆಗೊಳ್ಳಲಿದೆ. ಕಡಿಮೆ ಅವಧಿಯಲ್ಲಿ ಜನರು ಹೆಸರು ನೋಂದಣಿ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಜ.31ರವರೆಗೆ ಯಶಸ್ವಿನಿ ಯೋಜನೆಗೆ ಹೆಸರು ನೋಂದಯಿಸಲು ಕಾಲಾವಕಾಶ ವಿಸ್ತರಿಸುವಂತೆ ಮನವಿ ಮಾಡಿದರು. ಇದರಿಂದ ಬಡ ಕುಟುಂಬದ ಜನರು, ರೈತರು, ಖಾಸಗಿ ಸಂಸ್ಥೆಗಳ ನೌಕರರಿಗೆ ನೆರವಾಗಲಿದೆ. ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್ ಕಡ್ಡಾಯಗೊಳಿಸಲಾಗಿದ್ದು, ಕಾರ್ಡ್ ಪಡೆಯಲು ಆನ್‌ಲೈನ್‌ನಲ್ಲಿ ನೋಂದಣಿ ಮಾಡಲು ಜ.1ರಿಂದ ಜ.12ರವರೆಗೆ ಅವಕಾಶ ನೀಡಲಾಗಿದೆ. ಆದರೆ ರೇಷನ್ ಕಾರ್ಡ್ ಪಡೆಯಲು ಅರ್ಜಿ ಸಲ್ಲಿಸಿರುವಾಗಲೇ ಯಶಸ್ವಿನಿ ಕಾರ್ಡ್‌ಗೆ ನೋಂದಣಿ ದಿನಾಂಕ ಕೊನೆಗೊಳಿಸಿರುವುದು ಖಂಡನೀಯ. ಈ ಹಿನ್ನೆಲೆಯಲ್ಲಿ ಜ.31ರವರೆಗೆ ಅವಧಿ ವಿಸ್ತರಿಸಬೇಕು. ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಯಶಸ್ವಿನಿ ಯೋಜನೆಯ ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಮುಖಂಡರಾದ ವೈ.ಕೆ.ನಾಗರಾಜ್, ಸಿ.ಹೆಚ್.ಕೃಷ್ಣಯ್ಯ, ಪ್ರಭುಶಂಕರ, ಎಳನೀರು ರಾಮಣ್ಣ, ಸುಬ್ಬೇಗೌಡ, ದರ್ಶನ್‌ಗೌಡ, ಪ್ರಭಾಕರ, ರವಿ ನಾಯಕ, ಕೃಷ್ಣಮೂರ್ತಿ ಇದ್ದರು.

ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆ



ಮೈಸೂರು, ಡಿ.31– ಮೈಸೂರಿನ ಟೆರೇಶಿಯನ್ ಕಾಲೇಜಿನ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ, 4ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ವಿಭಾಗದ ಎಸ್. ಶರಣ್ಯ ನವದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದಾರೆ. ಇವರು ರಾಘವೇಂದ್ರನಗರ ನಿವಾಸಿ, ಲಷ್ಕರ್ ಪೊಲೀಸ್ ಠಾಣೆ ಸಿಬ್ಬಂದಿ ವಿ. ಶ್ರೀನಿವಾಸ್ ಹಾಗೂ ಅನಿತಾ ದಂಪತಿ ಪುತ್ರಿ.



ಮೈಸೂರು ನಗರಪಾಲಿಕೆ 44ನೇ ವಾರ್ಡ್ ಕಾರ್ಪೋರೇಟರ್ ಸವಿತಾ ಸುರೇಶ್ ಹೊರತಂದಿರುವ ನೂತನ ವರ್ಷ 2023ರ ಕ್ಯಾಲೆಂಡರ್ ಅವರನ್ನು ಬೋಗಾದಿ ಎರಡನೇ ಹಂತದ ಗಣಪತಿ ದೇವಸ್ಥಾನದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಬಿಡುಗಡೆ ಮಾಡಿದರು. ಚಿತ್ರದಲ್ಲಿ ಕಾರ್ಪೋರೇಟರ್ ಸವಿತಾ ಸುರೇಶ, ಮಾಜಿ ಮೇಯರ್ ಆರ್.ಲಿಂಗಪ್ಪ, ವಾರ್ಡ್ ಮುಖಂಡರಾದ ಪುಟ್ಟಸ್ವಾಮಿಗೌಡ, ಲಿಂಗಣ್ಣ, ಕುಮಾರ್, ಶಶಿಧರ್, ಪ್ರಸಾದ್, ಮಂಜು, ಕೃಷ್ಣ, ಲೋಕೇಶ್, ಬಸವರಾಜು, ಸುರೇಶ್ ಇನ್ನಿತರರಿದ್ದಾರೆ.

ಕಾಂಗ್ರೆಸ್ ತುಕ್ಡೆ ತುಕ್ಡೆ ಗ್ಯಾಂಗ್ ಜೊತೆ ಹೊಂದಾಣಿಕೆ ಮಾಡಿಕೊಂಡಿದೆ

ಕೇಂದ್ರ ಗೃಹ ಸಚಿವ ಅಮಿತ್ ಷಾ ವಾಗ್ದಾಳಿ




ಬೆಂಗಳೂರು, ಡಿ.31– ಕಾಂಗ್ರೆಸ್ ತುಕ್ಡೆ ತುಕ್ಡೆ ಗ್ಯಾಂಗ್ ಜೊತೆ ಹೊಂದಾಣಿಕೆ ಮಾಡಿಕೊಂಡಿದೆ ಎಂದು ಕಾಂಗ್ರೆಸ್ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಿಡಿಕಾರಿದರು.

ಇಂದಿಲ್ಲಿ ಸಮಾವೇಶದಲ್ಲಿ ಮಾತನಾಡಿದ ಅವರು, ಜೆಡಿಎಸ್, ಕಾಂಗ್ರೆಸ್ ಚುನಾವಣೆ ಹತ್ತಿರ ಬರುತ್ತಿದ್ದಂತೆ ಒಟ್ಟಿಗೆ ಕೂರುತ್ತಾರೆ. ಅವರ ಆಡಳಿತ ನೋಡಿದ್ದೀರಿ. ಯಡಿಯೂರಪ್ಪ ಮತ್ತು ಬೊಮ್ಮಾಯಿ ಯಶಸ್ವಿಯಾಗಿ ಸರ್ಕಾರ ನಡೆಸಿದ್ದಾರೆ. ದಕ್ಷಿಣದ ಬಿಜೆಪಿ ಎಂಟ್ರಿ ಗೇಟ್ ಕರ್ನಾಟಕದಲ್ಲಿ ಆಗಿದೆ. ದಕ್ಷಿಣದಲ್ಲಿ ಬಿಜೆಪಿಯನ್ನು ಬಲಿಷ್ಠ ಮಾಡಬೇಕಿದೆ. ಇದಕ್ಕಾಗಿ ಬೆಂಗಳೂರಲ್ಲಿ 20ಕ್ಕೂ ಹೆಚ್ಚು ಸೀಟ್ ಗೆಲ್ಲಬೇಕು. ಆ ಮೂಲಕ ಬಹುಮತ ದೊಂದಿಗೆ ಬಿಜೆಪಿ ಸರ್ಕಾರ ರಚಿಸಬೇಕು ಎಂದು ಮನವಿ ಮಾಡಿದರು.

ಮಂಡ್ಯದಲ್ಲಿ ನಿನ್ನೆ ನಡೆದ ರ್‍ಯಾಲಿ ಅದ್ಭುತವಾಗಿ ಇತ್ತು. ಇದಕ್ಕಾಗಿ ನಾನು ಕಟೀಲ್ ಅವರನ್ನು ಅಭಿನಂದಿಸುತ್ತೇನೆ. 5 ರಾಜ್ಯಗಳಲ್ಲಿ ಬಿಜೆಪಿ ಪೂರ್ಣ ಬಹುಮತ ಪಡೆದಿದೆ. ಗುಜರಾತ್‌ನಲ್ಲಿ ಮೋದಿ ಎಲ್ಲಾ ದಾಖಲೆ ಪುಡಿ ಮಾಡಿದ್ದಾರೆ. ಕಾಂಗ್ರೆಸ್‌ಗೆ ವಿಪಕ್ಷ ಸ್ಥಾನ ಕೂಡ ಸಿಗಲಿಲ್ಲ. ಗುಜರಾತ್, ಉತ್ತರಖಂಡ, ಮಣಿಪುರ್, ಗೋವಾದಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಪಡೆದಿದೆ. ಕಾಂಗ್ರೆಸ್ ಹೀನಾಯವಾಗಿ ಸೋತಿದೆ ಎಂದು ಅಮಿತ್ ಷಾ ಟೀಕಿಸಿದರು.

ಮೋದಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡುತ್ತಿದ್ದಾರೆ. ಆದರೆ ಇಲ್ಲಿ ಟಿಪ್ಪು ಸುಲ್ತಾನ್‌ನನ್ನು ಹೀರೋ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮೊದಲ ಬಾರಿಗೆ ಬಹಿರಂಗವಾಗಿ ದೇವೇಗೌಡರ ಮೇಲೆ ವಾಗ್ದಾಳಿ ನಡೆಸಿದ ಅವರು, ನೀವು ಪ್ರಧಾನಿ ಆಗಿದ್ದೀರಿ, ಮುಖ್ಯಮಂತ್ರಿಯೂ ಆಗಿದ್ದವರು, ಆದರೆ ರಾಜ್ಯಕ್ಕಾಗಿ ನೀವು ಏನೂ ಮಾಡಿಲ್ಲ. ಆದರೆ ನಾವು ಏನು ಮಾಡಿದ್ದೇವೆ ಎಂದು ನಮ್ಮ ಯುವಮೋರ್ಚಾ ಕಾರ್ಯಕರ್ತರು ನಿಮಗೆ ಹೇಳ್ತಾರೆ ಎಂದು ಚಾಟಿ ಬೀಸಿದರು. ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಹೆಚ್‌ಡಿಕೆ ಹೆಸರು ಪ್ರಸ್ತಾಪಿಸಿ ಕಿಡಿಕಾರಿದ ಅವರು, ಇವರಿಂದ, ಪಿಎಫ್‌ಐನಿಂದ ದೇಶ ರಕ್ಷಣೆ ಸಾಧ್ಯವೇ. ಇವರು ದೇಶವನ್ನು ಸುರಕ್ಷಿತವಾಗಿ ಇಡುತ್ತಾರೆ ಎಂಬ ನಿರೀಕ್ಷೆ ಸಾಧ್ಯವೇ. ಇವರು ವೋಟ್ ಬ್ಯಾಂಕ್‌ಗೆ ಹೆದರುತ್ತಿದ್ದಾರೆ. ಆದರೆ ಬಿಜೆಪಿಗೆ ಆ ವೋಟ್ ಬ್ಯಾಂಕ್ ಭಯ ಇಲ್ಲ. ದೇಶದ ಸುರಕ್ಷತೆಯೇ ನಮ್ಮ ಗುರಿ ಎಂದು ತಿಳಿಸಿದರು. ಕಾಂಗ್ರೆಸ್ ಹಾಗೂ ಜೆಡಿಎಸ್ ಒಂದೇ ನಾಣ್ಯದ ಎರಡು ಮುಖಗಳು. ಯಾರಿಗೂ ಬಹುಮತ ಬರದಿದ್ದಲ್ಲಿ ಕುಮಾರಸ್ವಾಮಿ ಕಾಂಗ್ರೆಸ್ ತೊಡೆ ಮೇಲೆ ಹೋಗಿ ಕೂರುತ್ತಾರೆ. ಹಾಗಾಗಿ ಒಂದು ಬಾರಿ ಬಿಜೆಪಿಗೆ ಸಂಪೂರ್ಣ ಬಹುಮತದ ಅಧಿಕಾರ ನೀಡಿ, ಕರ್ನಾಟಕವನ್ನು ಕುಟುಂಬ ರಾಜಕಾರಣ, ಭ್ರಷ್ಟಾಚಾರ, ಜಾತಿವಾದದಿಂದ ಮುಕ್ತ ಮಾಡಲಿದ್ದೇವೆ ಎಂದು ಅಮಿತ್ ಷಾ ಭರವಸೆ ನೀಡಿದರು.



ವಾರಭವಿಷ್ಯ

1.01.2023 ರಿಂದ 7.01.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :– ರವಿ–ಧನುಸ್ಸು, ಚಂದ್ರ–ಮೇಷ, ವೃಷಭ, ಮಿಥುನ, ಕುಜ–ವೃಷಭ, ಬುಧ–ಧನುಸ್ಸು, ಗುರು–ಮೀನ, ಶುಕ್ರ–ಮಕರ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಅನ್ಯ ಮನಸ್ಕತೆ ಹಾಗೂ ಏಕಾಗ್ರತೆಯ ಕೊರತೆಯಿಂದ ಕೈಗೆ ಬಂದ ಅವಕಾಶಗಳು ಕೈತಪ್ಪಿ ಹೋಗಬಹುದು. ಶ್ರೀಮತಿಯ ನಡುವಿನ ವಿರಸ–ವಿವಾದಗಳು ಬಗೆಹರಿದು ಮನಸ್ಸಿನ ಕಳವಳ ದೂರವಾಗುವುದು. ಎಲೆಕ್ಟ್ರಿಕಲ್ ಕಂಟ್ರಾಕ್ಟರುಗಳಿಗೆ ದೊಡ್ಡ ಆರ್ಡರ್‌ಗಳು ದೊರಕುವುದು. ಇತರರ ಜಾಮೀನು ಪತ್ರ ಇತ್ಯಾದಿಗಳಿಗೆ ಸಹಿ ಹಾಕದಿರಿ. ಕೃಷಿಕರಿಗೆ ಉತ್ತಮ ಫಸಲು ದೊರೆಯಲಿದೆ. ವಾರಾಂತ್ಯಕ್ಕೆ ಲಘು ಪ್ರವಾಸಗಳು. ಶ್ರೀ ಗಜಾನನ ಸೇವೆ. ಶುಭ ಸಂಖ್ಯೆ 3



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸಪ್ತಾಹದ ಆದಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ಚೇತರಿಕೆ. ಚಂದ್ರಗ್ರಹ ಕೃಪೆಯಿಂದ ಅಪೂರ್ಣವಾಗಿದ್ದ ಕೆಲಸಗಳು ಪೂರ್ಣಗೊಳ್ಳುವುವು. ಸ್ತ್ರೀ ಸುಖವನ್ನು ಅನುಭವಿಸುವಿರಿ. ಪರಸ್ಥಳಕ್ಕೆ ತೆರಳಿದಾಗ ಕಲಹಗಳು ಆಗದಂತೆ ಎಚ್ಚರ ವಹಿಸಿ. ಕಾರಣ ನಿಮ್ಮ ರಾಶಿಯಲ್ಲೇ ಕೇತು ಗ್ರಹವಿದೆ. ವಾರದ ಕಡೆಗೆ ಕೃಷಿ ಹಾಗೂ ಪಶು ವ್ಯಾಪಾರಗಳಿಂದ ಧನಪ್ರಾಪ್ತಿ. ಈಗಿನ ನಿರ್ಧಾರಗಳು ನಿಮ್ಮ ಮುಂದಿನ ಭವಿಷ್ಯದ ಮೇಲೆ ಪರಿಣಾಮ ಬೀರಲಿದೆ. ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವೃತ್ತಿ ಜೀವನದಲ್ಲಿ ನೂತನ ಬೆಳವಣಿಗೆಗಳಿಂದ ಸಂತಸದ ವಾತಾವರಣ, ಇದರ ಪರಿಣಾಮದ ಫಲವಾಗಿ ವೈಯಕ್ತಿಕ ವಿಷಯಗಳು ಪ್ರಾಮುಖ್ಯತೆ ಪಡೆಯಲಿದೆ. ಹಣಕಾಸಿನ ವಿಷಯದಲ್ಲಿ ಸುಧಾರಣೆ ಕಂಡು ಬರುವುದು. ವಾರಮಧ್ಯೆ ಎದುರಾಗುವ ವಿಷಮ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಿರಿ. ನಿಮ್ಮ ಸಕಲ ಕಾರ್ಯಗಳಲ್ಲಿ ನಿಮ್ಮ ಶ್ರೀಮತಿಯವರ ಸಹಕಾರ ದೊರೆಯಲಿದೆ. ಶತ್ರುಗಳ ತಂತ್ರ ವಿಫಲವಾಗುವುದು. ಶ್ರೀಚಾಮುಂಡಿ ದರ್ಶನ. ಶುಭ ಸಂಖ್ಯೆ–4.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ನಿಮ್ಮ ಜಾಣತನದಿಂದ ಗಂಭೀರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಿರಿ. ಕಲಾಕ್ಷೇತ್ರ, ವಿದ್ಯಾ ಕ್ಷೇತ್ರದಲ್ಲಿರುವವರಿಗೆ ಮಾನ, ಸನ್ಮಾನಗಳು ಲಭಿಸಲಿದೆ. ಪರಿಶ್ರಮಕ್ಕೆ ತಕ್ಕ ಗಣನೆ ದೊರೆಯಲಿದೆ. ದೈನಂದಿನ ಕೆಲಸಗಳನ್ನು ಮುತುವರ್ಜಿಯಿಂದ ಮಾಡುವುದರ ಜೊತೆಗೆ, ಗುರು–ಹಿರಿಯರ ಮಾರ್ಗದರ್ಶನ ಪಡೆದುಕೊಳ್ಳಿ. ಐಷಾರಾಮಿ ವಸ್ತುಗಳನ್ನು ಕೊಳ್ಳುವುದರಿಂದ ಖರ್ಚು–ವೆಚ್ಚಗಳು ಅಧಿಕಗೊಳ್ಳುವುದು. ಶ್ರೀ ಶಿರಡಿ ಸಾಯಿಬಾಬಾ ಪೂಜೆ. ಶುಭ ಸಂಖ್ಯೆ–2.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ತಡವಾಗಿ ಶುಭ ಸಮಾಚಾರವೊಂದು ಬರಲಿದೆ. ಧನ–ಕನಕ, ವಸ್ತು, ವಾಹನಗಳನ್ನು ಹೊಂದುವಿರಿ. ನೌಕರಿ ಸ್ಥಳದಲ್ಲಿ ಸ್ಫೂರ್ತಿಯಿಂದ ಕೆಲಸಗಳನ್ನು ನಿಭಾಯಿಸುವಿರಿ. ಶ್ರೀಮತಿಯ ಅನುರಾಗ ಪ್ರಾಪ್ತಿ, ಉತ್ತಮ ಭೋಜನ, ಹಾಸಿಗೆ ಸುಖ. ಅಷ್ಟಮ ಶನಿಯಿಂದ ನೆರೆಹೊರೆಯಲ್ಲಿ ಕಲಹಗಳು ಉಂಟಾದೀತು. ರಾಜಕಾರಿಣಿಗಳಿಗೆ ಶತ್ರುಗಳ ಉಪಟಳ ಹೆಚ್ಚಾಗುವುದು. ಸಮಾಜಘಾತುಕ ಶಕ್ತಿಗಳಿಂದ ದೂರವಿರಿ. ಶ್ರೀ ರಾಮ ರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–9.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಹೆಚ್ಚಿನ ಗ್ರಹಗಳು ನಿಮ್ಮ ಸಹಾಯಕ್ಕಿಲ್ಲದ ಕಾರಣ ಮನಃಶಾಂತಿಗಾಗಿ ಪರದಾಡುವಿರಿ. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆ ಕಾಣಬರುತ್ತದೆ. ಉದ್ದಿಮೆದಾರರಿಗೆ ಕಾರ್ಮಿಕರಿಂದಲೇ ತೊಂದರೆ, ನಷ್ಟ. ವಾರದ ಉತ್ತರಾರ್ಧದಲ್ಲಿ ಹಣಕಾಸಿನ ವಿಷಯದಲ್ಲಿ ಸುಧಾರಣೆ ಕಂಡು ಬರುವುದು. ಎದುರಾಗುವ ವಿಷಮ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವಿರಿ. ಪುಣ್ಯಸ್ಥಳ ಭೇಟಿಯಿಂದ ಮನೋಸ್ಥೈರ್ಯ ಉಂಟಾಗಲಿದೆ. ಶ್ರೀ ಶನಿಸ್ತೋತ್ರ ಜಪಿಸಿ. ಶುಭ ಸಂಖ್ಯೆ–7.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಗುರು ಕೃಪೆ ಇದೆ. ವೈಯಕ್ತಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಅಂತ್ಯಗೊಳ್ಳುವುವು. ನಿರೀಕ್ಷಿತ ಧನಾಗಮ, ಮಾನ ಸನ್ಮಾನಗಳಿಗೆ ಪಾತ್ರರಾಗುವಿರಿ. ಅಧಿಕಾರಿಗಳ ಭೇಟಿಯಿಂದ ಅಭಿವೃದ್ಧಿಯ ಮಾರ್ಗ ತೆರೆದುಕೊಳ್ಳಲಿದೆ. ಹಳೆಯ ಕಾಯಿಲೆಯಿಂದ ಬಿಡುಗಡೆಯಾಗಿ ದೈಹಿಕ ಚಟುವಟಿಕೆಗಳು ಉಂಟಾಗುವುದು. ಸಪ್ತಮ ಶನಿ ತೀರಾ ಆಯಾಸ ಒಳ್ಳೆಯದಲ್ಲ. ಎಲ್ಲವನ್ನೂ ಒಮ್ಮೆಲೆಗೆ ಮಾಡಲು ಹೋಗದಿರಿ. ಶ್ರೀ ದುರ್ಗಾ ಸ್ತುತಿ. ಶುಭ ಸಂಖ್ಯೆ–5.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ. ಸಜ್ಜನರ ಸಮಾಗಮ, ಸುವಾರ್ತೆ ಬರುವುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ವ್ಯಾಪಾರಸ್ಥರಿಗೆ ಈರುಳ್ಳಿಯಲ್ಲಿ ಬಂದ ಲಾಭ, ಬೆಳ್ಳುಳ್ಳಿಯಲ್ಲಿ ಹೋದಂತೆ ಎಂಬ ಗಾದೆಯಂತೆ ಆಗುವುದು. ರಾಜಕಾರಿಣಿಗಳ ಸ್ಥಾನಮಾನಗಳಿಗೆ ಧಕ್ಕೆಯಾಗುವುದು. ಸಾಡೇ ಸಾತಿ ಶನಿಯ ಪ್ರಭಾವದಿಂದ ಮಾನಸಿಕ ಉದ್ವೇಗ. ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–5.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಆದಿಗೆ ಉದ್ಯೋಗ ನಿಮಿತ್ತ ಪ್ರಯಾಣ ಕೈಗೊಳ್ಳಬೇಕಾಗಬಹುದು. ಗೆಳೆಯರ ಸಹಾಯ ಮಾರ್ಗದರ್ಶನಗಳು ನಿಮ್ಮ ಏಳಿಗೆಗೆ ಸಹಕಾರಿಯಾಗಲಿದೆ. ಅಷ್ಟಮ ಗುರುವಿನ ಕಾರಣ ಹಲವರ ಒಳ ಪಿತೂರಿಗಳು ನಿಮ್ಮನ್ನು ಕಾಡುತ್ತವೆ. ವರಮಾನ–ವೆಚ್ಚಗಳನ್ನು ಸರಿದೂಗಿಸಲು ಪರದಾಡುವಿರಿ. ಸ್ವಜನರ ವಿರಹದಿಂದ ಬೇಸರ ಉಂಟಾಗುವುದು. ಮನೆಯಲ್ಲಿ ಹಿರಿಯರ ಆರೋಗ್ಯಕ್ಕೆ ಕುಂದುಂಟಾಗಬಹುದು. ಶ್ರೀ ಸೂರ್ಯಮಂತ್ರ ಜಪಿಸಿ. ಶುಭ ಸಂಖ್ಯೆ–6.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ದೈನಂದಿನ ನಿಮ್ಮ ಕಾರ್ಯ ಕಲಾಪಗಳು ಸುಗಮವಾಗಿ ಮುಂದುವರೆಯುವುದು. ವ್ಯಾಪಾರ, ವ್ಯವಹಾರಗಳು ಚೆನ್ನಾಗಿ ನಡೆದು ಹಣ ಸಂಗ್ರಹವಾಗುವುದು. ವಾಮಮಾರ್ಗದಿಂದಲೂ ಧನ ಬರುವುದು. ಮನೆಯಲ್ಲಿ ಮಂಗಳಕಾರ್ಯ ಮಾಡಲು ಪ್ರೇರಣೆ ಆಗುವುದು. ಹಳೆಯ ಸಾಲ ವಸೂಲಾಗುವ ಸಂಭವವಿದೆ. ರೈತಾಪಿ ಜನರಿಗೆ ಪ್ರಕೃತಿ ವಿಕೋಪದಿಂದ ನಷ್ಟ. ವಾರಾಂತ್ಯಕ್ಕೆ ಹಳೆಯ ಹರಕೆಗಳನ್ನು ತೀರಿಸಿಕೊಳ್ಳಿ. ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ–2.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ವಾರದಾರಂಭಕ್ಕೆ ವಾಣಿಜ್ಯ, ವ್ಯವಹಾರಗಳಲ್ಲಿ ಪ್ರತಿಸ್ಪರ್ಧಿಗಳ ನಿವಾರಣೆ, ಮಹತ್ವದ ವಿಷಯಗಳಲ್ಲಿ ಶ್ರೀಮತಿ ಸಹಕಾರ, ವಾರ ಮಧ್ಯೆ ಮನೆಗೆ ಅತಿಥಿ, ಅಭ್ಯಾಗತರ ಆಗಮನ. ಕಳೆದುಕೊಂಡಿದ್ದ ಆರೋಗ್ಯ ಮರಳಿ ಪಡೆಯುವಿರಿ. ಸರ್ಕಾರಿ ಅಧಿಕಾರಿಗಳ ಸಂಪರ್ಕದಿಂದ ನೆನೆಗುದಿಗೆ ಬಿದ್ದಿದ್ದ ಕೆಲಸಗಳು ಪುನರಾರಂಭವಾಗಲಿದೆ. ದ್ವಿತೀಯ ಕೇತು ಮತ್ತು ಅಷ್ಟಮ ರಾಹು ಇದ್ದು ಯಾವುದೇ ದುಸ್ಸಾಹಸಕ್ಕೆ ಪ್ರೇರೇಪಿಸಬಹುದು. ಜಾಗೃತರಾಗಿರಿ. ಶ್ರೀ ನಾರಾಯಣಸ್ವಾಮಿ ಸ್ತುತಿ. ಶುಭ ಸಂಖ್ಯೆ–1.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನಂಬಿ ಕೆಟ್ಟವರಿಲ್ಲವೋ ಹಿರಿಯ, ನಂಬದವರು ಕೆಟ್ಟರೆ ಕೆಡಲಿ' ಎಂಬ ದಾಸರವಾಣಿಯನ್ನು ನೀವು ಪಾಲಿಸಿ. ವಾರಮಧ್ಯೆ ಹೋಟೆಲ್, ಟ್ರಾವೆಲ್ಸ್ ಉದ್ಯಮದವರಿಗೆ ಆದಾಯದಲ್ಲಿ ಹೆಚ್ಚಳ. ಕೋರ್ಟು, ಕಚೇರಿ ಕೆಲಸಗಳು ನಿಮ್ಮ ಪರ ಇರದು. ಅಪ್ರಾಣಿಕ ಕೆಲಸಗಳಿಂದ ಮನಃಶಾಂತಿ ಕೆಡುತ್ತದೆ. ವಾಹನ ಚಲಿಸುವಾಗ ಆತುರ ಬೇಡ. ಸರ್ಕಾರಕ್ಕೆ ದಂಡ ಕಟ್ಟಬೇಕಾದೀತು. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಜಪಿಸಿ. ಶುಭ ಸಂಖ್ಯೆ–4.

ಮೈಸೂರು ಮಿತ್ರ

ಐಎಎಸ್ ಅಧಿಕಾರಿಗಳ ಬೆನ್ನಲ್ಲೇ 53 ಐಪಿಎಸ್ ಅಧಿಕಾರಿಗಳಿಗೆ ಬಡ್ತಿ

ಬೆಂಗಳೂರು, ಡಿ.31– ರಾಜ್ಯ ಸರ್ಕಾರ 53 ಐಪಿಎಸ್ ಅಧಿಕಾರಿಗಳಿಗೆ ವೇತನ ಶ್ರೇಣಿ ಹೆಚ್ಚಳದೊಂದಿಗೆ, ಬಡ್ತಿ ನೀಡಿ ನ್ಯೂ ಇಯರ್ ಗಿಫ್ಟ್ ಕೊಟ್ಟಿದೆ. ಈ ಆದೇಶ ಹೊಸವರ್ಷದ ಮೊದಲ ದಿನದಿಂದಲೇ ಜಾರಿಗೆ ಬರುವಂತೆ ಸುತ್ತೋಲೆ ಹೊರಡಿಸಿದೆ.

ವೇತನ ಶ್ರೇಣಿ ಹೆಚ್ಚಳದೊಂದಿಗೆ, ಬಡ್ತಿ ಪಡೆದ ಅಧಿಕಾರಿಗಳು

1.ಅಲೋಕ್‌ಮೋಹನ್ ಡಿಜಿಪಿ (ಗೃಹರಕ್ಷಕ ದಳದ ಕಮಾಂಡೆಂಟ್ ಜನರಲ್) 2. ಸಿ.ಹೆಚ್. ಪ್ರತಾಪ್ ರೆಡ್ಡಿ ಡಿಜಿಪಿ ಬೆಂಗಳೂರು ನಗರ 3. ಮನೀಶ್ ಖರ್ಬೀಕರ್ ಡಿಜಿಪಿ (ಕಾರಾಗೃಹಗಳು) ಕಲಬುರಗಿ 4. ಎನ್ ಸತೀಶ್ ಕುಮಾರ್ ಕಲಬುರಗಿ ಈಶಾನ್ಯ ರೇಂಜ್ ಐಜಿಪಿ 5. ಸೌಮೇಂದು ಮುಖರ್ಜಿ ಎಡಿಜಿಪಿ ಸಂವಹನ, ಲಾಜಿಸ್ಟಿಕ್ ಮತ್ತು ಆಧುನೀಕರಣದ 6. ಚಂದ್ರಶೇಖರ್ ಬೆಂಗಳೂರು ಪೂರ್ವ ವಲಯದ ಹೆಚ್ಚುವರಿ ಪೊಲೀಸ್ ಕಮಿಷನರ್ 7. ರಮಣ್ ಗುಪ್ತಾ ಐಜಿಪಿ ಬೆಂಗಳೂರು ಉತ್ತರ ವಲಯ 8. ಬಿ.ಆರ್. ರವಿಕಾಂತೇಗೌಡ ಐಜಿಪಿ ಬೆಂಗಳೂರು ಕೇಂದ್ರ ವಲಯ 9. ಬಿ.ಎಸ್. ಲೋಕೇಶ್ ಕುಮಾರ್ ಐಜಿಪಿ ಬಳ್ಳಾರಿ ವಲಯ ಇನ್ನು ಈ ಬಡ್ತಿ ಪಡೆಯುವ ಪಟ್ಟಿಯಲ್ಲಿ ಐಪಿಎಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಹೆಸರು ಸಹ ಇತ್ತು. ಆದ್ರೆ, ಅವರ ಮೇಲೆ ಕೆಲ ಆರೋಪಗಳು ಕೇಳಿಬಂದ ಹಿನ್ನೆಲೆಯಲ್ಲಿ ಸರ್ಕಾರ ಅವರ ಬಡ್ತಿಯನ್ನು ತಡೆ ಹಿಡಿದಿದೆ ಎಂದು ತಿಳಿದುಬಂದಿದೆ. ನಿರ್ಭಯಾ ಸೇಫ್ಟಿ ಟೆಂಡರ್ ವಿಚಾರಕ್ಕೆ ಸಂಬಂಧಿಸಿ 2021ರಲ್ಲಿ ಐಪಿಎಸ್ ಅಧಿಕಾರಿಗಳಾದ ಡಿ. ರೂಪಾ ಮತ್ತು ನಿಂಬಾಳ್ಕರ್ ಆರೋಪ–ಪ್ರತ್ಯಾರೋಪ ಮಾಡಿಕೊಂಡಿದ್ದರು. ಈ ಘಟನೆ ನಂತರ ಸರ್ಕಾರ ಇಬ್ಬರನ್ನು ವರ್ಗಾವಣೆ ಮಾಡಿತ್ತು.

ಗುಜರಾತ್‌ನಲ್ಲಿ ಐಷಾರಾಮಿ ಬಸ್‌ಎಸ್‌ಯುವಿ ಡಿಕ್ಕಿ

ಒಂಬತ್ತು ಮಂದಿ ಸಾವು, 15ಕ್ಕೂ ಹೆಚ್ಚು ಮಂದಿಗೆ ಗಾಯ

ನವಸಾರಿ, ಡಿ.31– ಗುಜರಾತ್‌ನ ನವಸಾರಿ ಜಿಲ್ಲೆಯಲ್ಲಿ ಶನಿವಾರ ನಸುಕಿನ ವೇಳೆಯಲ್ಲಿ ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್ ಐಷಾರಾಮಿ ಬಸ್‌ಗೆ ಡಿಕ್ಕಿ ಹೊಡೆದ ಪರಿಣಾಮ ಒಂಬತ್ತು ಜನರು ಮೃತಪಟ್ಟಿದ್ದಾರೆ. ಸುಮಾರು 15 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬಸ್ ವಲ್ಸಾಡ್ ಕಡೆಗೆ ಹೋಗುತ್ತಿದ್ದಾಗ ವೆಸ್ಮಾ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ.

ಎಸ್‌ಯುವಿ ವಿರುದ್ಧ ದಿಕ್ಕಿನಿಂದ ಬರುತ್ತಿತ್ತು ಎಂದು ನವಸಾರಿ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ರುಶಿಕೇಶ್ ಉಪಾಧ್ಯಾಯ ತಿಳಿಸಿದ್ದಾರೆ. ಎಸ್‌ಯುವಿಯಲ್ಲಿ ಪ್ರಯಾಣಿಸುತ್ತಿದ್ದ ಒಂಬತ್ತು ಜನರ ಪೈಕಿ ಎಂಟು ಮಂದಿ ಹಾಗೂ ಬಸ್‌ನ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಎಸ್‌ಯುವಿಯಲ್ಲಿ ಪ್ರಯಾಣಿಸುತ್ತಿದ್ದವರು ಗುಜರಾತ್‌ನ ಅಂಕಲೇಶ್ವರ ನಿವಾಸಿ ಗಳಾಗಿದ್ದು, ಅವರು ವಲ್ಸಾಡ್‌ನಿಂದ ತಮ್ಮ ಊರಿಗೆ ಹಿಂತಿರುಗುತ್ತಿದ್ದರು. ಬಸ್‌ನ ಪ್ರಯಾಣಿಕರು ವಲ್ಸಾಡ್‌ನಿಂದ ಬಂದವರು ಎಂದು ಹೇಳಲಾಗಿದೆ.

ಒಂದನೇ ಪುಟದಿಂದ

ನಿಮ್ಮ ವಿದ್ಯುತ್ ಬಿಲ್ ಪಾವತಿಸಿ

ಬಿಲ್‌ನಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ನಿಗಧಿತ ಶುಲ್ಕ ಪಾವತಿಸಬಹುದಾಗಿದೆ. ಅಲ್ಲದೆ, ತಮ್ಮ ಮೊಬೈಲ್‌ಗೆ ಎಲೆಕ್ಟ್ರಾನಿಕ್ ಬಿಲ್ ಪಡೆದುಕೊಳ್ಳಬಹುದಾಗಿದೆ. ಹೆಚ್ಚು ವಿದ್ಯುತ್ ಬಳಸುವ ಗ್ರಾಹಕರು ವರ್ಚುವಲ್ ಖಾತೆ ಸಂಖ್ಯೆ ಬಳಸಿಕೊಂಡು ಪಾವತಿ ಮಾಡಬಹುದಾಗಿದೆ.

ಕ್ಯೂಆರ್ ಕೋಡ್ ವ್ಯವಸ್ಥೆಯಿಂದ ಗ್ರಾಹಕರಿಗೆ ಹಲವು ಉಪಯೋಗವಿದೆ. ಬಿಲ್‌ನಲ್ಲಿರುವ ಕ್ಯೂಆರ್ ಕೋಡ್ ಅನ್ನು ಗ್ರಾಹಕರು ತಾವಿರುವಲ್ಲೇ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಸುಲಭವಾಗಿ ವಿದ್ಯುತ್ ಬಿಲ್ ಪಾವತಿಸಬಹುದಾಗಿದೆ. ಬಿಲ್ ಪಾವತಿಸಲು ಕಚೇರಿಗೆ ಅಲೆಯುವುದು ತಪ್ಪುತ್ತದೆ. ಸಮಯವೂ ಉಳಿಯುತ್ತದೆ. ಒತ್ತಡವೂ ನಿವಾರಣೆಯಾಗುತ್ತದೆ.

ಸೆಸ್ಕ್‌ಗೆ ಪ್ರಯೋಜನ: ಹೊಸ ವ್ಯವಸ್ಥೆ ಜಾರಿಗೊಳಿಸುತ್ತಿರುವುದರಿಂದ ಗ್ರಾಹಕರಿಗೆ ಮಾತ್ರವಲ್ಲದೆ, ಸೆಸ್ಕ್‌ಗೂ ಪ್ರಯೋಜನವಾಗಲಿದೆ. ಬಿಲ್ ಪಾವತಿಯಲ್ಲಿ ಯಾವುದೇ ಹಸ್ತಕ್ಷೇಪ ತಡೆಗಟ್ಟಲು ಸಾಧ್ಯವಾಗಲಿದೆ. ಕಾಲಕಾಲಕ್ಕೆ ಬಿಲ್ ಮೊತ್ತ ಸಂಗ್ರಹವಾಗಲಿದೆ. ಕೌಂಟರ್‌ಗಳಲ್ಲಿ ಸರದಿ ಸಾಲಿಗೆ ಕಡಿವಾಣ ಬೀಳಲಿದೆ. ವಿದ್ಯುತ್ ದರ ಸಂಗ್ರಹಕ್ಕೆ ಮಾನವ ಸಂಪನ್ಮೂಲ ಬಳಕೆ ಸ್ಥಗಿತಗೊಳಿಸಬಹುದು. ಶುಲ್ಕ ಸಂಗ್ರಹಿಸಲು ಏಜೆನ್ಸಿಗಳಿಗೆ ನೀಡುತ್ತಿದ್ದ ವೆಚ್ಚವೂ ಉಳಿತಾಯವಾಗಲಿದೆ. ಇನ್ನಷ್ಟು ಉಪಯೋಗ ಹೊಂದಿರುವ ಈ ಹೊಸ ವ್ಯವಸ್ಥೆಯ ಗ್ರಾಹಕರು ಹಾಗೂ ಸೆಸ್ಕ್‌ಗೆ ಪೂರಕವಾಗಿ ಪರಿಣಮಿಸಿದೆ.

ಬಿಜೆಪಿ ಅಧಿಕಾರ ಹಿಡಿಬೇಕು

ಸೆಳೆಯುವ ಪ್ರಯತ್ನ ಮಾಡಿ. ನಾನು ಮುಂದಿನ ಬಾರಿ ರಾಜ್ಯ ಪ್ರವಾಸ ಕೈಗೊಳ್ಳುವುದಕ್ಕೂ ಮುನ್ನ ನಿಮ್ಮಿಂದ ನನಗೆ ತಕ್ಕ ಪ್ರತಿಫಲ ಸಿಗಬೇಕು ಎಂದು ಸೂಚಿಸಿದ್ದಾರೆ. ನಮ್ಮದಲ್ಲದ ಕ್ಷೇತ್ರಗಳಲ್ಲಿ ಹುಡುಕಾಟ ನಡೆಸಿ ಎಂದು ಹೇಳುವ ಮೂಲಕ ಇಡೀ ಕರ್ನಾಟಕದ ಬಗ್ಗೆ 2023ರ ವಿಧಾನಸಭೆ ಚುನಾವಣೆಗೆ ನಡೆದಿರುವ ಸಿದ್ಧತೆಗಳ ಬಗ್ಗೆ ರಾಜ್ಯ ನಾಯಕರಿಂದ ಮಾಹಿತಿ ಪಡೆದರು. ಇದು ಅಷ್ಟೇ ಅಲ್ಲ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾದ ನಂತರ ಬಂದ ಮುಖ್ಯಮಂತ್ರಿಗಳು ಚುನಾವಣೆಗಳಲ್ಲಿ ಯಾವ ರೀತಿ ಮತದಾರರ ಮನವೊಲಿಸಿದರು. ಅವರು ಚುನಾವಣೆಯಲ್ಲಿ ನೀಡಿದ ಭರವಸೆಗಳೇನು. ಈ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ನೀಡಿ. ಕಾಂಗ್ರೆಸ್, ಜೆಡಿಎಸ್ ನಾಯಕರಿಗೆ ಅಂಜುವುದು ಬೇಡ. ನಮಗೆ ಚುನಾವಣಾ ಹೇಗೆ ನಡೆಸಬೇಕೆಂಬುದು ಚೆನ್ನಾಗಿ ಗೊತ್ತು. ಅದನ್ನು ನಾವು ಮಾಡುತ್ತೇವೆ. ಅದಕ್ಕೆ ಬೇಕಾದ ಪೂರ್ವ ಸಿದ್ಧತೆ ನೀವು ಮಾಡಿಕೊಳ್ಳಿ, ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವುದಕ್ಕೂ ಮುನ್ನವೇ ನೀವು ಘೋಷಣೆ ಮಾಡಿರುವ ಕಾರ್ಯಕ್ರಮಗಳು ಅನುಷ್ಠಾನಗೊಳ್ಳಬೇಕು. ಅದಕ್ಕೆ ತಕ್ಷಣವೇ ಹಣ ಬಿಡುಗಡೆ ಮಾಡಿ. ಕೇಂದ್ರದಿಂದ ಅನುದಾನ ಬಾಕಿ ಇದ್ದರೆ, ಅವುಗಳ ಪೂರ್ಣ ಮಾಹಿತಿ ನೀಡಿ, ತಕ್ಷಣ ಬಿಡುಗಡೆಗೆ ಕ್ರಮ ಕೈಗೊಳ್ಳುತ್ತೇನೆ. ನಿಮ್ಮ ಸಮಸ್ಯೆಗಳಿ ದ್ದರೆ, ನನ್ನ ಸಹೋದ್ಯೋಗಿ ಪ್ರಹ್ಲಾದ ಜೋಶಿ ಮತ್ತು ಸಂಘಟನಾ ಕಾರ್ಯದರ್ಶಿ ಸಂತೋಷ್ ಅವರಿಗೆ ತಿಳಿಸಿ. ಎಲ್ಲದಕ್ಕೂ ಪರಿಹಾರ ಕಂಡು ಹಿಡಿಯೋಣ ಎಂದಿದ್ದಾರೆ. ನಗರದ ಪಂಚತಾರಾ ಹೋಟೇಲ್‌ನಲ್ಲಿ ಕಳೆದ ಎರಡು ದಿನಗಳಿಂದ ನಿರಂತರವಾಗಿ ಹಾಗೂ ಪ್ರತ್ಯೇಕವಾಗಿ ಸಚಿವರು ಮತ್ತು ಮುಖಂಡರುಗಳ ಜೊತೆ ಸಮಾಲೋಚನೆ ನಡೆಸಿದ ಅಮಿತ್ ಷಾ ರಾಜ್ಯ ನಾಯಕರ ವಿರುದ್ಧ ಕೆಲವೊಮ್ಮೆ ಹರಿಹಾಯ್ದಿದ್ದಾರೆ. ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆಯ ನಂತರ ರಾಜ್ಯದತ್ತ ಮುಖ ಮಾಡಿರುವ ಕೇಂದ್ರ ನಾಯಕರು ಕಳೆದ ಶುಕ್ರವಾರದಿಂದಲೇ ಚುನಾವಣಾ ರಣಕಹಳೆ ಊದಿದ್ದಾರೆ.

ಸಂಭ್ರಮದ ಸ್ವಾಗತ

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹೊಸ ವರ್ಷವನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು. ನಗರದ ಬಹುತೇಕ ಹೋಟೆಲ್‌ಗಳು ಹಾಗೂ ಕ್ಲಬ್‌ಗಳು ಮನರಂಜನೆಯ ತಾಣವಾಗಿದ್ದವು. ಕಾಸ್ಮೋಪಾಲಿಟನ್ ಕ್ಲಬ್, ಕೆಎನ್‌ಎಸ್, ಗಾಲ್ಫ್ ಕ್ಲಬ್, ವಿಜಯನಗರ ಸ್ಪೋರ್ಟ್ಸ್ ಕ್ಲಬ್, ಹೆರಿಟೇಜ್ ಕ್ಲಬ್, ಹೋಟೆಲ್‌ಗಳಾದ ಗ್ರ್ಯಾಂಡ್ ಮರ್ಕ್ಯೂರಿ, ರಿಯೋ ಮೆರಿಡಿಯನ್, ಸದರನ್ ಸ್ಟಾರ್, ರ‍್ಯಾಡಿಸನ್ ಬ್ಲ್ಯೂ, ಫಾರ್ಚೂನ್ ಜೆಪಿ ಪ್ಯಾಲೇಸ್, ಹೋಟೆಲ್ ದಿ ಕೊರಂ, ಸಂದೇಶ್ ದಿ ಪ್ರಿನ್ಸ್, ಪೈ ವಿಸ್ಟಾ, ದಿ ಪ್ರೆಸಿಡೆಂಟ್, ಹೋಟೆಲ್ ಸಿದ್ದಾರ್ಥ, ರುಚಿ ದಿ ಪ್ರಿನ್ಸ್, ಸಿಪಾಯಿ ಗ್ರಾಂಡ್, ಕೋರ್ಟ್ಯಾರ್ಡ್ ಟ್ರೀ ಸೇರಿದಂತೆ ನಗರದ ಬಹುತೇಕ ಹೋಟೆಲ್‌ಗಳಲ್ಲಿ ಹೊಸ ವರ್ಷದ ವಿಶೇಷ ಆತಿಥ್ಯ ವಹಿಸಲಾಗಿತ್ತು.


ಪ್ಯಾಕೇಜ್ ವ್ಯವಸ್ಥೆ: ಸರ್ಕಾರದ ಕೋವಿಡ್ ಮಾರ್ಗಸೂಚಿಗನುಗುಣವಾಗಿ ಊಟ, ತಿಂಡಿ–ತಿನಿಸು, ತಂಪು ಪಾನೀಯ, ಮದ್ಯಪಾನ ವ್ಯವಸ್ಥೆ ಮಾಡಿದ್ದ ಹೋಟೆಲ್‌ಗಳಲ್ಲಿ ಪುರುಷರಿಗೆ, ಜೋಡಿಗೆ, ಹುಡುಗಿಯರಿಗೆ, ಮಕ್ಕಳಿಗೆ ಪ್ರತ್ಯೇಕವಾಗಿ ಪ್ಯಾಕೇಜ್ ವ್ಯವಸ್ಥೆ ಮಾಡಲಾಗಿತ್ತು. 1 ಸಾವಿರ ರೂ.ನಿಂದ ಹಿಡಿದು ಸುಮಾರು 6 ಸಾವಿರ ರೂ.ವರೆಗೆ ಪ್ಯಾಕೇಜ್ ನೀಡಲಾಗಿತ್ತು. ಬಗೆ ಬಗೆಯ ಖಾದ್ಯಗಳು, ಹೊಟ್ಟೆ ಭರ್ತಿಯಾಗುವಷ್ಟು ಪಾನೀಯ ಸವಿಯುವ ಅವಕಾಶವನ್ನು ಪ್ಯಾಕೇಜ್ ಮೂಲಕ ನೀಡಲಾಗಿತ್ತು. ಡಿಜೆಗೆ ಅವಕಾಶ ನೀಡದೆ ಇದ್ದಿದ್ದರಿಂದ ನಿರೂಪಕರ ಮೂಲಕ ಮೋಜಿನ ಆಟೋಟಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಹಾಸ್ಯಭರಿತ ಪ್ರಶ್ನೆ ಕೇಳುವುದು, ಬಗೆ ಬಗೆಯ ಆಟಗಳನ್ನು ಆಡಿಸುವುದರ ಜೊತೆಗೆ ಒಮ್ಮೆಗೆ ಎಲ್ಲರೂ ಒಟ್ಟಾಗಿ ಜೋರಾಗಿ 'ಹ್ಯಾಪಿ ನ್ಯೂ ಇಯರ್' ಎಂದು ಕೂಗುತ್ತಾ, ಕುಣಿಯುತ್ತಾ 2023ಕ್ಕೆ ಪಾದಾರ್ಪಣೆ ಮಾಡಿದರು.

ಮಧ್ಯರಾತ್ರಿವರೆಗೂ ಮೋಜು–ಮಸ್ತಿ: ನೂತನ ವರ್ಷದ ಸಂಭ್ರಮಾಚರಣೆ ಮಧ್ಯರಾತ್ರಿವರೆಗೂ ನಡೆಯಿತು. 12 ಗಂಟೆಯಾಗುತ್ತಿದ್ದಂತೆ ಹೊಸ ವರ್ಷ ಸಂಭ್ರಮ ಮೊಳಗಿಸಿ, ಕುಣಿಯುತ್ತಾ ರಾತ್ರಿ 1 ಗಂಟೆಯವರೆಗೂ ಮೋಜಿನಲ್ಲಿ ತೇಲಿದರು. 2019ರ ನಂತರ ಅದ್ದೂರಿಯಾಗಿ ವ್ಯವಸ್ಥೆ ಮಾಡಿಕೊಂಡಿದ್ದ ಹೋಟೆಲ್‌ಗಳಲ್ಲಿ ಹತ್ತಾರು ಬಗೆಯ ರುಚಿಕರ ಖಾದ್ಯಗಳನ್ನು ಸವಿದು ಸಂತೋಷ ಹಂಚಿಕೊಂಡರಲ್ಲದೆ ಹೊಸ ವರ್ಷದ ಮೊದಲ ದಿನವನ್ನು ಅವಿಸ್ಮರಣೀಯವನ್ನಾಗಿಸಿಕೊಂಡರು.

ಸಿಸಿ ಕ್ಲಬ್‌ನಲ್ಲಿ ಅದ್ದೂರಿ ಆಚರಣೆ: ಪ್ರತಿಷ್ಠಿತ ಕಾಸ್ಮೊಪಾಲಿಟನ್ ಕ್ಲಬ್‌ನಲ್ಲಿ ಎರಡು ವರ್ಷದ ಬಳಿಕ ಹೊಸ ವರ್ಷದ ಸಂಭ್ರಮಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ವರ್ಣಮಯ ವೇದಿಕೆಯಲ್ಲಿ ಹಾಡು, ನೃತ್ಯ, ಮೋಜಿನಾಟಗಳಿಂದ ಖುಷಿ ಹಂಚಲಾಯಿತು. ಶಾಸಕ ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಿಸಿ ಕ್ಲಬ್ ಅಧ್ಯಕ್ಷ ಗಿರೀಶ್‌ಗೌಡ ಸೇರಿದಂತೆ ಕ್ಲಬ್‌ನ ಸದಸ್ಯರ ಕುಟುಂಬಸ್ಥರು, ಆಹ್ವಾನಿತರೊಡಗೂಡಿ ನೂತನ ವರ್ಷವನ್ನು ಆಹ್ವಾನಿಸಲಾಯಿತು. **ಬಿಗಿ ಭದ್ರತೆ:** ಹೊಸ ವರ್ಷಾಚರಣೆ ಅಂಗವಾಗಿ ಮೈಸೂರು ನಗರದೆಲ್ಲೆಡೆ ಬಿಗಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು.

ಅನಿಲ ಸೋರಿಕೆ ಸಂದರ್ಭದಲ್ಲಿ ಪರಿಸ್ಥಿತಿ ನಿಭಾಯಿಸುವ ಸಂಬಂಧ ರೋಚಕ ಅಣಕು ಪ್ರದರ್ಶನ





ಮೈಸೂರು,ಡಿ.31(ಎಂಟಿವೈ)– ರಾಸಾಯನಿಕ ವಸ್ತು ಹಾಗೂ ಅನಿಲ ಸೋರಿಕೆಯಿಂದ ಸಂಭವಿಸಬಹುದಾದ ಪ್ರಕರಣಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಅಣಕು ಪ್ರದರ್ಶನ ಆಯೋಜಿಸಿ ವಿಪತ್ತು ನಿರ್ವಹಣಾ ಸಿಬ್ಬಂದಿಯ ಚಮತ್ಕಾರ ಪರಿಶೀಲಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಹಾಗೂ ಅತೀ ಅಪಾಯಕಾರಿ ಕಾರ್ಯಾಚರಣೆ ಹೊಂದಿರುವ ಕಾರ್ಖಾನೆಯಾದ ಅಡಿಗೆ ಅನಿಲ ಸರಬರಾಜು ಮಾಡುವ ಮೆ: ಎಜಿ & ಪಿ.ಸಿಟಿ ಗ್ಯಾಸ್ ಪ್ರೈ.ಲಿ.ಸಹಯೋಗದಲ್ಲಿ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಹಮ್ಮಿಕೊಂಡಿದ್ದ ರಾಸಾಯನಿಕ ವಿಪತ್ತು ನಿರ್ವಹಣೆ ಕುರಿತ ಅಣಕು ಪ್ರದರ್ಶನದಲ್ಲಿ ರಾಸಾಯನಿಕ ವಸ್ತು ಹಾಗೂ ಗ್ಯಾಸ್ ಟ್ಯಾಂಕರ್ ತೆರಳುವ ವೇಳೆ ಸೋರಿಕೆ ಉಂಟಾಗಿ ಆತಂಕ ಪರಿಸ್ಥಿತಿ ಮರುಸೃಷ್ಟಿಸಿ ವಿಪತ್ತು ನಿರ್ವಹಣಾ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ, ಆರೋಗ್ಯ ಸಿಬ್ಬಂದಿ, ಪೊಲೀಸ್ ಹಾಗೂ ವಿವಿಧ ಘಟಕಗಳ ಸಿಬ್ಬಂದಿ ತುರ್ತು ಕಾರ್ಯಾಚರಣೆ ವೇಳೆ ಚಾಕಚಕ್ಯತೆ ಮೆರೆಯುವುದನ್ನು ಪ್ರದರ್ಶಿಸಲಾಯಿತು.

ಟ್ಯಾಂಕರ್‌ನಲ್ಲಿ ಅನಿಲ ಸೋರಿಕೆಯಾಗಿ ಸುತ್ತ ಮುತ್ತಲಿನ ವಾತಾವರಣ ಕಲುಷಿತವಾಗಿ, ಜನ ಉಸಿರು ಗಟ್ಟಿ ನರಳುವ ದೃಶ್ಯ, ಘಟನೆಯಲ್ಲಿ ಸಿಲುಕಿರುವವರನ್ನು ರಕ್ಷಿಸುವ, ಪ್ರಾಥಮಿಕ ಚಿಕಿತ್ಸೆ ನೀಡುವ ಹಾಗೂ ಆಸ್ಪತ್ರೆಗೆ ಸಾಗಿಸುವ ಪ್ರಕ್ರಿಯೆಯನ್ನು ವಿಪತ್ತು ನಿರ್ವಹಣಾ ಸಿಬ್ಬಂದಿಗಳ ತಂಡ ಪ್ರದರ್ಶಿಸಿತು. ಅನಿಲ ಸೋರಿಕೆಯಾಗುತ್ತಿರುವ ಟ್ಯಾಂಕರ್ ಮೇಲೆ ದ್ರಾವಣ ಸಿಂಪಡಿಸಿ, ತೀವ್ರತೆ ಕಡಿಮೆ ಮಾಡುವ ಕಾರ್ಯಾಚರಣೆ ನಡೆಸಲಾಯಿತು.

ಹೆಬ್ಬಾಳು ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ವಸತಿ ಸಮುಚ್ಚಯಗಳ ಮುಂದೆ ನಡೆಸಿದ ಕಾರ್ಯಾಚರಣೆಯನ್ನು ಸ್ಥಳೀಯರು ಕುತೂಹಲದಿಂದ ವೀಕ್ಷಿಸಿದರೆ, ದಾರಿಹೋಕರು ನಿಜವಾಗಿಯೂ ಅನಿಲ ಸೋರಿಕೆ ಉಂಟಾಗಿದೆ ಎಂದೇ ಪರಿಭಾವಿಸಿ, ಆತಂಕಕ್ಕೀಡಾದರು.

ಅನಾಹುತ ಸಂಭವಿಸದಂತೆ ಕಟ್ಟೆಚ್ಚರ ವಹಿಸಿ: ಅಣಕು ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ರಾಸಾಯನಿಕ ದುರಂತಗಳು ಸಂಭವಿಸದಂತೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮನವರಿಕೆ ಮಾಡಿಕೊಡಲು ಇಂತಹ ಅಣಕು ಪ್ರದರ್ಶನ ಏರ್ಪಡಿಸಲಾಗಿದೆ. ರಾಸಾಯನಿಕ ಹಾಗೂ ಅನಿಲ ಸೋರಿಕೆ ಪ್ರಕರಣಗಳು ಆಕಸ್ಮಿಕವಾಗಿ ನಡೆದಾಗ ಯಾವ ರೀತಿ ದುಷ್ಪರಿಣಾಮ ಬೀರುತ್ತದೆ. ಅಂತಹ ಘಟನೆ ಸಂಭವಿಸಿದಾಗ ಕೈಗೊಳ್ಳಬೇಕಾದ ಕ್ರಮಗಳು, ವಿವಿಧ ಇಲಾಖೆಗಳ ಸಿಬ್ಬಂದಿಗಳ ಸೇವೆ, ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವ ಕ್ರಮ ಹಾಗೂ ಸಾರ್ವಜನಿಕರ ಪಾತ್ರದ ಬಗ್ಗೆ ಮನವರಿಕೆ ಮಾಡಿಕೊಡಲು ಇಂತಹ ಅಣಕು ಪ್ರದರ್ಶನ ಸಹಕಾರಿಯಾಗಲಿದೆ ಎಂದರು.

ಅಣಕು ಪ್ರದರ್ಶನದ ಮೂಲಕ ವಿಪತ್ತು ನಿರ್ವಹಣೆ ಹಾಗೂ ಇಂತಹ ವಿಪತ್ತುಗಳಿಂದಾಗುವ ದೊಡ್ಡ ಅನಾಹುತಗಳನ್ನು ನಿಯಂತ್ರಿಸುವ ಬಗೆಯನ್ನು ತಿಳಿದುಕೊಂಡಿದ್ದರೆ, ಮುಂದಿನ ದಿನಗಳಲ್ಲಿ ನೈಜ ಕಾರ್ಯಾಚರಣೆ ನಡೆಸುವ ಸಂದರ್ಭ ಒದಗಿ ಬಂದಾಗ ಸಿಬ್ಬಂದಿಗಳಿಗೆ ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿನ ಅತೀ ಹೆಚ್ಚು ಅಪಾಯಕಾರಿ ಕಾರ್ಯ ಕ್ಷೇತ್ರ ಹೊಂದಿರುವ ಕಾರ್ಖಾನೆಗಳಲ್ಲಿ ಇಂತಹ ಅಣಕು ಪ್ರದರ್ಶನಗಳನ್ನು ಆಯೋಜಿಸಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಎಡಿಸಿ ಡಾ.ಮಂಜುನಾಥ ಸ್ವಾಮಿ, ಕೈಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಆರ್.ಕೆ.ಪಾರ್ಥಸಾರಥಿ, ಉಪ ನಿರ್ದೇಶಕ ಎಂ.ಎಸ್.ಮಹದೇವ್, ಹಿರಿಯ ಸಹಾಯಕ ನಿರ್ದೇಶಕ ಉಮೇಶ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಅರುಣ್ ನಾಯ್ಕ, ಮೈಸೂರಿನ ವಿವಿಧ ಅತೀ ಅಪಾಯಕಾರಿ ಕಾರ್ಖಾನೆಗಳ ಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.





ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಆರ್.ಸೋಮಸುಂದರ್ ಅವರನ್ನು ಮಾಜಿ ಮೇಯರ್ ಎ.ಜೆ. ಅರ್ಜುನ್‌ಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಕೃಷ್ಣ, ವಕೀಲ ಕುಶಾಲ್, ಭೀಮಾನಾಯ್ಡು, ಚಂದ್ರು, ಸುಂದರ್, ನಾಗರಾಜ್, ಸುಬ್ರಹ್ಮಣ್ಯ ಅಭಿನಂದಿಸಿದರು. ಮತ್ತೊಂದು (ಬಲ) ಚಿತ್ರದಲ್ಲಿ ನಿವೃತ್ತ ಡಿವೈಎಸ್‌ಪಿ ವಿಜಯ್ ಕುಮಾರ್, ನಾಗರಾಜ್, ಸೈಯದ್ ಅವರು ಅಭಿನಂದಿಸುತ್ತಿರುವುದನ್ನು ಕಾಣಬಹುದು

ಆನೆ ದಾಳಿಗೆ ಬಲಿಯಾದ ಮಹಿಳೆ ಕುಟುಂಬಕ್ಕೆ ನೆರವು



ಮೈಸೂರು, ಡಿ.31– ಹುಣಸೂರು ತಾಲೂಕು ಚಿಕ್ಕಬೀಚನಹಳ್ಳಿಯಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟ ಮಹಿಳೆ ಮನೆಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರಲ್ಲದೆ, ವೈಯಕ್ತಿಕವಾಗಿ ಧನಸಹಾಯ ಮಾಡಿದರು.

ಡಿ. 30ರಂದು ಬೆಳಿಗ್ಗೆ ಕಣದಲ್ಲಿ ಕೆಲಸ ಮಾಡುತ್ತಿದ್ದ ಚಿಕ್ಕಮ್ಮ ಎಂಬವರ ಮೇಲೆ ಕಾಡಾನೆ ದಾಳಿ ಮಾಡಿ ಸಾಯಿಸಿತ್ತು. ಆಕೆಯ ಪತಿ ಸಿದ್ದೇಗೌಡ ಪ್ರಾಣಾಪಾಯದಿಂದ ಪಾರಾಗಿದ್ದರು. ಈ ವಿಷಯ ತಿಳಿದು ಚಿಕ್ಕಮ್ಮ ಮನೆಗೆ ತೆರಳಿದ ಸುಬ್ರಹ್ಮಣ್ಯ, ಕುಟುಂಬಕ್ಕೆ ಸಾಂತ್ವನ ಹೇಳಿ, ಸರ್ಕಾರದಿಂದ ಪರಿಹಾರ ಕೊಡಿಸಲು ಹೋರಾಟ ನಡೆಸುವುದಾಗಿ ಭರವಸೆ ನೀಡಿದರು.

ಇದೇ ವೇಳೆ ಮಾತನಾಡಿದ ಅವರು, ಕಾಡಾನೆ ದಾಳಿ ಮಾಡಿ ಬಡ ಮಹಿಳೆಯನ್ನು ಕೊಂದಿದೆ ಈ ಹಿಂದೆಯೂ ಹುಣಸೂರಿನಲ್ಲಿ ಹುಲಿ ದಾಳಿಯಿಂದ ವ್ಯಕ್ತಿಯೊಬ್ಬರು ಅಸುನೀಗಿದ್ದರು. ಇಂತಹ ಘಟನೆಗಳು ಆಗಾಗ ನಡೆಯುತ್ತಿದ್ದರೂ ಅರಣ್ಯ ಇಲಾಖೆ ಎಚ್ಚೆತ್ತುಕೊಂಡಿಲ್ಲ. ಮೃತಪಟ್ಟವರಿಗೂ ಸರ್ಕಾರ ಸರಿಯಾಗಿ ಪರಿಹಾರ ಧನ ನೀಡುತ್ತಿಲ್ಲ. ಕಾಟಾಚಾರಕ್ಕೆ ಮಹಜರು ಮಾಡಿ, ಕಡಿಮೆ ಮೊತ್ತದ ಚೆಕ್‌ಗಳನ್ನು ನೀಡಿ ತೇಪೆ ಹಚ್ಚುವ ಕೆಲಸ ಮಾಡಲಾಗುತ್ತಿದೆ ಎಂದು ಕಿಡಿಕಾರಿದರು. ಆನೆ ದಾಳಿಯಿಂದ ಕೇವಲ ಪ್ರಾಣಾಪಾಯ ಮಾತ್ರವಲ್ಲದೆ, ರೈತರು ಬೆಳೆದಿದ್ದ ಫಸಲು ನಾಶವಾಗಿದೆ. ಸಾಲ ಮಾಡಿದ ರೈತರು ಬೆಳೆದ ಫಸಲನ್ನೇ ಕಾಡು ಪ್ರಾಣಿಗಳು ನಾಶಪಡಿಸಿದರೆ ರೈತರ ಬದುಕು ದುಸ್ತರವಾಗುತ್ತದೆ. ಹೀಗಾಗಿ ರಾಜ್ಯ ಸರ್ಕಾರ ಇತ್ತೀಚೆಗೆ ಹೊರಡಿಸಿದ ಆದೇಶದಂತೆ ಪರಿಷ್ಕೃತ ಪರಿಹಾರಧನವನ್ನು ಸಂತ್ರಸ್ತ ಕುಟುಂಬಕ್ಕೆ ನೀಡಬೇಕು. ಈ ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ. ಅವರಿಗೂ ಕೂಡ ಧನಸಹಾಯ ಮಾಡಬೇಕು ಎಂದು ಸುಬ್ರಹ್ಮಣ್ಯ ಆಗ್ರಹಿಸಿದರು.

ಮುಖಂಡ ರವಿ, ಶಿವೇಗೌಡ, ಬೀರೇಶ್, ಮೃತ ಮಹಿಳೆಯ ಪತಿ ಸಿದ್ದೇಗೌಡ, ರಾಮನಹುಂಡಿ ಸುಬ್ಬಣ್ಣ ಹಾಗೂ ಚಿಕ್ಕಬೀಚನಹಳ್ಳಿ ಗ್ರಾಮಸ್ಥರು ಹಾಜರಿದ್ದರು

ಮೈಸೂರು ಒಡೆಯರ್ ಟ್ರೋಫಿ ಪಂದ್ಯಾವಳಿ

ಚೇತನ್ ಭರ್ಜರಿ ಡಬಲ್ ಸೆಂಚುರಿ: ಜೋ ಜೋ ಕ್ರಿಕೆಟ್ ಕ್ಲಬ್‌ಗೆ ಜಯ



ಮೈಸೂರು, ಡಿ.31– ಮೈಸೂರಿನ ಶ್ರೀಜಯ ಚಾಮರಾಜೇಂದ್ರ ಕ್ರಿಕೆಟ್ ಮೈದಾನ(ಎಸ್‌ಜೆಸಿಇ)ದಲ್ಲಿ ನಡೆದ ಮೈಸೂರು ಒಡೆಯರ್ ಟ್ರೋಫಿ ಪಂದ್ಯಾವಳಿಯಲ್ಲಿ ಜವಾಹರ್ಸ್ ಕ್ಲಬ್ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಜೋ ಜೋ ಕ್ರಿಕೆಟ್ ಕ್ಲಬ್ ಇನ್ನಿಂಗ್ಸ್ ಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಜೋ ಜೋ ಕ್ರಿಕೆಟ್ ಕ್ಲಬ್ ಮೊದಲ ಇನ್ನಿಂಗ್ಸ್‌ನಲ್ಲಿ 260 ರನ್‌ಗಳಿಗೆ ಆಲೌಟಾಯಿತು. ಇದಕ್ಕುತ್ತರವಾಗಿ ಪ್ರಥಮ ಇನ್ನಿಂಗ್ಸ್ ಆರಂಭಿಸಿದ ಜವಾಹರ್ಸ್ ಕ್ಲಬ್ ತಂಡ 175 ರನ್‌ಗಳಿಗೆ ಸರ್ವಪತನ ಕಂಡಿತು.

ಮೊದಲ ಇನ್ನಿಂಗ್ಸ್‌ನಲ್ಲಿ 85 ರನ್‌ಗಳ ಇನ್ನಿಂಗ್ಸ್ ಮುನ್ನಡೆಯೊಂದಿಗೆ 2ನೇ ಇನ್ನಿಂಗ್ಸ್ ಆರಂಭಿಸಿದ ಜೋ ಜೋ ಕ್ರಿಕೆಟ್ ಕ್ಲಬ್ 1 ವಿಕೆಟ್ ನಷ್ಟಕ್ಕೆ 303 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಎಲ್.ಆರ್.ಚೇತನ್ 86 ಎಸೆತಗಳಲ್ಲಿ 23 ಭರ್ಜರಿ ಸಿಕ್ಸರ್, 14 ಬೌಂಡರಿ ಒಳಗೊಂಡ ಬಿರುಸಿನ 221 ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ ದಾಖಲೆ ನಿರ್ಮಿಸಿದರು. ಇವರಿಗೆ ಉತ್ತಮ ಸಾಥ್ ನೀಡಿದ ಕೆ.ಎಸ್.ಲಂಕೇಶ್ 33, ಎಸ್.ಹರ್ಷಿತ್ 38ರನ್ ಗಳಿಸಿದರು. ಪಂದ್ಯ ಕೇವಲ 2 ದಿನ ನಡೆಯುವ ಹಿನ್ನೆಲೆಯಲ್ಲಿ ಮೊದಲ ಇನ್ನಿಂಗ್ಸ್‌ನಲ್ಲಿ 85 ರನ್‌ಗಳ ಮುನ್ನಡೆ ಪಡೆದ ಜೋ ಜೋ ಕ್ರಿಕೆಟ್ ಕ್ಲಬ್ ತಂಡ ಜಯ ಸಾಧಿಸಿತು.

ಎನ್‌ಆರ್ ಕ್ಷೇತ್ರದಲ್ಲಿ ಜೆಡಿಎಸ್ ಆಕಾಂಕ್ಷಿಗಳಿಂದ ಅರ್ಜಿ ಸ್ವೀಕಾರ



ಮೈಸೂರು, ಡಿ.31(ಎಂಕೆ)– ಮುಂಬರುವ 2023ರ ವಿಧಾನಸಭಾ ಚುನಾವಣೆ ಹಿನ್ನೆಲೆ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಆಕಾಂಕ್ಷಿಗಳಿಂದ ಶನಿವಾರ ಅರ್ಜಿ ಸ್ವೀಕರಿಸಲಾಯಿತು.

ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಎನ್.ಆರ್. ಕ್ಷೇತ್ರದ ಜೆಡಿಎಸ್ ಆಕಾಂಕ್ಷಿಗಳಾದ ಅಬ್ದುಲ್ ಅಜೀಜ್, ಅಬ್ದುಲ್ ಖಾದರ್ ಶಾಹೀದ್ ಚುನಾವಣಾ ಟಿಕೆಟ್ ಆಕಾಂಕ್ಷಿಗಳಾಗಿ ಅರ್ಜಿ ಸಲ್ಲಿಸಿದರು. ಅಬ್ದುಲ್ ಅಜೀಜ್ ಪರವಾಗಿ ಅನಿಲ್ ಕುಮಾರ್ ಅರ್ಜಿ ಸಲ್ಲಿಸಿದರೆ, ನೂತನ ಆಕಾಂಕ್ಷಿಯಾಗಿ ಅಬ್ದುಲ್ ಖಾದರ್ ಶಾಹೀದ್ ಅರ್ಜಿ ಸಲ್ಲಿಸಿದರು.

ಬಳಿಕ ಮಾತನಾಡಿದ ಅಬ್ದುಲ್ ಖಾದರ್ ಶಾಹೀದ್, ರಾಜ್ಯದಲ್ಲಿ ಜೆಡಿಎಸ್ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿಯವರು ಹಗಲಿರುಳು ಶ್ರಮಿಸುತ್ತಿದ್ದಾರೆ. ಜೆಡಿಎಸ್ ಪಂಚರತ್ನ ಕಾರ್ಯಕ್ರಮಕ್ಕೆ ರಾಜ್ಯದೆಲ್ಲೆಡೆ ಜನಮನ್ನಣೆ ದೊರೆತಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿಯವರು ಮತ್ತೆ ಮುಖ್ಯಮಂತ್ರಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಜನರ ಮಧ್ಯೆ ಗುರ್ತಿಸಿ ಕೊಂಡಿರುವ ನನಗೆ ಅವಕಾಶ ನೀಡಿದರೆ, ಎನ್.ಆರ್.ಕ್ಷೇತ್ರದಲ್ಲಿ ಜೆಡಿಎಸ್ ಬಾವುಟ ಹಾರಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜ.2ಕ್ಕೆ ಅಂತಿಮ ನಿರ್ಧಾರ: ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸೇರಿದಂತೆ ಜಿಲ್ಲಾ ನಾಯಕರ ಸಮ್ಮುಖದಲ್ಲಿ ಜ.2ರಂದು ಎನ್. ಆರ್.ಕ್ಷೇತ್ರದ ಅಭ್ಯರ್ಥಿ ಘೋಷಣೆಯಾಗಲಿದೆ. ಪಕ್ಷದಿಂದ ಯಾರಿಗೆ ಟಿಕೆಟ್ ನೀಡಿದರೂ ಅವರ ಗೆಲುವಿಗಾಗಿ ಕಾರ್ಯಕರ್ತರೆಲ್ಲರು ಕೆಲಸ ಮಾಡಬೇಕು ಎಂಬ ಮಾತುಗಳು ಈ ವೇಳೆ ವ್ಯಕ್ತವಾದವು. ಜೆಡಿಎಸ್ ಎನ್.ಆರ್. ಕ್ಷೇತ್ರದ ಅಧ್ಯಕ್ಷ ಎಂ.ಎನ್.ರಾಮು, ನಜೀರ್ ಸಾಬ್ ಬ್ಲಾಕ್ ಅಧ್ಯಕ್ಷ ರಿಜ್ವಾನ್, ಚಾಮರಾಜ ಕ್ಷೇತ್ರದ ಅಧ್ಯಕ್ಷ ಮಂಜಣ್ಣ, ಮುಖಂಡರಾದ ಬಾಬು, ಸೈಯದ್ ಸಲೀಂ ಮತ್ತಿತರರಿದ್ದರು.

ಮಾಜಿ ಪೋಪ್ ಬೆನೆಡಿಕ್ಟ್–XVI ನಿಧನ



ವ್ಯಾಟಿಕನ್ ಸಿಟಿ, ಡಿ.31– 2013ರಲ್ಲಿ ಮಧ್ಯಯುಗದ ನಂತರ ಕ್ಯಾಥೋಲಿಕ್ ಚರ್ಚ್‌ನ ಮುಖ್ಯಸ್ಥ ಸ್ಥಾನಕ್ಕೆ ರಾಜೀನಾಮೆ ನೀಡಿದ ಮೊದಲ ಧರ್ಮಗುರು, ಮಾಜಿ ಪೋಪ್ ಬೆನೆಡಿಕ್ಟ್–XVI ಅವರು ಶನಿವಾರ 95ನೇ ವಯಸ್ಸಿನಲ್ಲಿ ನಿಧನರಾದರು ಎಂದು ವ್ಯಾಟಿಕನ್ ಘೋಷಿಸಿದೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಬೆನೆಡಿಕ್ಟ್–XVI ಅವರು ವ್ಯಾಟಿಕನ್‌ನ ಮೇಟರ್ ಎಕ್ಲೆಸೀಯೆ ಮಾನಸ್ಟರಿಯಲ್ಲಿ ಇಂದು ಬೆಳಗ್ಗೆ 9.40ಕ್ಕೆ ನಿಧನರಾದರು ಎಂದು ದುಃಖದೊಂದಿಗೆ ನಿಮಗೆ ತಿಳಿಸುತ್ತಿದ್ದೇನೆ. ಹೆಚ್ಚಿನ ಮಾಹಿತಿಯನ್ನು ಸಾಧ್ಯವಾದಷ್ಟು ಬೇಗನೆ ನೀಡಲಾಗುವುದು" ಎಂದು ವ್ಯಾಟಿಕನ್ ವಕ್ತಾರ ಮ್ಯಾಟಿಯೊ ಬ್ರೂನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿಶ್ರಾಂತ ಪೋಪ್ ಬೆನೆಡಿಕ್ಟ್ ಅವರ ಪಾರ್ಥಿವ ಶರೀರವನ್ನು ಜನವರಿ 2ರಿಂದ ಸೇಂಟ್ ಪೀಟರ್ಸ್ ಬೆಸಿಲಿಯಾದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗುತ್ತದೆ ಎಂದು ವ್ಯಾಟಿಕನ್ ತಿಳಿಸಿದೆ. ಜರ್ಮನಿಯವರಾದ ಪೋಪ್ ಎಮೆರಿಟಸ್ ಬೆನೆಡಿಕ್ಟ್ ಅವರ ಮೂಲ ಹೆಸರು ಜೋಸೆಫ್ ರಟ್ಜಿಂಗರ್ ಆಗಿದ್ದು, ಫೆಬ್ರವರಿ 2013ರಲ್ಲಿ ಅನಾರೋಗ್ಯದ ಕಾರಣ ನೀಡಿ ಬೆನೆಡಿಕ್ಟ್ ಅವರು ಪೋಪ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಮಕ್ಕಳಿಗೆ ಕಲಿಸುವ ಸಂಸ್ಕಾರ ದೊಡ್ಡವರಾದ ಮೇಲೆ ಪ್ರತಿಬಿಂಬಿಸುತ್ತಿದೆ

ರಾಜ್ಯಮಟ್ಟದ ಚಿಣ್ಣರ ಸಂಗೀತೋತ್ಸವದಲ್ಲಿ ಶಂಕರ ಹಲಗತ್ತಿ



ಮೈಸೂರು, ಡಿ.31(ಎಸ್‌ಪಿಎನ್)– ತಮ್ಮ ಮಕ್ಕಳು ಚೆನ್ನಾಗಿ ಓದಲಿ, ವಿದೇಶದಲ್ಲಿ ನೌಕರಿ ಮಾಡಲಿ ಎನ್ನುವ ಮನಸ್ಥಿತಿ ಹೊಂದಿರುವ ಪೋಷಕರಿಗೆ, ಮುಂದೊಂದು ದಿನ ತಾವೇ ಒಬ್ಬಂಟಿಯಾಗಿ ಜೀವನ ಕಟ್ಟಿಕೊಳ್ಳಬೇಕು ಎಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಆತಂಕ ವ್ಯಕ್ತಪಡಿಸಿದರು.

ಮೈಸೂರು ಕುವೆಂಪುನಗರ ಆದಿಚುಂಚನಗಿರಿ ರಸ್ತೆಯ ಗಾನಭಾರತೀ ಸಭಾಂಗಣದಲ್ಲಿ ಮೈಸೂರಿನ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ, ಧಾರಾವಾಡದ ಕರ್ನಾಟಕ ಬಾಲವಿಕಾಸ ಅಕಾಡೆಮಿ ಸಹಯೋಗದೊಂದಿಗೆ ಏರ್ಪಡಿಸಿದ್ದ ರಾಜ್ಯಮಟ್ಟದ ಚಿಣ್ಣರ ಸಂಗೀತೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು, ಮಾತನಾಡಿದರು.

ಚಿಕ್ಕ ವಯಸ್ಸಿನಿಂದ ತಮ್ಮ ಮಕ್ಕಳಿಗೆ ಯಾವ ರೀತಿಯ ಸಂಸ್ಕಾರ ಕೊಡುತ್ತೇವೆಯೋ ದೊಡ್ಡವರಾದ ಮೇಲೆ ಅದು ತಮ್ಮ ಮಕ್ಕಳಲ್ಲಿ ಪ್ರತಿಬಿಂಬಿಸುತ್ತದೆ. ಉದಾಹರಣೆಗೆ ನಮ್ಮ ಪರಿಚಯವಿದ್ದ ಪಿಟೀಲು ವಾದಕರೊಬ್ಬರು, ತಮ್ಮ ಮಗನನ್ನು ತಾವು ಭಾಗ ವಹಿಸಿದ್ದ ಸಂಗೀತ ಕಛೇರಿಗಳಿಗೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಆ ಹುಡುಗ ಈಗ ಉತ್ತಮ ಪಿಟೀಲು ವಾದಕನಾಗಿದ್ದಾನೆ ಎಂದು ತಿಳಿಸಿದರು.

ಭೀಮಾಶಂಕರ ಬಿದನೂರ ಅವರು ಶ್ರೀ ಗುರು ಪುಟ್ಟರಾಜ ಸಂಗೀತ ಸಭಾದ ಮೂಲಕ ಮೈಸೂರಿನಲ್ಲಿ ರಾಜ್ಯಮಟ್ಟದ ಚಿಣ್ಣರ ಸಂಗೀತೋತ್ಸವ ಆಯೋಜಿಸಿ, ಮಕ್ಕಳ ಪ್ರತಿಭೆಗೆ ಉತ್ತಮ ವೇದಿಕೆ ನೀಡಿದ್ದಾರೆ ಎಂದ ಅವರು, ಚಿಕ್ಕವಯಸ್ಸಿನಿಂದ ಮದುವೆ ಆಗುವವರೆಗೂ ಪೋಷಕರು ಮನೆಯಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದರೆ, ಅಂತಹ ಮಕ್ಕಳು ವೃದ್ಧಾಪ್ಯದಲ್ಲಿ ತಮ್ಮ ತಂದೆ ತಾಯಿಗಳನ್ನು ಪ್ರೀತಿಯಿಂದ ನೋಡಿಕೊಳ್ಳುವ ಗುಣ ಬೆಳಸಿಕೊಳ್ಳುತ್ತಾರೆ ಎಂದರು.

ಇತ್ತೀಚೆಗೆ ನಗರ ಪ್ರದೇಶದಲ್ಲಿ ಪ್ರಾಧ್ಯಾಪಕರು, ವೈದ್ಯರು ಸೇರಿದಂತೆ ಉನ್ನತ ಹುದ್ದೆಯಲ್ಲಿರುವವರು, ತಮ್ಮ ಮಕ್ಕಳನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಾರೆ, ಚೆನ್ನಾಗಿ ಓದಿಸುತ್ತಾರೆ. ಅವರು ವಿದೇಶದಲ್ಲಿ ವ್ಯಾಸಂಗ ಮಾಡುತ್ತೇನೆ ಅಂದರೆ ಚಾಚುತಪ್ಪದೇ ಅದಕ್ಕೂ ಬೆಂಬಲ ನೀಡುತ್ತಾರೆ. ನಂತರ ಅಲ್ಲೇ ಕೆಲಸಕ್ಕೆ ಸೇರುತ್ತೇನೆ ಎಂದರೆ, ಹಿಂದು–ಮುಂದು ಯೋಚನೆ ಮಾಡದೇ ಅದಕ್ಕೂ ಪೋಷಕರು ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ಆದರೆ, ಆ ಸಂತೋಷ ಕೆಲವೇ ವರ್ಷಗಳವರೆಗೆ ಮಾತ್ರ ಎಂಬುದನ್ನು ವೃದ್ಧ ತಂದೆ–ತಾಯಿ ಯೋಚನೆ ಮಾಡಿರುವುದಿಲ್ಲ ಎಂದರು.

ಮುಂದೆ ಅವರ(ತಂದೆ–ತಾಯಿಗಳಿಗೆ) ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೂ ಮಕ್ಕಳು ಬೇರೆ ಬೇರೆ ಕಾರಣಗಳಿಗೆ ವಿದೇಶದಿಂದ ಸ್ವದೇಶಕ್ಕೆ ಬರಲು ಒಪ್ಪುವುದಿಲ್ಲ. ಕೊನೆಗೆ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸಿ ಬಿಡುತ್ತಾರೆ. ಇದು ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿರುವ ಸಂಗತಿಯಾಗಿದೆ. ನಾನು ಕಂಡಂತೆ ಹುಬ್ಬಳ್ಳಿ–ಧಾರಾವಾಡದಲ್ಲಿ ಮೊದಲು ಒಂದು ವೃದ್ಧಾಶ್ರಮಗಳಿರಲಿಲ್ಲ. ಈಗ ನಾಲ್ಕು ವೃದ್ಧಾಶ್ರಮಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದರು.

ಧಾರವಾಡದ ಜಿ.ಸಾತ್ವಿಕರಿಂದ ವಯೋಲಿನ್ ವಾದನ, ಸ್ವರ ಸಾಧನ ಸಂಗೀತ ಅಕಾಡೆಮಿಯ ಡಾ.ಸಂಧ್ಯಾ ಭಟ್ಟರ ಅಭಿನಂದನ ಎಸ್.ಗವಿಮಠ, ಅಭಿಕ್ ಕೆ.ಅತ್ರೆಯ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಸೇರಿದಂತೆ ಇತರೆ ಮಟಾಣಿಗಳಿಂದ ವಚನಗಾಯನ, ಸ್ಯಾಕ್ಸೋಫೋನ್ ವಾದನ, ಸಮೂಹ ತಬಲಾವಾದನ, ದೇವರನಾಮ, ಭರತನಾಟ್ಯ, ಜಾನಪದ ನೃತ್ಯ, ತಾಳವಾದ್ಯ, ವಾದ್ಯ ಸಹಕಾರ ತಬಲಾ, ಡೋಲ್, ಹಾರ್ಮೋನಿಯಂ ಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸಿದ್ದರು. ಈ ವೇಳೆ ಪಾಂಡುವಪುರ ಗ್ರಾಮರಂಗ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷ ನಾಗಲಿಂಗೇಗೌಡ, ಜಿ.ಎನ್.ಮಂಜುನಾಥ್ ಉಪಸ್ಥಿತರಿದ್ದರು.



ಹೊಸ ವರ್ಷ... ಹೊಸ ಸಂಕಲ್ಪ

ಹೊಸ ವರ್ಷ ಹೊಸತನಕ್ಕೆ ನಾಂದಿ ಹಾಡುವುದಂತೂ ಸತ್ಯ. ಪ್ರಕೃತಿಯ ಬದಲಾವಣೆ ಮನುಷ್ಯನ ಮೇಲೆ ಪ್ರಭಾವ ಬೀರುವುದೂ ಅಷ್ಟೇ ಸತ್ಯ ಅಂತಹ ಸಂದರ್ಭದಲ್ಲಿ ನಾವು ಸರಿಯಾದ ನಿರ್ಣಯವನ್ನೇ ತೆಗೆದುಕೊಳ್ಳಬೇಕು. ಹೊಸ ವರ್ಷ ಅಂದರೆ ಅದು ಹೃದಯಕ್ಕೆ ಸಂಬಂಧಿಸಿದ್ದು; ಅಂತಃಕರಣಕ್ಕೆ ಸಂಬಂಧಿಸಿದ್ದು. ನಮ್ಮ ಚೈತನ್ಯ ಹೊಸ ಉತ್ಸಾಹವನ್ನು ಪಡೆಯಬೇಕು; ಹೊಸ ಶಕ್ತಿಯನ್ನು ತಳೆಯಬೇಕು. ಮಾನಸಿಕವಾಗಿ ಅನುಪಯುಕ್ತವಾದುದನ್ನೂ, ಮಾಸಲಾದುದನ್ನೂ, ಹಳೆಯದನ್ನೂ ಕಳೆದುಕೊಂಡು ಹೊಸತನ್ನೂ, ಉಪಯುಕ್ತವಾದುದನ್ನೂ, ಪ್ರಕಾಶಮಾನವಾದುದನ್ನೂ ಪಡೆಯಲು ಸಿದ್ಧವಾಗಬೇಕು. ಹೃದಯದಲ್ಲಿ ಪ್ರೀತಿ-ವಿಶ್ವಾಸಗಳು ಉಕ್ಕಬೇಕು. ಸತ್ಪಾತ್ರರಲ್ಲಿ ಕರುಣೆಯ ಸಂಭ್ರಮ ಚೆಲ್ಲಬೇಕು.



ಗ.ನಾ.ಭಟ್ಟ ಮೊ.9019376365



ಹೊಸ ವರ್ಷ ಆರಂಭವಾಯ್ತು. ಹೀಗೇ ಕಾಲಚಕ್ರ ಉರುಳುತ್ತಲೇ ಇದೆ. ಕಾಲದ ಗಣನೆಯ ದೃಷ್ಟಿಯಿಂದ ಇದೊಂದು ಹೊಸ ವರ್ಷದ ಸಂಕೇತವಾಗಿರಬಹುದು. ತಿಂಗಳು, ದಿನಾಂಕ, ತಿಥಿ, ವಾರ, ನಕ್ಷತ್ರ ಎಲ್ಲವೂ ಬದಲಾಗಬಹುದು. ಅದೊಂದು ಸಂಪ್ರದಾಯದ ಆಚರಣೆಯ ಭಾಗವಾಗಿರಬಹುದು. ಅದು ಪ್ರಕೃತಿಯ ಬದಲಾವಣೆಯನ್ನು ಸೂಚಿಸಬಹುದು. ಆದರೆ ಅವುಗಳ ಹೊರತಾಗಿಯೂ ಇನ್ನೇನಾದರೂ ಬದಲಾವಣೆಯಿದೆಯೇ ಎಂದು ಪ್ರಶ್ನಿಸಿಕೊಂಡರೆ ಖಂಡಿತಕ್ಕೂ ಇದೆ ಎಂದೇ ಹೇಳಬೇಕಾಗುತ್ತದೆ. ಅದು ತುಂಬಾ ಯೋಚಿಸಬೇಕಾದ ವಿಚಾರ!

ಮಲಗುವಾಗ ಹಳೆಯ ವರ್ಷ; ಏಳುವಾಗ ಹೊಸ ವರ್ಷ. ಮನಸ್ಸಿನ ಸ್ಥಿತಿಯೊಂದನ್ನು ಬಿಟ್ಟರೆ ಬೇರೇನು ವ್ಯತ್ಯಾಸವಿದೆ ಇದರಲ್ಲಿ. ಆ ಸ್ಥಿತಿಯಾದರೂ ನಾವೇ ತಂದುಕೊಳ್ಳುವುದಲ್ಲವೆ, ಕೆಲವರು ಅದನ್ನೂ ತಂದುಕೊಳ್ಳುವುದಿಲ್ಲ. ನಾವು ಲೋಕವನ್ನು ಹೇಗೆ ನೋಡುತ್ತೇವೋ ಹಾಗೆ ಅದು ಕಾಣುತ್ತದೆ. ಅದು ನಮ್ಮ ಸಂಸ್ಕಾರ, ಅಭಿರುಚಿ, ಸಂಪ್ರದಾಯ, ವಿದ್ಯೆ, ಬುದ್ಧಿ, ಓದು, ಮನೆಯ ಹಿನ್ನೆಲೆ, ನಾವು ಬೆಳೆದು ಬಂದ ಪರಿಸರ ಇವೇ ಮೊದಲಾದುವನ್ನು ಆಶ್ರಯಿಸಿರುತ್ತದೆ. ಕೆಲವರ ಪಾಲಿಗೆ ಬದುಕು ಉತ್ಸಾಹದ ಹೊಳೆಯಾಗಿರಬಹುದು; ಇನ್ನು ಕೆಲವರ ಪಾಲಿಗೆ ವಿಷಾದಗಳ ನೆಲೆಯಾಗಿರಬಹುದು.

'ವರುಷ ಹೋಯಿತು; ವರುಷ ಬಂದಿತು; ಹರುಷ ಬಾರದು' ಎಂದು ಕವಿಯೊಬ್ಬ ಹಾಡಿದ್ದು ಇಲ್ಲಿ ಗಮನಾರ್ಹ. ಆದರೆ ಕವಿಯ ಈ ಮಾತನ್ನು ಪೂರ್ಣ ಒಪ್ಪಿಕೊಳ್ಳಬೇಕೆಂದೇನೂ ಇಲ್ಲ. ಬದುಕನ್ನು ಹರ್ಷವಾಗಿಸಿಕೊಳ್ಳುವುದು, ಚೆಲುವಾಗಿಸಿಕೊಳ್ಳುವುದು, ಸಂತೋಷವಾಗಿಸಿಕೊಳ್ಳುವುದು, ಆನಂದಮಯವಾಗಿಸಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಅದು ಕೆಲವರಿಗೆ ಗೊತ್ತಿಲ್ಲ ಅಷ್ಟೇ!

ನಮ್ಮಲ್ಲಿ ಕೆಲವರು ಒಂದು ಸುಂದರವಾದ, ಘನವಾದ ವ್ಯಕ್ತಿತ್ವವನ್ನೇ ಬೆಳೆಸಿಕೊಂಡಿರುವುದಿಲ್ಲ. ಒಂದು ಆಹ್ಲಾದಕರ, ಆಕರ್ಷಕ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದೇ ಬದುಕನ್ನು ಚೆಲುವಾಗಿಸಿಕೊಳ್ಳುವ, ಹರ್ಷವಾಗಿಸಿಕೊಳ್ಳುವ, ನವೀಕರಿಸಿಕೊಳ್ಳುವ, ಹೊಸದಕ್ಕೆ ಸಂಕಲ್ಪ ತೊಡುವ ಮೊದಲನೇ ಮೆಟ್ಟಿಲು ಅಂತ ಹೇಳಬಹುದು. ಅದು ಸಾಧ್ಯವಾಗುವುದು ನಾವು ಮಾನಸಿಕವಾಗಿ ಹಳತೆಲ್ಲವನ್ನೂ ಕಳೆದುಕೊಂಡು ಹೊಸತನ್ನು ಸ್ವೀಕರಿಸಲು ಮುಂದಾದಾಗ ಮಾತ್ರ. ಕೆಲವರಂತೂ ಜಗಳ, ದ್ವೇಷ, ಸೇಡು, ಜಿಪುಣತನ, ವಿಕೃತಿ, ಜಾಡ್ಯ, ನಿರುತ್ಸಾಹ, ಚಾಡಿ ಹೇಳುವುದು, ಸದಾ ಋಣಾತ್ಮಕ ಚಿಂತನೆಯಲ್ಲಿ ಇರುವುದು, ಸುಳ್ಳು ಹೇಳುವುದು, ಅಪ್ರಾಮಾಣಿಕವಾಗಿ ನಡೆದುಕೊಳ್ಳುವುದು, ಆತ್ಮೀಯರಲ್ಲೂ ಹೇಳಬೇಕಾದ ವಿಷಯವನ್ನು ಮುಚ್ಚಿಡುವುದು-ಇವೇ ಮೊದಲಾದ ದುರ್ಗುಣಗಳನ್ನೂ, ನ್ಯೂನತೆಗಳನ್ನೂ, ದೋಷಗಳನ್ನೂ ಆವಾಹಿಸಿಕೊಂಡಿರುತ್ತಾರೆ. ಅವುಗಳ ಜಾಗದಲ್ಲಿ ಪ್ರೀತಿ, ಸ್ನೇಹ, ದಯೆ, ಅಂತಃಕರಣ, ಔದಾರ್ಯ, ಸಂಸ್ಕೃತಿ, ಉತ್ಸಾಹ, ಧನಾತ್ಮಕ ಚಿಂತನೆ, ಸತ್ಯವನ್ನು ನುಡಿಯುವುದು, ಪ್ರಾಮಾಣಿಕವಾಗಿ ನಡೆದುಕೊಳ್ಳುವುದು- ಇವೇ ಮೊದಲಾದುವನ್ನು ರೂಢಿಸಿಕೊಂಡರೆ, ಅವನ್ನು ನೆಲೆಗೊಳಿಸಿಕೊಂಡರೆ ಖಂಡಿತಕ್ಕೂ ಅದೇ ಒಂದು ಘನವಾದ, ಆಕರ್ಷಕವಾದ ವ್ಯಕ್ತಿತ್ವವಾಗಿ ಪರಿಣಮಿಸುತ್ತದೆ.



/ಚಿತ್ರ: ಲಕ್ಷ್ಮಿನಾರಾಯಣ ಯಾದವ್

ವ್ಯಕ್ತಿತ್ವವೆಂದರೆ ವ್ಯಕ್ತಿ ಪ್ರಭಾವ ಎಂದು ಅರ್ಥ. ಅದನ್ನು ಇಂಗ್ಲಿಷಲ್ಲಿ 'Personality' ಎಂದು ಕರೆಯುತ್ತಾರೆ. ಅದು ಬರಿಯ ವ್ಯಕ್ತಿತ್ವವಲ್ಲ. ಅದೊಂದು ಪ್ರತ್ಯೇಕವಾದ ಅಸ್ತಿತ್ವ- ಪ್ರತ್ಯೇಕವಾದ ಗುರುತು. ಇವನೂ ಒಬ್ಬನೆಂದು ಬೇರೆಯಾಗಿ ಲೆಕ್ಕಕ್ಕೆ ಸಿಗುವ ಸ್ಥಿತಿ. ಕುಂಟನಿಗೂ, ಕುರುಡನಿಗೂ ಕುರೂಪಿಗೂ ಅಂತಹ ಅಸ್ತಿತ್ವವುಂಟು. ಜನಗಣತಿಗೆ ಅಂತಹವರೂ ಸಿಗುತ್ತಾರೆ. ಆದರೆ ನಮಗೆ ಬೇಕಿರುವುದು ಅಂತಹ ವ್ಯಕ್ತಿಗಣನೆಗಿಂತ ಹೆಚ್ಚಿನದಾದ ಒಂದು ಗುಣಸಂಪತ್ತು. ಅದು ಸುಮ್‌ಸುಮ್ಮನೆ ಬರುವುದಿಲ್ಲ.

ವ್ಯಕ್ತಿಪ್ರಭಾವದಲ್ಲಿ 'ಆತ್ಮವಿಶ್ವಾಸ' ಅನ್ನುವುದು ಒಂದು. ನಮ್ಮಲ್ಲಿ ಅನೇಕರಿಗೆ 'ಆತ್ಮವಿಶ್ವಾಸ' ಅನ್ನುವುದೇ ಇರುವುದಿಲ್ಲ. ಹಾಗಾದರೆ ಆ ಆತ್ಮವಿಶ್ವಾಸ ಹೇಗೆ ಬರುತ್ತದೆ. ಯಾವುದೇ ಒಂದು ಕೆಲಸವನ್ನು ಸರಿಯಾಗಿ, ಸಮರ್ಪಕವಾಗಿ, ಅಂದವಾಗಿ, ಅಚ್ಚುಕಟ್ಟಾಗಿ ಮಾಡಿದಾಗ ಮಾತ್ರ ಅದು ಬರುತ್ತದೆ. ಈಜು ಬಾರದವನು ಈಜನ್ನು ಕಲಿತಾಗ, ಅಡಿಗೆಯಲ್ಲಿ ಯಾವುದೋ ಒಂದು ವ್ಯಂಜನವನ್ನೋ ಅಥವಾ ಪದಾರ್ಥವನ್ನೋ ಸರಿಯಾಗಿ ಮಾಡುವುದನ್ನು ಕಲಿತಾಗ, ಡ್ರೈವಿಂಗ್ ಗೊತ್ತಿಲ್ಲದವನು ಸರಿಯಾಗಿ ಡ್ರೈವಿಂಗ್ ಕಲಿತಾಗ, ಅಂಚೆ ಕಚೇರಿ, ಬ್ಯಾಂಕಿಂಗ್ ವ್ಯವಹಾರಗಳನ್ನು ತಪ್ಪಿಲ್ಲದಂತೆ ಮಾಡುವುದನ್ನು ಕಲಿತುಕೊಂಡಾಗ, ಸಂಚಾರಿ ನಿಯಮವನ್ನು ಸಂದೇಹಕ್ಕೆಡೆಯಿಲ್ಲದಂತೆ ತಿಳಿದುಕೊಂಡಾಗ ಮತ್ತು ಅವನ್ನು ಪಾಲಿಸಿದಾಗ, ವಿಷಯದ ಮೇಲೆ ಪ್ರಭುತ್ವ ಹೊಂದಿ ತನ್ಮಯತೆಯಿಂದ ಪಾಠ ಮಾಡುವುದನ್ನು ಅರಿತುಕೊಂಡಾಗ ಅವೆಲ್ಲವೂ ತಾನಾಗಿ ಬರುತ್ತವೆ. ಇವೆಲ್ಲವೂ ಆತ್ಮವಿಶ್ವಾಸದ ಸೋಪಾನಗಳು. ತನ್ಮಯತೆಯಿಂದ ಪಾಠ ಮಾಡುವ ಒಬ್ಬ ಉಪಾಧ್ಯಾಯನನ್ನೂ, ಗಮನವಿಟ್ಟು ವಾಹನ ಓಡಿಸುವ ಒಬ್ಬ ಚಾಲಕನನ್ನೂ, ಚೆನ್ನಾಗಿ ನರ್ತಿಸುವ ಒಬ್ಬ ಕಲಾವಿದನನ್ನೋ, ಕಲಾವಿದೆಯನ್ನೋ ನೋಡಿ. ಅವರ ಮುಖದಲ್ಲಿ ಎಂತಹ ಆತ್ಮವಿಶ್ವಾಸ ಮಿನುಗುತ್ತಿರುತ್ತದೆ. ಕೆಲಸ ಕಲಿಯುವುದರೊಂದಿಗೇ ಆತ್ಮವಿಶ್ವಾಸ ಬೆಳೆಯುತ್ತಿರುತ್ತದೆ. ಅದನ್ನು ನಾವು ಸಂಪಾದಿಸಬೇಕು.

ಎಷ್ಟೋ ಮಂದಿ ಒಳ್ಳೆಯ ಚಿಂತಕರಾಗಿರುತ್ತಾರೆ. ಅವರಲ್ಲಿ ಒಳ್ಳೊಳ್ಳೆಯ ಚಿಂತನೆಗಳೂ, ವಿಚಾರಗಳೂ ಇರುತ್ತವೆ. ಆದರೆ ನಾಲ್ಕು ಮಂದಿಯ ಸಮ್ಮುಖದಲ್ಲಿ ಅದನ್ನು ಪ್ರತಿಪಾದಿಸಲು ಅವರ ನಾಲಗೆ ಏಳುವುದಿಲ್ಲ. ಏನೋ ಭಯ, ಏನೋ ಅಳುಕು ಅವರನ್ನು ಕಾಡುತ್ತಿರುತ್ತದೆ. ಆತ್ಮವಿಶ್ವಾಸ ಸಾಕಾಗುವುದಿಲ್ಲ. ಅದಕ್ಕೆ- ವಿಷಯವನ್ನು ಸರಿಯಾಗಿ ತಿಳಿಯದಿರುವುದೇ ಕಾರಣ ಅಥವಾ ಅದನ್ನು ಸ್ಪಷ್ಟವಾಗಿ ಮಂಡಿಸಲು ಬೇಕಾಗುವ ಭಾಷಾ ಸಂಪತ್ತು, ಉಚಿತವಾದ ಶಬ್ದಗಳ ಕೊರತೆ ಆಗಿರಬಹುದು. ಅದನ್ನು ನೀಗಿಸುವುದಕ್ಕೆ ಆತ ಅಥವಾ ಅವಳು ತಾನು ಮಂಡಿಸಲಿರುವ ವಿಷಯವನ್ನು ಕುರಿತು ಸದಾ ಚಿಂತಿಸಬೇಕಾಗುತ್ತದೆ. ಒಳ್ಳೊಳ್ಳೆಯ ಭಾಷಣಕಾರರ, ಉತ್ತಮ ವಾಗ್ಮಿಗಳ ಭಾಷಣವನ್ನು ಕೇಳಬೇಕಾಗುತ್ತದೆ. ಅದಕ್ಕಾಗಿ ಸಭೆ-ಸಮಾರಂಭಗಳಿಗೆ ಹೋಗುವುದನ್ನು ರೂಢಿಸಿಕೊಳ್ಳಬೇಕು.

ನಮ್ಮಲ್ಲಿ ಬಹುಮಂದಿಗೆ ಸಭೆ-ಸಮಾರಂಭಗಳೆಂದರೆ ಅಲರ್ಜಿ. ಅಪ್ಪಿತಪ್ಪಿಯೂ ಅವರು ಆ ಕಡೆಗೆ ಮುಖ ಹಾಕುವುದಿಲ್ಲ. ಅವರು- ಇವರು ಬೇಡ. ಯಾರಿಗೆ ಮಾತೇ ಬಂಡವಾಳವಾಗಿರುವುದೋ, ಬುದ್ಧಿಶಕ್ತಿಯೇ ಪ್ರಧಾನವಾಗಿರುವುದೋ, ಭಾಷೆಯೇ ಜೀವನಾಡಿಯಾಗಿರುವುದೋ, ಪುಸ್ತಕಗಳೇ ಜ್ಞಾನಸಂಪತ್ತಿನ ಸಾಧನವಾಗಿರುವುದೋ ಅಂತಹ ಶಿಕ್ಷಕರೇ ಅತ್ಯುತ್ತಮ ಸಭೆ-ಸಮಾರಂಭಗಳನ್ನು ನೋಡಿರುವುದಿಲ್ಲ. ಅವರು ನೋಡಿರುವುದು ಅವರ ಶಾಲೆಯಲ್ಲೇ ನಡೆಯುವ ಅವರ ಬಾಲ್ಯದಿಂದ ಅವರ ಮೊಮ್ಮಕ್ಕಳವರೆಗೂ ಕೇಳುತ್ತಿದ್ದ ಅದೇ ಚರ್ವಿತಚರ್ವಣ ಭಾಷಣದ ಗಾಂಧಿ ಜಯಂತಿ, ಇಂಡಿಪೆಂಡೆನ್ಸ್ ಡೇ, ರಿಪಬ್ಲಿಕ್ ಡೇ, ಸರಕಾರಿ ಸುತ್ತೋಲೆ ಆಚರಿಸಲು ಸೂಚಿಸಿದ ಕನಕದಾಸ ಜಯಂತಿ, ವಾಲ್ಮೀಕಿ ಜಯಂತಿಯಂತಹ ಕಾರ್ಯಕ್ರಮಗಳು ಮಾತ್ರ ಇಂತಹವರಿಂದ ಏನು ತಾನೇ ನಿರೀಕ್ಷಿಸಲು ಸಾಧ್ಯ ಹೇಳಿ.

ಸಾಧ್ಯವಿದೆ. ನಾವು 'Branch Out' ಆದಾಗ ಮಾತ್ರ. 'ಬ್ರ್ಯಾಂಚ್ ಔಟ್' ಅಂದರೆ ಹೊಸತನಕ್ಕೆ ತೆರೆದುಕೊಳ್ಳದ, ಜಿಡ್ಡುಗಟ್ಟಿದ ನಾವಿದ್ದ ವಾತಾವರಣವೆಂಬ ವೃಕ್ಷದಲ್ಲಿ ಮತ್ತೊಂದು ಕೊಂಬೆಯಾಗಿ, ರೆಂಬೆಯಾಗಿ ಬೆಳೆಯುವುದು ಅಥವಾ ಆ ವಾತಾವರಣದಿಂದ ಹೊರಗೆ ಬರುವುದು. ಅಂತಹವರಿಂದ ಮಾತ್ರ ಜಗತ್ತಿಗೆ ಏನಾದರೂ ಒಳಿತಾಗಲು ಸಾಧ್ಯ! ಅಂತಹವರು ಬೇಕಾದಷ್ಟು ಮಂದಿ ಇದ್ದಾರೆ.

ಬ್ಯೂಟಿಪಾರ್ಲರಲ್ಲಿ ಕೆಲಸ ಮಾಡುವ ಹುಡುಗಿಯೊಬ್ಬಳು ತನ್ನ ಒಡತಿಯ ನಯ, ನಾಜೂಕು, ವರ್ತನೆ, ಬಂದ ಗಿರಾಕಿಗಳನ್ನು ಮಾತನಾಡಿಸುವ ರೀತಿ, ಆಕೆಯ ಕೈಕೆಲಸ, ಕೌಶಲ ಎಲ್ಲವನ್ನೂ ಸದ್ದಿಲ್ಲದೆ ಗಮನಿಸುತ್ತಾ ಇದ್ದು ಒಂದು ದಿನ ಅಲ್ಲಿಯ ಕೆಲಸಕ್ಕೆ ರಾಜೀನಾಮೆ ನೀಡಿ ಅದೊಂದು ದಿನ ತಾನೇ ಒಂದು ಹೊಸ ಬ್ಯೂಟಿಪಾರ್ಲರನ್ನು ತೆರೆಯುತ್ತಾಳೆ. ಹೋಟೆಲೊಂದರಲ್ಲಿ ಕೆಲಸಕ್ಕೆ ಇದ್ದ ಸಪ್ಲೈಯರು ಒಬ್ಬ ಅಲ್ಲೇ ನಾಲ್ಕೈದು ವರ್ಷ ಇದ್ದು ಹೋಟೆಲ್ಲಿನ ವ್ಯವಹಾರಗಳ ಮರ್ಮಗಳನ್ನೆಲ್ಲಾ ತಿಳಿದುಕೊಂಡು ಅದೊಂದು ದಿನ ಅಲ್ಲಿಂದ ಹೊರಬಂದು ತಾನೇ ಹೋಟೆಲೊಂದನ್ನು ಆರಂಭಿಸುತ್ತಾನೆ. 'ಬ್ರ್ಯಾಂಚ್ ಔಟ್' ಆಗುವುದೆಂದರೆ, ಬದುಕನ್ನು ನವೀಕರಿಸಿಕೊಳ್ಳುವುದು ಅಂದರೆ ಇದು! ಹೊಸ ಸಂಕಲ್ಪಕ್ಕೆ ಸಿದ್ಧರಾಗುವುದು ಎಂದರೆ ಇದು!

ಹೊಸ ವರ್ಷಾಚರಣೆ ಅಂದರೆ ನಮ್ಮನ್ನು ನಾವು ನವೀಕರಿಸಿಕೊಳ್ಳುವುದು. ಹೊಸ ಸಂಕಲ್ಪ ತೊಡುವುದು ಮತ್ತು ಅದಕ್ಕೆ ಬದ್ಧರಾಗಿ ನಡೆದುಕೊಳ್ಳುವುದು ಅಂತ ಅರ್ಥ. ನಮ್ಮಲ್ಲಿ ಅನೇಕರು ಹೊಸ ವರ್ಷಕ್ಕೆ ದೊಡ್ಡ ದೊಡ್ಡ ಆಣೆ, ಶಪಥ ಮಾಡುತ್ತಾರೆ. ಇಂದಿನಿಂದ ಕುಡಿಯುವುದಿಲ್ಲ, ಇಸ್ಪೀಟು ಆಡುವುದಿಲ್ಲ, ಸುಳ್ಳು ಹೇಳುವುದಿಲ್ಲ, ಹಣವನ್ನು ದುಂದುವೆಚ್ಚ ಮಾಡುವುದಿಲ್ಲ, ಮನೆಯಲ್ಲಿ ಜಗಳವಾಗದಂತೆ ನೋಡಿಕೊಳ್ಳುತ್ತೇನೆ, ತನ್ನೆಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಂಡು ನಡೆದುಕೊಳ್ಳುತ್ತೇನೆ ಎಂದೆಲ್ಲ ಭೀಷ್ಮ ಪ್ರತಿಜ್ಞೆ ಮಾಡಿ, ಭಯಂಕರ ಪ್ರತಿಜ್ಞೆ ಯೆಸಗಿದ ಭೀಷ್ಮನಿಗೂ ಸವಾಲು ಹಾಕುತ್ತಾರೆ. ಆದರೆ ಅದನ್ನು ನಡೆಸುವುದು ಒಂದೆರಡು ದಿನ ಮಾತ್ರ. ಆಮೇಲೆ ಮೊದಲಿನಂತೆಯೇ ಇರುತ್ತಾರೆ. ಒಂದು ದುರ್ಗುಣವನ್ನು ತ್ಯಜಿಸುವುದಕ್ಕೆ, ನ್ಯೂನತೆಯನ್ನು ಸರಿಪಡಿಸಿಕೊಳ್ಳುವುದಕ್ಕೆ, ಒಂದು Pleasing Personality ಪಡೆಯುವುದಕ್ಕೆ ಒಂದು ಹೊಸ ವರ್ಷವೇ ಬರಬೇಕು ಅಂತಿಲ್ಲ. ಯಾವಾಗ ಅವನ್ನೆಲ್ಲ ಬಿಡಬೇಕು ಅನ್ನಿಸುತ್ತದೆಯೋ ಆಗಲೇ ಬಿಟ್ಟುಬಿಡಬೇಕು ಮತ್ತು ಹೊಸ ವ್ಯಕ್ತಿತ್ವವನ್ನು ಪಡೆಯಬೇಕು. ಅದು ಕಷ್ಟಸಾಧ್ಯ. ಆದರೂ ಪ್ರಯತ್ನ ಮಾಡಿ ಗೆಲ್ಲಬೇಕು.

ಹಾಗೆ ನೋಡಿದರೆ ನಿಜವಾದ ಬದುಕು ಗಿಡದ್ದು. ಯಂತ್ರದ್ದಲ್ಲ, ಮನುಷ್ಯರದ್ದಲ್ಲ. ಇದಕ್ಕೆ ಅಪವಾದ ಇರುವುದು ಬೇರೆ. ಗಿಡದಲ್ಲಿ ದಿನದಿನವೂ ಹೊಸ ಚಿಗುರೂ, ಹೊಸ ಟೊಂಗೆಯೂ, ಹೊಸ ಮೊಗ್ಗೂ, ಹೊಸ ಹೂವೂ, ಹೊಸ ಫಲವೂ ಕಾಣುತ್ತಿರುತ್ತದೆ. ಅದರಂತೆ ನಮ್ಮ ಜೀವನದಲ್ಲೂ ಹಳಸಲು, ಮಾಸಲುಗಳು ಇಲ್ಲದೆ ಹೊಸ ಕಾಂತಿ, ಹೊಸ ಸಂಭ್ರಮ, ಹೊಸ ವಿಚಾರ ಉದಿಸುತ್ತಿರಬೇಕು.

ಆದರೆ ನಮ್ಮ ದೌರ್ಭಾಗ್ಯ- ಕೆಲವೇ ಕೆಲವರನ್ನು ಬಿಟ್ಟರೆ ಬಹುಮಂದಿ ಗಾಣದ ಎತ್ತು ಕಣ್ಣು ಮುಚ್ಚಿಕೊಂಡು ಹೆಜ್ಜೆ ಇಟ್ಟಲ್ಲೇ ಹೆಜ್ಜೆಯಿಡುತ್ತಾ, ತುಳಿದ ದಾರಿಯನ್ನೇ ತುಳಿಯುತ್ತಾ- ಸುತ್ತುತ್ತಾ, ಮರಳಿ ಮರಳಿ ಅಲ್ಲಲ್ಲೇ ತಿರುಗುವಂತೆ, ಯಾವುದೋ ಒಂದು ಕುರುಡು ಮಾಮೂಲನ್ನು ಹಿಡಿದು ನಡೆಯುತ್ತಿರುತ್ತಾರೆ. ಅದರಲ್ಲೊಂದು ವಿಚಾರವಿಜ್ಞಾನವಿರುವುದಿಲ್ಲ; ಸಹಜವಾದ ಉಲ್ಲಾಸವಿರುವುದಿಲ್ಲ. ಕುರಿಯ ಹಿಂಡಿನಂತೆ ಹಿಂದು ಮುಂದು ನೋಡದೆ ಯಾರನ್ನೋ ಅನುಸರಿಸಿ ನುಗ್ಗುತ್ತಿರುತ್ತಾರೆ. ಯಾರೋ ಹೇಳಿದ ಮಾತನ್ನು ಮಂತ್ರವೆಂದು ನಂಬಿ, ಆ ಮುಖಂಡರನ್ನೇ ಮನೆದೇವರನ್ನಾಗಿ ಮಾಡಿಕೊಂಡುಬಿಡುತ್ತಾರೆ. ಇದು ರಾಜಕಾರಣಿಗಳನ್ನು ಆರಾಧಿಸುವವರಿಗೆ, ಢೋಂಗಿ ಸ್ವಾಮಿಗಳನ್ನು ಪೂಜಿಸುವವರಿಗೆ ಚೆನ್ನಾಗಿ ಅನ್ವಯವಾಗುತ್ತದೆ.

ಇನ್ನು ಕೆಲವರಿರುತ್ತಾರೆ. ಒಂದು ಚೌಕಟ್ಟನ್ನು ದಾಟಿ ಏನನ್ನೂ ತಿಳಿದುಕೊಂಡಿರುವುದಿಲ್ಲ. ಅವರಾಯಿತು. ಅವರ ಆಫೀಸ್ ಆಯ್ತು. ಅವರ ಹೆಂಡತಿ ಮಕ್ಕಳಾಯಿತು. ಪ್ರಪಂಚ ಜ್ಞಾನ ಏನೂ ಇರುವುದಿಲ್ಲ. ಹೇಳಿದ್ದನ್ನೇ ಹೇಳುತ್ತಿರುತ್ತಾರೆ. ಇಲ್ಲ ಮೂಕಪ್ರಾಣಿಗಳಂತೆ ಇರುತ್ತಾರೆ. ಏನನ್ನೂ ಓದುವುದಿಲ್ಲ, ಒಂದು ಒಳ್ಳೆಯ ಸಿನಿಮಾ, ನಾಟಕ, ಯಕ್ಷಗಾನ, ಭರತನಾಟ್ಯ ನೋಡಿರುವುದಿಲ್ಲ. ಒಂದು ಒಳ್ಳೆಯ ಹೋಟೆಲ್ಲಿಗೆ ಹೋಗಿ ತಿಂಡಿ ತಿಂದಿರುವುದಿಲ್ಲ. ಒಂದು ಒಳ್ಳೆಯ ಕಾರಲ್ಲಿ ಓಡಾಡಿರುವುದಿಲ್ಲ. ವೋಲ್ವೋ ಅಂತಹ ಬಸ್ಸನ್ನೇ ಹತ್ತಿರುವುದಿಲ್ಲ. ಆಧುನಿಕ ಕಾಲಕ್ಕೆ ಸ್ಪಂದಿಸುವುದಿಲ್ಲ. ದೇವರು ದಿಂಡರಿಗೆ ಅಂಟಿಕೊಂಡವರನ್ನು ಕೇಳುವುದೇ ಬೇಡ. ಅಲ್ಲಿಯೇ ಸುತ್ತುತ್ತಿರುತ್ತಾರೆ. ಅತಿಯಾಗಿ ದೇವರನ್ನು ಹಚ್ಚಿಕೊಂಡರೆ ಗರ್ಭಗುಡಿ ಅವರನ್ನು ನುಂಗಿಹಾಕಿಬಿಡುತ್ತದೆ ಅನ್ನುವುದು ಅವರಿಗೆ ಗೊತ್ತೇ ಆಗುವುದಿಲ್ಲ. ದೇವರಿಗಾಗಿ, ಕಾವಿಬಟ್ಟೆಯ ಡಂಭಾಚಾರದ ಸ್ವಾಮಿಗಳಿಗಾಗಿ ಎಷ್ಟು ಬೇಕಾದರೂ ಖರ್ಚು ಮಾಡುತ್ತಾರೆ. ಅದೇ ಯಾವುದೋ ಸಮಾಜ ಹಿತಕ್ಕೋ, ಓದುವ ಬಡಮಕ್ಕಳಿಗೋ ಸಹಾಯ ಮಾಡುವುದಕ್ಕೆ ಒಂದು ಪೈಸೆಯನ್ನೂ ಕೊಡುವುದಿಲ್ಲ. ನಮ್ಮ ಸುತ್ತಮುತ್ತಲೂ ಅಂಥಹವರು ಬೇಕಾದಷ್ಟು ಮಂದಿ ಇದ್ದಾರೆ. ಅವರು ನಮಗೆ ಮುಖ್ಯರಲ್ಲ. ಆದರ್ಶವೂ ಅಲ್ಲ. ಅಂತ ಹವರು ಅವರ ಪಾಡಿಗೆ ಅವರು ಇರಲಿ.

ಮನುಷ್ಯಜೀವ ಅನ್ನುವುದು ಬಹುದೊಡ್ಡ ಸಂಗತಿ; ದೇವರು ಕೊಟ್ಟ ಬಹುದೊಡ್ಡ ವರ ಅದು. ಅದು ಅತ್ಯಂತ ಪವಿತ್ರವಾದುದು, ಗೌರವಾರ್ಹವಾದುದು. ಈ ಲೋಕದಲ್ಲಿ ಜೀವವೊಂದು ಹುಟ್ಟಬೇಕಾದರೆ ಸೃಷ್ಟಿದೇವತೆ ಪೂರ್ವಭಾವಿಯಾಗಿ ಎಷ್ಟೊಂದು ಸಿದ್ಧತೆ ಮಾಡಿರುತ್ತಾಳೆ. ಅದನ್ನು ನಾವು ಪದೇ ಪದೆ ಆಲೋಚಿಸುತ್ತಿರಬೇಕು. ಅದಕ್ಕೆ ನಿಮಿತ್ತ ಕಾರಣರಾದ ತಂದೆ-ತಾಯಿಯರನ್ನು ಸದಾ ಸ್ಮರಿಸುತ್ತಿರಬೇಕು.

"ಮನುಷ್ಯ ದೇಹ ಎಂಥಹ ಆಶ್ಚರ್ಯಕರವಾದ ಯಂತ್ರ! ಅದರಲ್ಲಿ ಎಂತೆಂತಹ ರಸಧಾತುಗಳು ತುಂಬಿಕೊಂಡಿವೆ! ಮನಸ್ಸೆಂಬುದು ಎಂತಹ ಅದ್ಭುತ ರಸಾಯನ! ಇಂತಹ ಎಷ್ಟೋ ರಸಯಂತ್ರಗಳನ್ನು ಜೋಡಿಸಿ, ಹೊಂದಿಸಿ ಎಷ್ಟು ತಾಳ್ಮೆಯಿಂದ ಪ್ರಕೃತಿಮಾತೆ ಜೀವವೆಂಬ ವಸ್ತುವನ್ನು ಸೃಷ್ಟಿಸಿದ್ದಾಳೆ!" ಎಂಬುದನ್ನು ಪದೇ ಪದೆ ಸ್ಮರಿಸುತ್ತಾ, ಪ್ರತಿಯೊಂದು ಜೀವದಲ್ಲಿಯೂ ಎಷ್ಟೋ ಗುಣಶಕ್ತಿಗಳು ಅಡಗಿಕೊಂಡಿವೆ ಅನ್ನುವುದನ್ನೂ ಪರ್ಯಾಲೋಚಿಸುತ್ತಾ ನಾವು ನಮ್ಮ ಶಕ್ತಿಸಾಮರ್ಥ್ಯಗಳನ್ನು ಅರಿಯಬೇಕು. ಹಾಗಾದಾಗ ಮಾತ್ರ ನಮ್ಮ ಜೀವನ ಸಾರ್ಥಕಗೊಳ್ಳುತ್ತದೆ.


'ಚಹಾ'ದ ತಾಕತ್ತು ಏನು ಅಂತ ಗೊತ್ತಾಗಬೇಕಾದರೆ ಅದರ ಎಲೆಗಳು ಬಿಸಿನೀರಿಗೆ ಬಿದ್ದು ಕುದಿಯಬೇಕು. ಹಾಗೆ ಆದಾಗಲೇ ಅದರ ತಾಕತ್ತು ಏನು ಅಂತ ಗೊತ್ತಾಗುತ್ತದೆ. ಹಾಗೆ ನಾವು ನಮ್ಮ ಶಕ್ತಿಸಾಮರ್ಥ್ಯಗಳನ್ನು ಅರಿತು ಅದು ಸದುಪಯೋಗವಾಗುವಂತೆ ನಡೆದುಕೊಳ್ಳಬೇಕು. ಒಟ್ಟಿನಲ್ಲಿ ನಾವು ಗಟ್ಟಿ ಮನುಷ್ಯರಾಗಬೇಕು. ಅಳ್ಳಕ ಮನಸ್ಸಿನವರಾಗಬಾರದು. ಎತ್ತರದಿಂದ ಧುಮುಕುವ ನೀರು ಅಥವಾ ರಭಸದಿಂದ ಹರಿಯುವ ನದಿ ಮಾತ್ರ ತನ್ನ ಹಾದಿಯನ್ನು ತಾನೇ ನಿರ್ಮಿಸಿಕೊಳ್ಳುತ್ತದೆ. ನದಿಯಂತೆ ನಮ್ಮ ಹಾದಿಯನ್ನು ನಾವೇ ನಿರ್ಮಿಸಿಕೊಳ್ಳುವಂತಹ ವ್ಯಕ್ತಿಗಳಾಗಬೇಕು. ಚಹಾದ ಎಲೆಯಂತಹ, ಎತ್ತರದಿಂದ ಧುಮುಕುವ ನೀರಿನಂತಹ ವ್ಯಕ್ತಿತ್ವವನ್ನು ನಾವು ಸಂಪಾದಿಸಬೇಕು. ಇಂಥಾದ್ದು ನಾವು ಹೊಸ ವರ್ಷಕ್ಕೆ ತೊಡುವ ಪಣವಾಗಬೇಕು.

ಹೊಸ ವರ್ಷದ ಆಗಮನವೆಂದರೆ ಹಳೆಯ ಇಸ್ವಿಯ ಕೊನೆಯ ದಿನ ಮಧ್ಯರಾತ್ರಿ ನಡೆಯುವ ಒಂದು ಮೋಜಿನ ಉತ್ಸವ ಎಂದು ಅನೇಕರ ಮನಸ್ಸಿನಲ್ಲಿ ಇದೆ. ಅದನ್ನು ರೂಢಿಸಿದವರು ಪಾಶ್ಚಾತ್ಯರು. ಅದರಲ್ಲಿ ತಪ್ಪೇನೂ ಇಲ್ಲ. ನಮ್ಮವರು ಅದನ್ನು ಅನುಕರಿಸುತ್ತಾರೆ ಅಷ್ಟೇ! ಆದರೆ ಅದರಲ್ಲಿ ಒಂದು ಉನ್ನತ ಧ್ಯೇಯ, ಪರಮೋತ್ತಮ ಆದರ್ಶ, ಒಂದು ವಿವೇಕ ಇರಲಿ ಅಂತ ಬಯಸುತ್ತಾ ನಾನೂ ಹೊಸ ವರ್ಷದ ಆಗಮನಕ್ಕೆ ಸಿದ್ಧನಾಗುತ್ತೇನೆ. ಈ 2023 ಎಲ್ಲರಿಗೂ ಒಳಿತನ್ನುಂಟುಮಾಡಲಿ ಎಂದು ಹೃದಯಪೂರ್ವಕವಾಗಿ ಹಾರೈಸುತ್ತೇನೆ.


ಮಕ್ಕಳ ಚಿತ್ರಕಥೆ

'ಯಜಮಾನರೆ....ಓ ಯಜಮಾನರೇ...!'


-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199




ಭಿಕ್ಷುಕನೊಬ್ಬ ಒಂದು ಮನೆಗೆ ಭಿಕ್ಷೆ ಯಾಚಿಸುತ್ತಾ ಹೋಗುತ್ತಾನೆ. ಆ ಮನೆ ಸಾಧಾರಣ ಮನೆಯಾಗಿರಲಿಲ್ಲಾ. ಅದರ ಭವ್ಯತೆ ಕಂಡು ಬೆರಗಾಗಿಬಿಡುತ್ತಾನೆ. ಅದು ಅರಮನೆಯಂತಹ ಮನೆ. ಆ ಸುಂದರವಾದ ಮನೆಯನ್ನು ನೋಡಲು ಎರಡು ಕಣ್ಣು ಸಾಲದು. ಹೊರಗಡೆ ಐಷಾರಾಮಿ ಕಾರುಗಳು ನಿಂತಿವೆ.




ಹೊರಾಂಗಣದಲ್ಲಿ ಆ ಮನೆಯ ಒಡೆಯ ಕಪ್ಪು ಕೂಲಿಂಗ್ ಗ್ಲಾಸ್ ಹಾಕಿಕೊಂಡು ಐಷಾರಾಮಿ ಕುರ್ಚಿಯಲ್ಲಿ ಕುಳಿತಿದ್ದಾನೆ. ಅವನ ಪಕ್ಕದಲ್ಲಿ ಸುಂದರಿಯಾದ ಪತ್ನಿಯೂ ಇದ್ದಾಳೆ. ತಂದೆ-ತಾಯಿಯ ಸೇವೆಗೆ ಸದಾ ಸನ್ನದ್ಧರಾಗಿರುವ ಮಕ್ಕಳೂ ಇದ್ದಾರೆ.



ಇವನ್ನೆಲ್ಲಾ ಗಮನಿಸಿದ ಭಿಕ್ಷುಕ ಹೇಳಿದ, "ಯಜಮಾನರೆ.... ಓ ಯಜಮಾನರೇ... ನೀವೆಷ್ಟು ಭಾಗ್ಯವಂತರು, ದೇವರು ನಿಮಗೆ ಸಂಪೂರ್ಣ ಅನುಗ್ರಹ ನೀಡಿದ್ದಾನೆ.... ನಿಜಕ್ಕೂ ನೀವು ಭಾಗ್ಯವಂತರು. ನಿಮಗೆ ದೇವರು ಅರಮನೆಯಂತಹ ಮನೆ ನೀಡಿದ್ದಾನಲ್ಲವೇ...? ನನಗೆ ಒಂದಿಷ್ಟು ಭೂಮಿಯೂ ಇಲ್ಲ..!".



ಆ ಭಿಕ್ಷುಕ ತನ್ನ ಮಾತನ್ನು ಮುಂದುವರೆಸುತ್ತಾ, "ನಿಮಗೆ ದೇವರು ಐಷಾರಾಮಿ ಕಾರುಗಳನ್ನು ನೀಡಿದ್ದಾನಲ್ಲವೇ...? ನನಗೆ ಸರಿಯಾದ ಚಪ್ಪಲಿಯೂ ಇಲ್ಲ. ನಿಮಗೆ ಸುಂದರಿಯಾದ ಪತ್ನಿಯು ಇದ್ದಾಳೆ... ನನಗೆ ಯಾರು ಹೆಣ್ಣು ಕೊಡುವರು..? ಆದ್ದರಿಂದ ನನಗೆ ಮಕ್ಕಳೂ ಇಲ್ಲ. ನಿಜಕ್ಕೂ ನೀವು ಭಾಗ್ಯವಂತರು...!" ಎಂದು ತನ್ನ ಮನಸ್ಸಿನ ಮಾತನ್ನು ಹೊರಹಾಕುತ್ತಾನೆ.



ಭಿಕ್ಷುಕನ ಮಾತನ್ನು ಕೇಳಿದ ಯಜಮಾನ ಹೇಳಿದ, "ದೇವರು ನನಗೆ ನೀಡದ ಒಂದು ದೊಡ್ಡ ಅನುಗ್ರಹವನ್ನು ನಿನಗೆ ನೀಡಿದ್ದಾನೆ..!". ಭಿಕ್ಷುಕ ಅಚ್ಚರಿಯಿಂದ "ನನ್ನ ಬಳಿ ಅಂತಹುದ್ದೇನಿದೆ....?" ಕೇಳುತ್ತಾನೆ.



ಯಜಮಾನ ತನ್ನ ಕನ್ನಡಕವನ್ನು ತೆಗೆಯುತ್ತಾ ಹೇಳುತ್ತಾನೆ "ದೇವರು ನನಗೆ ಎರಡೂ ಕಣ್ಣುಗಳನ್ನು ನೀಡಿಲ್ಲಾ...ನಾನೊಬ್ಬ ಕುರುಡ. ನನ್ನ ಎಲ್ಲಾ ಅನುಗ್ರಹವನ್ನೂ ನಿನಗೆ ನೀಡುವೆ, ನಿನ್ನ ಎರಡೂ ಕಣ್ಣುಗಳನ್ನು ನನಗೆ ನೀಡುವೆಯಾ...?". ಆ ಭಿಕ್ಷುಕ ಏನೂ ಮರುಮಾತನಾಡದೆ ಅಲ್ಲಿಂದ ಹೊರಬಂದುಬಿಟ್ಟ.

ವಿವಿಧ ಯೋಜನೆಯಡಿ ರೈತರಿಗೆ 8 ಕೋಟಿ ಸಾಲ ವಿತರಣೆ

ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ



ತಿ.ನರಸೀಪುರ, ಡಿ.31– ವಿವಿಧ ಯೋಜನೆಯಡಿ ರೈತರಿಗೆ 8 ಕೋಟಿ ಸಾಲ ವಿತರಿಸಿದ್ದೇವೆ. ಸಂಘವನ್ನು ತಾಲೂಕಿನಲ್ಲೇ ಮಾದರಿ ಮಾಡುವ ಗುರಿ ಹೊಂದಿರುವುದಾಗಿ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ತಿಳಿಸಿದರು.

ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಬನ್ನೂರಿಗೆ ವರ್ಗಾವಣೆಗೊಂಡ ಸಂಘದ ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಜಪ್ಪ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಪ್ರಥಮ ಬಾರಿಗೆ ನಾನು ಅಧ್ಯಕ್ಷನಾದಾಗ ಸಂಘ 80 ಲಕ್ಷ ರೂ. ಸುಸ್ತಿಯಲ್ಲಿತ್ತು ಹಾಗೂ 45 ಲಕ್ಷ ರೂ. ನಷ್ಟದಲ್ಲಿತ್ತು. ಅಲ್ಲಿವರೆಗೂ ರೈತರಿಗೆ 1 ಕೋಟಿ ಸಾಲ ನೀಡಿರಲಿಲ್ಲ, ನಾನು ಅಧಿಕಾರ ವಹಿಸಿಕೊಂಡ ಮೇಲೆ ನಷ್ಟ ಸರಿದೂಗಿಸಿ ಸಾಲ ಸೌಲಭ್ಯ ನೀಡಿದ್ದು, ಕಟ್ಟಡ ನಿರ್ಮಾಣ ಮಾಡಿರುವುದಾಗಿ ತಿಳಿಸಿದರು.

ಮಹಿಳಾ ಸ್ವಸಹಾಯ ಸಂಘ, ಮಲ್ಟಿ ಪರ್ಪಸ್ ಯೋಜನೆ ಹಾಗೂ ಮಧ್ಯಮ ಅವಧಿ ಟ್ರಾಕ್ಟರ್ ಸಾಲ ಯೋಜನೆಗಳ ಮೂಲಕ ರೈತರಿಗೆ ಹಾಗೂ ಸ್ವಸಹಾಯ ಸಂಘಗಳಿಗೆ ಸಾಲ ನೀಡುವ ಮೂಲಕ ನಷ್ಟ ಹಾಗೂ ಸುಸ್ತಿಯಲ್ಲಿದ್ದ ಸಂಘವನ್ನು ಲಾಭದತ್ತ ಕೊಂಡೊಯ್ಯಲಾಗುತ್ತಿದೆ ಎಂದರು.

ಪ್ರಭಾರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ರಾಜಪ್ಪನವರು ಬ್ಯಾಂಕ್ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರ ಸಹಕಾರ ಸಂಘಕ್ಕೆ ಪ್ರತಿ ತಂದಿದೆ ಎಂದರು.

ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ರಾಜಪ್ಪ ಮಾತನಾಡಿ, ರೈತರ ಸಹಕಾರದಿಂದ ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಪ್ರಭಾರ ಸಿಇಒ ಆಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಯಿತು. ಜಿಲ್ಲಾ ಬ್ಯಾಂಕ್ ಸಹಕಾರದೊಂದಿಗೆ ಸರ್ಕಾರದಿಂದ ಬರುವ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಇಲ್ಲಿನ ರೈತರಿಗೆ ಒದಗಿಸಿಕೊಡುವ ಮೂಲಕ ಅವರ ಮನಸ್ಸಿನಲ್ಲಿ ನೆಲೆಸಲು ಸಾಧ್ಯವಾಯಿತು ಎಂದರು.

ಇದೇ ವೇಳೆ ಎಂಸಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಕೃಷ್ಣ ಹಾಗೂ ತಿ.ನರಸೀಪುರ ವ್ಯಾಪ್ತಿಯ ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ನುಗ್ಗೆಹಳ್ಳಿಕೊಪ್ಪಲು ರಮೇಶ್ ಮತ್ತು ಬನ್ನೂರಿಗೆ ವರ್ಗಾವಣೆಗೊಂಡ ರಾಜಪ್ಪ ಅವರನ್ನು ಸನ್ಮಾನಿಸಲಾಯಿತು. ನಿರ್ದೇಶಕರಾದ ಟಿ.ಸಿ.ಫಣೀಶ್ ಕುಮಾರ್, ಮಹಾಲಿಂಗಪ್ಪ, ಎಂ.ನಾಗರತ್ನ, ನಾಗಮ್ಮ, ಬಿ.ಚಂದ್ರಮ್ಮ, ದೊಡ್ಡಬಸವಯ್ಯ, ಟಿಎಪಿಸಿಎಂಎಸ್ ನಿರ್ದೇಶಕ ಪ್ರಭು ಮೋಹನ್, ಡಿ.ಎಂ.ಶಿವಕುಮಾರ್, ದಿವ್ಯಶ್ರೀ, ಗ್ರಾಪಂ ಮಾಜಿ ಅಧ್ಯಕ್ಷ ಶಾಂತರಾಜು, ತಿರುಮಕೂಡಲು ಲಕ್ಷ್ಮಣ, ಪರಶಿವ, ಎಪಿಎಂಸಿ ಮಾಜಿ ಸದಸ್ಯ ಸಾಲುಂಡಿ ಸ್ವಾಮಿ, ಕಾವೇರಿಪುರ ಶಾಂತರಾಜು, ಹರೀಶ್ ಕುಮಾರ್ ಮತ್ತಿತರರಿದ್ದರು.

ಗಂಧನಹಳ್ಳಿಯಲ್ಲಿ ಅದ್ಧೂರಿ ಹನುಮ, ಕನಕದಾಸ ಜಯಂತಿ

ಭೇರ್ಯ, ಡಿ.31– ಇಲ್ಲಿಗೆ ಸಮೀಪದ ಗಂಧನಹಳ್ಳಿಯಲ್ಲಿ 13ನೇ ವರ್ಷದ ಹನುಮ ಹಾಗೂ ಕನಕದಾಸ ಜಯಂತಿ ಅದ್ಧೂರಿಯಾಗಿ ನಡೆಯಿತು.

ಗ್ರಾಮದ ಶ್ರೀಆಂಜನೇಯಸ್ವಾಮಿ ದೇವಾಲಯದಲ್ಲಿ ಬೆಳಗ್ಗಿನಿಂದಲೇ ಅರ್ಚಕ



ನಾಗರಾಜು ನೇತೃತ್ವದಲ್ಲಿ ಅಭಿಷೇಕ, ಹೋಮ–ಹವನ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ನಡೆಯಿತು. ಅಲ್ಲದೇ ದೇವಾಲಯವನ್ನು ತಳಿರು ತೋರಣ, ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಅಲಂಕೃತ ವಾಹನದಲ್ಲಿ ಶ್ರೀವೀರಾಂಜನೇಯಸ್ವಾಮಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ಪೂರ್ಣ ಕುಂಭ ಕಳಸ ಹೊತ್ತ ನೂರಾರು ಮಹಿಳೆಯರೊಂದಿಗೆ ಜೈಭಜರಂಗಿ ಎಂದು ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಗೆ ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಜಿ.ಎನ್.ಮಾಲೇಗೌಡ ಚಾಲನೆ ನೀಡಿದರು.

ಈ ವೇಳೆ ಸಂಘದ ಅಧ್ಯಕ್ಷ ಹೇಮಂತ್, ತಾಪಂ ಮಾಜಿ ಸದಸ್ಯ ಜಿ.ಎಸ್.ಮಂಜುನಾಥ, ಡೈರಿ ಮಹದೇವ್, ಗ್ರಾಪಂ ಸದಸ್ಯ ಸಣ್ಣದೊಡ್ಡೇಗೌಡ, ಆರುಣ್, ಮರೀಗೌಡ, ಮಂಜುನಾಥ, ಜಿ.ಟಿ.ಬೀರೇಶ್, ಕೆಂಪರಾಜು, ಮಂಜು, ಜಿ.ಎನ್.ರವಿಶಂಕರ್, ಸುಮಂತ್, ಅಭಿ, ಶ್ರೀಧರ್, ಅಪ್ಪು, ಹರೀಶ್ ಹಾಗೂ ನೂರಾರು ಗ್ರಾಮಸ್ಥರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಆವರ್ತಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ದಿನೇಶ್ ಹಾಗೂ ಉಪಾಧ್ಯಕ್ಷರಾಗಿ ಅಣ್ಣಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ಸುರೇಶ್, ನಿರ್ದೇಶಕರಾದ ಸೋಮಣ್ಣ, ರಾಜಶೇಖರ್, ಚಂದ್ರು, ಕುಮಾರಸ್ವಾಮಿ, ಮಂಜು ನಾಯಕ, ಭಾಗ್ಯಮ್ಮ, ಇಂದ್ರಮ್ಮ, ಮಹಮ್ಮದ್ ಅನೀಫ್, ಪುಟ್ಟಪ್ಪ, ಜಗದೀಶ್, ಸಣ್ಣಸ್ವಾಮಿ ಹಾಗೂ ಕಾರ್ಯದರ್ಶಿ ಕುಮಾರ್, ಹಾಲು ಪರೀಕ್ಷಕ ರೇವಣ್ಣ, ಸಹಾಯಕ ಗಂಗಾಧರ್ ಸೇರಿದಂತೆ ಇನ್ನಿತರರಿದ್ದರು.



ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಬೆಂಗಳೂರಿನ ರೋಟರಿ ಕ್ಲಬ್ ಸದಸ್ಯ ಶ್ಯಾಂ ಹಾಗೂ ಅವರ ಪತ್ನಿ ಲತಾ 7 ಲಕ್ಷ ರೂ. ವೆಚ್ಚದ ಡಯಾಲಿಸೀಸ್ ಯಂತ್ರವನ್ನು ಕೊಡುಗೆ ನೀಡಿದರು. ಈ ವೇಳೆ ಬೆಂಗಳೂರಿನ ರೋಟರಿ ಕ್ಲಬ್ ಅಧ್ಯಕ್ಷ ಸಂಜಯ್ ಉದಾನಿ, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಸೋಮಣ್ಣ, ತಾಲೂಕು ರೋಟರಿ ಕ್ಲಬ್ ಅಧ್ಯಕ್ಷ ಗಣೇಶ್ ಲಾಡ್, ನಿರಂಜನ್, ಮಹೇಶ್, ಜಿ.ರವಿ, ನಾರಾಯಣ್ ಲಾಲ್, ಆರ್ಮುಗಂ, ಶ್ರೀಕಂಠಯ್ಯ, ಡಾ.ರವಿಕುಮಾರ್ ಇದ್ದರು.

ಸರಗೂರಲ್ಲಿ ನಟ ಡಾ.ವಿಷ್ಣುವರ್ಧನ್ ಪುಣ್ಯಸ್ಮರಣೆ



ಸರಗೂರು, ಡಿ.31– ಪಟ್ಟಣದಲ್ಲಿ ನಟ ಡಾ.ವಿಷ್ಣುವರ್ಧನ್ ಅವರ 13ನೇ ಪುಣ್ಯಸ್ಮರಣೆ ನಡೆಯಿತು. ವಿಷ್ಣುವರ್ಧನ್ ಅಭಿಮಾನಿಗಳು ಡಾ.ವಿಷ್ಣು ಭಾವಚಿತ್ರಕ್ಕೆ ಹಾರ ಹಾಕಿ, ಪುಷ್ಪ ನಮನ ಸಲ್ಲಿಸಿದರು. ಅಲ್ಲದೇ ಇದೇ ವೇಳೆ ವಿಷ್ಣುವರ್ಧನ್ ಅಭಿನಯದ ಚಿತ್ರಗಳ ಹಾಡುಗಳನ್ನು ಹಾಕಿ ಅವರನ್ನು ಸ್ಮರಿಸಿದರು. ಶ್ರೀಶಂಕರ್ ಚಿತ್ರಮಂದಿರದ ಮಾಲೀಕ ಸೋಮಶೇಖರ್, ನಿಸರ್ಗ ರೆಸಿಡೆನ್ಸಿ ಸಿಬ್ಬಂದಿ ಅನ್ನದಾನ ಹಮ್ಮಿಕೊಂಡಿದ್ದರು. ಈ ವೇಳೆ ವಿಷ್ಣು ಸೇನಾ ಸಮಿತಿ ಅಧ್ಯಕ್ಷ ಶಂಭು, ಅಭಿಮಾನಿಗಳಾದ ಬಸವರಾಜು, ಸಿದ್ದರಾಜು, ಗೋವಿಂದ, ರಾಜಣ್ಣ, ಕಿರಣ್, ಸಿದ್ದು, ಚಿಕ್ಕಮಾದು, ಉಮೇಶ್ ಹಾಗೂ ನಿಸರ್ಗ ರೆಸಿಡೆನ್ಸಿ ಮಾಲಿಕ ವಿಬೀನ್, ಸಿಬ್ಬಂದಿಗಳಾದ ಕಿರಣ್, ಉಮೇಶ್, ಗೋವಿಂದ, ಚಿಕ್ಕಮಾದು ಸೇರಿದಂತೆ ಇನ್ನಿತರರಿದ್ದರು.

ಆನೆ ದಾಳಿಯಿಂದ ಫಸಲು ನಾಶ

ಪರಿಹಾರಕ್ಕೆ ಒತ್ತಾಯಿಸಿ ದಸಂಸ ಪ್ರತಿಭಟನೆ



ಹುಣಸೂರು, ಡಿ.31– ತಾಲೂಕಿನ ಕೆಲವೆಡೆ ಆನೆ ದಾಳಿಯಿಂದ ರೈತರು ಕಷ್ಟಪಟ್ಟು ಬೆಳೆದ ಬೆಳೆ ನಾಶವಾಗಿದ್ದು, ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ(ಡಿಜಿ ಸಾಗರ್ ಬಣ) ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ದಸಂಸ ಜಿಲ್ಲಾ ಸಂಚಾಲಕ ಕೃಷ್ಣ ಮಾತನಾಡಿ, ಕಳೆದ 15 ದಿನಗಳಿಂದ ತಾಲೂಕಿನ ಕೊಳಗಟ್ಟ ಸೇರಿದಂತೆ ವಿವಿಧೆಡೆ ರೈತರು ಹಾಗೂ ದಲಿತರ ಜಮೀನಿನ ಮೇಲೆ ಆನೆಗಳು ದಾಳಿ ಮಾಡುತ್ತಿವೆ. ಇದರಿಂದ ರೈತರು ಕಷ್ಟಪಟ್ಟು ಬೆಳೆದ ಭತ್ತ ಸೇರಿದಂತೆ ವಿವಿಧ ಫಸಲು ನಾಶವಾಗುತ್ತಿದೆ. ಅಲ್ಲದೇ ನಿನ್ನೆ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದ ರೈತ ಮಹಿಳೆ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಆಕೆ ಸಾವನ್ನಪ್ಪಿದ್ದು, ಮತ್ತೊರ್ವ ಮಹಿಳೆ ಗಾಯಗೊಂಡು ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆನೆಗಳು ಜಮೀನಿನ ಮೇಲೆ ದಾಳಿ ಮಾಡುವ ಜೊತೆಗೆ ಗ್ರಾಮಗಳಿಗೂ ನುಗ್ಗುತ್ತಿವೆ. ಇದರಿಂದ ರೈತರು ಹಾಗೂ ಸಾರ್ವಜನಿಕರು ಭಯದಿಂದ ಬದುಕುವಂತಾಗಿದೆ. ಆನೆ ಹಾವಳಿ ತಪ್ಪಿಸುವಂತೆ ಅರಣ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ನಷ್ಟಕ್ಕೊಳಗಾದ ರೈತರಿಗೆ ಸೂಕ್ತ ಪರಿಹಾರ ಕಲ್ಪಿಸಬೇಕು. ಅಲ್ಲದೇ ಆನೆ ಹಾವಳಿ ತಡೆಯಲು ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಒಂದು ವೇಳೆ ಪರಿಹಾರ ನೀಡುವುದು ವಿಳಂಬವಾದರೆ ಮೈಸೂರಿನ ಅರಣ್ಯ ಭವನದ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ವೇಳೆ ತಾಲೂಕು ಸಂಚಾಲಕ ರಂಗನಾಥ್, ಹನಗೋಡು ಹೋಬಳಿ ಸಂಚಾಲಕ ಸಿದ್ದಯ್ಯ, ಬಿಳಿಕೆರೆ ಹೋಬಳಿ ಸಂಚಾಲಕ ಚಂದ್ರಶೇಖರ, ತಾಲೂಕು ಮಹಿಳಾ ಸಂಚಾಲಕಿ ಪವಿತ್ರಕೆ ಹಾಗೂ ಇನ್ನಿತರರಿದ್ದರು.

ನಂ.ಗೂಡನ್ನು ಮಾದರಿ ಕ್ಷೇತ್ರವನ್ನಾಗಿಸಲು ಸಹಕರಿಸಿ

ಹೋಟೆಲ್ ಮಾಲೀಕರಿಗೆ ಆಯುಕ್ತ ರಾಜಣ್ಣ ಮನವಿ



ನಂಜನಗೂಡು, ಡಿ.31– ಹೋಟೆಲ್ ಮಾಲೀಕರು ಸ್ವಚ್ಛತೆ ಕಾಪಾಡುವ ಜೊತೆಗೆ ಯಾತ್ರಾರ್ಥಿಗಳಿಗೆ ಉತ್ತಮ ಆತಿಥ್ಯ ನೀಡುವ ಮೂಲಕ ನಂಜನಗೂಡನ್ನು ಮಾದರಿ ಕ್ಷೇತ್ರವನ್ನಾಗಿಸಲು ಸಹಕರಿಸಬೇಕು ಎಂದು ನಗರಸಭೆ ಆಯುಕ್ತ ರಾಜಣ್ಣ ಮನವಿ ಮಾಡಿದರು.

ನಗರದ ಆರ್.ಪಿ.ರಸ್ತೆಯಲ್ಲಿರುವ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ನಂಜನಗೂಡು ಹೋಟೆಲ್ ಮಾಲೀಕರ ಸಂಘ ಆಯೋಜಿಸಿದ್ದ ನೂತನ ಕ್ಯಾಲೆಂಡರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಹೋಟೆಲ್ ಮಾಲೀಕರು ಆಹಾರ ತಯಾರಿಕೆಯಲ್ಲಿ ಶುಚಿ–ರುಚಿ ಕಾಪಾಡಿಕೊಳ್ಳಬೇಕು. ಹೋಟೆಲ್‌ಗಳಲ್ಲಿ ತಂಗುವ ಪ್ರವಾಸಿಗರನ್ನು ಗೌರವದಿಂದ ಸತ್ಕರಿಸಬೇಕು. ಜೊತೆಗೆ ಸ್ವಚ್ಛತೆ ಕಾಪಾಡಿಕೊಳ್ಳುವುದಲ್ಲದೆ, ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ ಸ್ವಚ್ಛ ನಗರವನ್ನಾಗಿಸಲು ನಗರಸಭೆಯೊಂದಿಗೆ ಕೈಜೋಡಿಸಬೇಕು. ಆ ಮೂಲಕ ನಂಜನಗೂಡನ್ನು ಉತ್ತಮ ಪ್ರವಾಸಿ ಕ್ಷೇತ್ರವನ್ನಾಗಿ ರೂಪಿಸಲು ನೆರವಾಗಬೇಕು ಎಂದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ರಾಮಕೃಷ್ಣ ಮಾತನಾಡಿ, ಹೋಟೆಲ್ ಮಾಲೀಕರು ನಗರಸಭೆ, ಕಾರ್ಮಿಕ ಇಲಾಖೆಗಳ ಎಲ್ಲಾ ನಿಯಮ ಪಾಲಿಸುತ್ತಾ ಸಹಕಾರ ನೀಡುತ್ತಾ ಬಂದಿದ್ದೇವೆ. ಅಲ್ಲದೆ ಸಂಘದಿಂದ ಪ್ರತಿಭಾ ಪುರಸ್ಕಾರ, ಕ್ರೀಡಾ ಚಟುವಟಿಕೆಗೆ ನೆರವು ನೀಡುವಂತಹ ಸಾಮಾಜಿಕ ಚಟುವಟಿಕೆಯಲ್ಲೂ ತೊಡಗಿಸಿಕೊಂಡಿದೆ ಎಂದರು.

ಸಮಾರಂಭದಲ್ಲಿ ಯು.ಎನ್.ಬಾಲಕೃಷ್ಣ, ದತ್ತಾತ್ರೇಯ, ಪುರುಷೋತ್ತಮ್, ಚೆನ್ನಬಸವೇಶ್ವರ, ರಾಜೇಂದ್ರ, ಗುರುಪ್ರಸನ್ನ, ಶಿವಮೂರ್ತಿ, ಎನ್.ಜಿ.ಸಂದೀಪ್ ಸೇರಿದಂತೆ ಹಲವರಿದ್ದರು.

ತುಂಬಲ ಗ್ರಾಮ ಪಂಚಾಯಿತಿಗೆ ಸತೀಶ್ ಉಪಾಧ್ಯಕ್ಷ



ತಿ.ನರಸೀಪುರ, ಡಿ.31– ತಾಲೂಕಿನ ತುಂಬಲ ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಸತೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಉಪಾಧ್ಯಕ್ಷ ಶೇಖರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶನಿವಾರ ಚುನಾವಣೆ ನಿಗದಿಯಾಗಿತ್ತು. ಉಪಾಧ್ಯಕ್ಷ ಸ್ಥಾನಕ್ಕೆ ಸತೀಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣ ಅವಿರೋಧ ಆಯ್ಕೆ ಘೋಷಿಸಿದರು. ಈ ವೇಳೆ ಅಧ್ಯಕ್ಷೆ ಸುಲೋಚನಾ ಸೇರಿದಂತೆ ನಿಕಟಪೂರ್ವ ಉಪಾಧ್ಯಕ್ಷ ಶೇಖರ್, ಸದಸ್ಯರಾದ ಎಸ್.ಬಸವರಾಜು, ರತ್ನಮ್ಮ ಉಮಾ, ಚಂದ್ರಶೇಖರ್, ಪದ್ಮ, ಎಂ.ಕಂಬಯ್ಯ, ಸರಸ್ವತಿ, ರಾಮ ನಂಜಯ್ಯ, ಅನಿತಾ, ಮಣಿಯಮ್ಮ ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ಉಪಾಧ್ಯಕ್ಷ ಸತೀಶ್ ಮಾತನಾಡಿ, ತಮ್ಮ ಆಯ್ಕೆಗೆ ಸಹಕರಿಸಿದ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಶಾಸಕ ಡಾ.ಯತೀಂದ್ರ ಅವರಿಗೆ ಕೃತಜ್ಞರಾಗಿದ್ದು, ಎಲ್ಲಾ ಸದಸ್ಯರ ಸಹಕಾರದೊಂದಿಗೆ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಈ ವೇಳೆ ತಿ.ನರಸೀಪುರ ಪುರಸಭಾಧ್ಯಕ್ಷ ಟಿಎಂ.ನಂಜುಂಡಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಪುರಸಭಾ ಸದಸ್ಯ ತುಂಬಲ ಪ್ರಕಾಶ್ ನೂತನ ಉಪಾಧ್ಯಕ್ಷರನ್ನು ಸನ್ಮಾನಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಅಂದಾನಿ, ಗ್ರಾಪಂ ಮಾಜಿ ಅಧ್ಯಕ್ಷ ಸಿದ್ದರಾಜು, ಹೊಸ ಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ನಾಗ ರಾಜು, ಮುಖಂಡರಾದ ಮಲ್ಲಿಕಾರ್ಜುನ, ಮಲ್ಲೇಶ್, ಸುರೇಶ್, ನಿಂಗಪ್ಪ, ಗುರುರಾಜ್, ಪಿಡಿಓ ಎಸ್.ಧನಂಜಯ, ಎಸ್‌ಡಿಎ ಮೂಗೂರು ಕುಮಾರ್, ಕಾರ್ಯದರ್ಶಿ ಪ್ರವೀಣ್ ಹಾಜರಿದ್ದರು.



ಕಂಪಲಾಪುರಕೊಪ್ಪಲು ಹಾಲಿನ ಡೇರಿಯಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ವೇಳೆ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಉಪಾಧ್ಯಕ್ಷೆ ಪುಟ್ಟಮ್ಮ, ಸಿಇಓ ಹೆಚ್.ಲೋಕೇಶ್, ನಿರ್ದೇಶಕರಾದ ಕೆ.ಗೋಪಾಲ್, ಚನ್ನೇಗೌಡ, ಚಂದ್ರು ಕುಮಾರ, ಹಾಲು ಪರೀಕ್ಷಕ ದೊಡ್ಡಣ್ಣ ಹಾಜರಿದ್ದರು.

ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯೊಂದಿಗೆ ಸಾಧನೆಗೆ ಮುಂದಾಗಿ

ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಶಿಕ್ಷಕ ಎನ್.ಪಿ.ಪರಶಿವಮೂರ್ತಿ ಸಲಹೆ



ನಂಜನಗೂಡು, ಡಿ.31– ಯಶಸ್ಸು ಕುಳಿತಲ್ಲಿಗೆ ಬರುವುದಿಲ್ಲ. ನಿರ್ದಿಷ್ಟ ಗುರಿ, ಉದ್ದೇಶ, ಅದಮ್ಯ ಛಲ, ಆತ್ಮವಿಶ್ವಾಸ, ಪ್ರಯತ್ನ, ಏಕಾಗ್ರತೆ, ಕಠಿಣ ಶ್ರಮದಿಂದ ಮಾತ್ರ ಲಭಿಸುತ್ತದೆ. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯೊಂದಿಗೆ ಸಾಧನೆಗೆ ಮುಂದಾಗಬೇಕು ಎಂದು ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಶಿಕ್ಷಕ ಎನ್.ಪಿ.ಪರಶಿವಮೂರ್ತಿ ತಿಳಿಸಿದರು.

ಸುತ್ತೂರು ಕ್ಷೇತ್ರದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠ ಇವರ ಸಂಯುಕ್ತಾಶ್ರಯದಲ್ಲಿ, ಮೈಸೂರಿನ ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್, ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಅವರು ಮಾತನಾಡಿದರು.

ಗುರಿ ಗೊತ್ತಾದರೆ, ಸಾಧಕರ ಶ್ರಮ ಗೊತ್ತಾಗುತ್ತದೆ. ಕಷ್ಟ ಎಲ್ಲರಿಗೂ ಬರುತ್ತದೆ. ಆದರೆ ಅದನ್ನು ಎದುರಿಸುವ ಮನಸ್ಥಿತಿ ಎಲ್ಲರಲ್ಲೂ ಇರುವುದಿಲ್ಲ. ಕಣ್ಣೀರಿಲ್ಲ ಎಂದರೆ ಕಣ್ಣುಗಳಿಗೆ ಬೆಲೆ ಇಲ್ಲ. ಧೈರ್ಯದಿಂದ ಮುನ್ನುಗ್ಗಿ ತಮಗೆ ಬಂದಿರುವ ಕಷ್ಟಗಳನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಯಶಸ್ಸು ಸಾಧಿಸಬೇಕು. ಇಂದಿನ ಸೋಲು ಮುಂದಿನ ಗೆಲುವಿಗೆ ಬುನಾದಿ. ಸೋತರೂ ಎದೆಗುಂದದೆ ಮತ್ತೆ ಪ್ರಯತ್ನಿಸಬೇಕು. ಪ್ರಯತ್ನ ಗಟ್ಟಿಯಾಗಿದ್ದರೆ ಯಶಸ್ಸು ತಾನಾಗಿಯೇ ನಮ್ಮ ಹಿಂದೆ ಬರುತ್ತದೆ. ಡಾ.ಅಬ್ದುಲ್ ಕಲಾಂ ಹೇಳಿರುವಂತೆ "ನಿದ್ರೆಯಲ್ಲಿ ಕಾಣುವುದು ಕನಸಲ್ಲ, ನಿದ್ರೆಗೆಡಿಸುವಂತೆ ಮಾಡುವುದೇ ನಿಜವಾದ ಕನಸು", ದೇಹಕ್ಕೆ ನ್ಯೂನತೆ ಇದೆಯೇ ಹೊರತು ಮನಸ್ಸಿಗಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿದು ಯಶಸ್ಸಿನ ಕಡೆ ಮುನ್ನುಗ್ಗಬೇಕು. ಇಂದಿನ ಸೋಲಿನ ಅವಮಾನ ಮುಂದಿನ ಗೆಲುವಿನ ಸನ್ಮಾನ ಎಂಬುದನ್ನು ಮರೆಯಬಾರದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಎಸ್.ಜಿ.ಶ್ರೀಕಂಠಸ್ವಾಮಿ, ವಸ್ತುವಿಗೆ ಬೆಲೆ ಕಟ್ಟಬಹುದು. ಆದರೆ ಸೇವೆಗೆ ಬೆಲೆ ಕಟ್ಟಲಾಗದು. ನಿಮ್ಮ ಕೆಲಸ, ಕಾರ್ಯಗಳನ್ನು ಕಂಡು ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದರಿಂದ ನನಗೆ ತುಂಬಾ ಸಂತೋಷವಾಯಿತು. ವಿದ್ಯಾರ್ಥಿಗಳಿಗೆ ಕನಸುಗಳಿರಬೇಕು. ಅದಕ್ಕೆ ತಕ್ಕಂತೆ ಕಠಿಣ ಶ್ರಮ ಪಡಬೇಕು. ಹಾಗಾದರೆ ಮಾತ್ರ ಯಶಸ್ಸು ನಿಮ್ಮದಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೀತಮ್, ಪ್ರಣಿತಿ, ಭೂಮಿಕಾ, ಮಧು, ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.35ಕ್ಕೆ, ವೇದ (ಕ): ಮ.1ಕ್ಕೆ, ಸಂ.6.55ಕ್ಕೆ, ರಾ.9.55ಕ್ಕೆ, ಕಾಂತಾರ (ಕ): ಸಂ.4ಕ್ಕೆ.

ಸ್ಕ್ರೀನ್ 2 ಮೇಡ್ ಇನ್ ಬೆಂಗಳೂರು (ಕ): ಬೆ.10.40ಕ್ಕೆ, ಡ್ರೈವರ್ ಜಮುನಾ (ತ): ಮ.2.05ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಸಂ.4.30ಕ್ಕೆ, ಲಕ್ಕಿ ಲಕ್ಷ್ಮಣ್ (ತೆ): ರಾ.7ಕ್ಕೆ, ಓ ಮೈ ಗೋಸ್ಟ್ (ತ): ರಾ.9.55ಕ್ಕೆ.

ಸ್ಕ್ರೀನ್ 3 ಸರ್ಕಸ್ (ಹಿಂ): ಬೆ.11.05ಕ್ಕೆ, ಪದವಿ ಪೂರ್ವ (ಕ): ಮ.1.55ಕ್ಕೆ, ನಾನು ಅದು ಮತ್ತು ಸರೋಜ (ಕ): ಸಂ.4.30ಕ್ಕೆ, ರಾಂಗಿ (ತ): ರಾ.7.10ಕ್ಕೆ, ಟಾಪ್ ಗೇರ್ (ತೆ): ರಾ.10.15ಕ್ಕೆ.

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.50ಕ್ಕೆ, ಮ.2.30ಕ್ಕೆ, ಸಂ.6.10ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಒನ್ಸ್ ಅಪಾನ್ ಟೈಂ ಇನ್ ಇಮಾಲಿಗುಡ್ಡ (ಕ): ಬೆ.10.05ಕ್ಕೆ, ವೇದ (ಕ): ಮ.12.40ಕ್ಕೆ, ಮ.3.50ಕ್ಕೆ, ರಾ.7ಕ್ಕೆ, ರಾ.10.10ಕ್ಕೆ,

ಸ್ಕ್ರೀನ್ 2 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.11ಕ್ಕೆ, ಮ.2.50ಕ್ಕೆ, ಸಂ.6.40ಕ್ಕೆ, ರಾ.10.30ಕ್ಕೆ,

ಸ್ಕ್ರೀನ್ 3 ವೇದ (ಕ): ಬೆ.9.50ಕ್ಕೆ, ಆಲ್ಫಾ (ಕ): ಮ.3.05ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.40ಕ್ಕೆ, ರಾ.9.30ಕ್ಕೆ,

ಸ್ಕ್ರೀನ್ 4 ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10ಕ್ಕೆ, ನಾನು ಅದು ಮತ್ತು ಸರೋಜ (ಕ): ಮ.1.40ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.4.20ಕ್ಕೆ, ಲವ್ ಸ್ಟೋರಿ 1998 (ಕ): ರಾ.7.55ಕ್ಕೆ, ಸೆಂಬಿ (ತ): ರಾ.10.20ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.9ಕ್ಕೆ, ಮ.3.30ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಸರ್ಕಸ್ (ಹಿಂ): ಬೆ.9.55ಕ್ಕೆ, ಮ.12.20ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ, ಧಮಾಕ (ತೆ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, 18 ಪೇಜಸ್ (ತೆ): ಮ.1ಕ್ಕೆ, ರಾ.7ಕ್ಕೆ, ವಿಶಾಲ್ ಇನ್ ಲಾಠಿಚಾರ್ಜ್ (ತ): ಬೆ.10.22ಕ್ಕೆ, ಸಂ.4.20ಕ್ಕೆ, ರಾ.9.45ಕ್ಕೆ, ಕನೆಕ್ಟ್ (ತ): ರಾ.7.25ಕ್ಕೆ, ಕಾಪ (ಮ): ಮ.1.25ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವೇದ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಂಗ್‌ಡಂ ಆಫ್ ದಿ ಡೈನೋಸರಸ್ (ಇಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವೇದ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟೆಂಪರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಲವ್ ಸ್ಟೋರಿ 1998 (ಕ)	4 ಪ್ರದರ್ಶನಗಳು
ಸಂಗಂ	
ಜಮಾಲಿಗುಡ್ಡ (ಕ)	4 ಪ್ರದರ್ಶನಗಳು
ಲಿಡೋ	
ನಾನು ಅದು ಮತ್ತು ಸರೋಜ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವೇದ (ಕ)	4 ಪ್ರದರ್ಶನಗಳು
ಪ್ರಭಾ	
ಕಾಂತಾರ (ಕ)	4 ಪ್ರದರ್ಶನಗಳು



ಮಾಜಿ ಶಾಸಕ ಡಾ.ಎನ್.ಎಲ್.ಭಾರತಿ ಶಂಕರ್ ಅಭಿಮಾನಿ ಬಳಗದ 2023ರ ದಿನದರ್ಶಿಕೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಿಡುಗಡೆಗೊಳಿಸಿದರು. ಈ ವೇಳೆ ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಬಸವರಾಜು, ಆಲಗೂಡು ಪಿಎಸಿಎಸ್ ಅಧ್ಯಕ್ಷ ಬಿ.ವೀರಭದ್ರಪ್ಪ, ತಾಪಂ ಮಾಜಿ ಸದಸ್ಯ ಕುಮಾರ್, ಜಿಲ್ಲಾ ಪ್ರಕೋಷ್ಠ ಸಂಚಾಲಕ ದಯಾನಂದ ಪಟೇಲ್, ಮೂಗೂರು ಮಾದಪ್ಪ, ಕಾಮಗೆರೆ ಶಿವಕುಮಾರ್, ಬಿದರಗೋಡು ಗಿರೀಶ್‌ಮೂರ್ತಿ ಇದ್ದರು.

ಮರಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಮಲ್ಕುಂಡಿ, ಡಿ.31– ಹಸುವಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ



ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಶನಿವಾರ ಬೆಳಗ್ಗೆ ಇಲ್ಲಿಗೆ ಸಮೀಪದ ಕಾರ್ಯ ಗ್ರಾಮದ ಬಳಿ ನಡೆದಿದೆ.

ಹುಲ್ಲಹಳ್ಳಿ ಗ್ರಾಮದ ನಿವಾಸಿ ಅಫ್ರೋಜ್ ಎಂಬುವರ ಪುತ್ರ ಅರ್ಬಾಜ್ ಖಾನ್ (20) ಸಾವನ್ನಪ್ಪಿದವರು. ಈತ ಹೆಡಿಯಾಲ ಗ್ರಾಮದಲ್ಲಿ ಬೈಕ್ ಮೆಕ್ಯಾನಿಕ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ನಿತ್ಯ ಹುಲ್ಲಹಳ್ಳಿ ಗ್ರಾಮದಿಂದ ಹೆಡಿಯಾಲ ಗ್ರಾಮಕ್ಕೆ ಹೋಗಿ ಬರುತ್ತಿದ್ದ ಎನ್ನಲಾಗಿದೆ. ಶನಿವಾರ ಬೆಳಗ್ಗೆ ಎಂದಿನಂತೆ ತನ್ನ ಪಲ್ಸರ್ ಬೈಕ್‌ನಲ್ಲಿ ಹೆಡಿಯಾಲಕ್ಕೆ ತೆರಳುವ ಮಾರ್ಗಮಧ್ಯೆ ಕಾರ್ಯ ಗ್ರಾಮದ ಬಳಿ ಅಡ್ಡ ಬಂದ ಹಸುವಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ನಿಯಂತ್ರಣ ಕಳೆದುಕೊಂಡ ಬೈಕ್ ರಸ್ತೆ ಬದಿಯಲ್ಲಿದ್ದ ಮರಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಅರ್ಬಾಜ್ ಖಾನ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆ ಎಸ್‌ಐ ಕೃಷ್ಣಕಾಂತಕೋಳಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಉಚಿತ ದಂತ ತಪಾಸಣಾ ಶಿಬಿರ

ಹುಣಸೂರು, ಡಿ.31– ಹುಣಸೂರು ನಗರ ಬಿಜೆಪಿ ಉಪಾಧ್ಯಕ್ಷ, ಗೋಂದಳಿ ಸಮಾಜದ ರಾಜ್ಯ ನಿರ್ದೇಶಕ ಆರ್.ರಾಕೇಶ್‌ರಾವ್ ಹುಟ್ಟುಹಬ್ಬದ ಅಂಗವಾಗಿ ಜ.4ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ನಗರದ ರಂಗನಾಥ ಬಡಾವಣೆ ಸರ್ಕಾರಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಯಲ್ಲಿ ಉಚಿತ ದಂತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ: 9611818686 ಸಂಪರ್ಕಿಸಿ.



ಹೊಸ ವರ್ಷದ ಹಾರ್ದಿಕ ಶುಭಾಶಯಗಳು
ನಮ್ಮ ಬಾವನವರಾದ
ಶ್ರೀ ಯಶಸ್ವಿನಿ ಸೋಮಶೇಖರ್
(ಮೂಡಾ ಅಧ್ಯಕ್ಷರು)
ಇವರಿಗೆ ತಾಯಿ ಚಾಮುಂಡೇಶ್ವರಿ ಇನ್ನೂ ಹೆಚ್ಚಿನ ಆಯಸ್ಸು, ಆರೋಗ್ಯ ಮತ್ತು ಅಧಿಕಾರ ನೀಡಲೆಂದು ಹಾರೈಸುವ
ಪಿ. ಲೋಕೇಶ್ & ಜಗದೀಶ್
ಮತ್ತು ಕುಟುಂಬಸ್ಥರು, ವೀಣಾ ಸ್ಟೋರ್ ಮಾಲೀಕರು, ಮೈಸೂರು



ಡಿ.ಟಿ. ಪ್ರಕಾಶ್ ರವರಿಗೆ ಹುಟ್ಟುಹಬ್ಬದ ಶುಭಾಶಯಗಳು



ನಾಡಿನ ಸಮಸ್ತ ಜನತೆಗೆ
ಹೊಸ ವರ್ಷದ ಹಾರ್ದಿಕ ಶುಭಾಶಯಗಳು
HAPPY NEW YEAR
2023
ಹೊಸ ಕಾಮನಕೊಪ್ಪಲು ಸ್ವಾಮಿ
ಕಾಂಗ್ರೆಸ್ ಮುಖಂಡರು
ಇಲವಾಲ ಜಿಲ್ಲಾ ಪಂಚಾಯತ್ ಆಕಾಂಕ್ಷಿ
ಸ್ವಾಗತಕೋರುವವರು : ಮೈಸೂರು ತಾಲ್ಲೂಕು ಕುರುಬರ ಸಂಘದ
ಪದಾಧಿಕಾರಿಗಳು ಹಾಗೂ ನಿರ್ದೇಶಕರುಗಳು, ಮೈಸೂರು